ಬುಧವಾರ, ನವೆಂಬರ್ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 305 | ಪುಟ 16
prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗುರುವಿಗೆ ನಮನ



ಗುರುನಾನಕ್ ಜಯಂತಿಯ ಅಂಗವಾಗಿ ಅಮೃತಸರದ ಸ್ವರ್ಣ ಮಂದಿರದಲ್ಲಿ ಮಂಗಳವಾರ ನಡೆದ 'ನಗರ್ ಕೀರ್ತನ್' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಗುವೊಂದು ಭಕ್ತಿಯಿಂದ ನಮಿಸಿದ ಪರಿ

ಅಗ್ರಸ್ಥಾನಕ್ಕೆ ವೋಲ್ವಾರ್ಟ್



ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ನಾಯಕಿ ಲಾರಾ ವೋಲ್ವಾರ್ಟ್ ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ

ಸೆನ್ಸೆಕ್ಸ್ 83,459 | ನಿಫ್ಟಿ 25,597 | $/₹ 88.70 | ಚಿನ್ನ (Std. 10g) ₹1,25,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,56,500 (ಬೆಂಗಳೂರು)

ತ್ವರಿತ ನ್ಯಾಯಕ್ಕೆ 'ಎಐ' ತಂತ್ರಜ್ಞಾನ

ಜಿಲ್ಲಾ ನ್ಯಾಯಾಂಗ ವ್ಯವಸ್ಥೆಯ ಸುಧಾರಣೆಗೆ ಹೊಸ ಕಾಯ್ದೆ • ಮಸೂದೆಯ ಕರಡು ಸಿದ್ಧ

• ರಾಜೇಶ್ ರೈ ಚಟ್ಲ

ಬೆಂಗಳೂರು: ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನ್ಯಾಯಾಲಯಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆ, ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ತ್ವರಿತ ನ್ಯಾಯಾಲಯ ಸ್ಥಾಪಿಸುವುದೂ ಸೇರಿದಂತೆ ಜಿಲ್ಲಾ ನ್ಯಾಯಾಂಗಕ್ಕೆ ಸಮಗ್ರ ಸುಧಾರಣೆ ತರಲು ಸರ್ಕಾರ ಮುಂದಡಿ ಇಟ್ಟಿದೆ.

ಈ ಉದ್ದೇಶದಿಂದ 'ಕರ್ನಾಟಕ ಜಿಲ್ಲಾ ನ್ಯಾಯಾಂಗ ಸುಧಾರಣೆಗಳ ಮಸೂದೆ–2025'ರ ಕರಡು ಸಿದ್ಧಗೊಂಡಿದೆ. ಬೆಳಗಾವಿ ಅಧಿವೇಶನದಲ್ಲಿ ಈ ಮಸೂದೆ ಮಂಡಿಸುವ ತಯಾರಿಯೂ ನಡೆದಿದೆ.

ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ವೇಗ, ನಿಖರತೆ, ಪಾರದರ್ಶಕತೆ ಮತ್ತು ವಸ್ತುನಿಷ್ಠತೆ ಹೆಚ್ಚಿಸಲು ಕೃತಕ ಬುದ್ಧಿಮತ್ತೆ (ಎಐ) ಸಾಧನ ಬಳಸಬೇಕು ಮತ್ತು ಡಿಜಿಟಲ್ ತಂತ್ರಜ್ಞಾನಗಳನ್ನು ಪರಿಚಯಿಸಬೇಕು. ಆ ಮೂಲಕ ಜಿಲ್ಲಾ ನ್ಯಾಯಾಂಗದಲ್ಲಿ ನ್ಯಾಯದಾನ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸಲು ರಾಜ್ಯ ಸರ್ಕಾರ ಮತ್ತು ಹೈಕೋರ್ಟ್ ಸಮನ್ವಯದಿಂದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಪ್ರಸ್ತಾವ ಮಸೂದೆಯಲ್ಲಿದೆ.

ಮಸೂದೆಯಲ್ಲಿ ಏನಿದೆ?: ರೈತರು, ನಿರುದ್ಯೋಗಿಗಳು, ಉದ್ಯೋಗ ವಂಚಿತರು, ಭೂ ವಿವಾದಗಳು, ಕೃಷಿ ಸಾಲಗಳು, ಬೆಳೆ ವಿಮೆ ಮತ್ತು ಹಿಡುವಳಿ ಸಮಸ್ಯೆಗಳು ಸೇರಿದಂತೆ ಕೃಷಿ ವಿವಾದಗಳನ್ನು ಒಳಗೊಂಡ ಸಿವಿಲ್ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವುದಕ್ಕೆ ಅನುಗುಣವಾಗಿ ಪ್ರತಿ ಜಿಲ್ಲೆಗೆ ಕನಿಷ್ಠ ಒಂದು 'ತ್ವರಿತ ನ್ಯಾಯಾಲಯ' ಸ್ಥಾಪಿಸಬೇಕು. ಈ ನ್ಯಾಯಾಲಯಗಳ ಮುಂದಿರುವ ಎಲ್ಲ ಪ್ರಕರಣಗಳಿಗೆ ಮಧ್ಯಸ್ಥಿಕೆ ಕೇಂದ್ರಗಳು, ಲೋಕ ಅದಾಲತ್‌ಗಳು ಅಥವಾ ಪರ್ಯಾಯ ವಿವಾದ ಪರಿಹಾರ ಕೇಂದ್ರಗಳ ಮೂಲಕ ಪೂರ್ವ ವಿಚಾರಣೆಯ ಮಧ್ಯಸ್ಥಿಕೆ ಕಡ್ಡಾಯವಾಗಿ ಮಾಡಬೇಕು.

ತ್ವರಿತ ನ್ಯಾಯಾಲಯಗಳ ಕಾರ್ಯಕ್ಷಮತೆಯ ಬಗ್ಗೆ ಜಿಲ್ಲಾ ನ್ಯಾಯಾಂಗ ಮೇಲ್ವಿಚಾರಣಾ ಸಮಿತಿಯು ತ್ರೈಮಾಸಿಕ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಬೇಕು. ಈ ನ್ಯಾಯಾಲಯಗಳ ಪೀಠಾಸೀನ ಅಧಿಕಾರಿಯು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದೊಂದಿಗೆ ಸಮನ್ವಯ ಸಾಧಿಸಿ, ರೈತರಿಗೆ, ನಿರುದ್ಯೋಗಿಗಳಿಗೆ ಮತ್ತು ಉದ್ಯೋಗ ವಂಚಿತರಿಗೆ ಕಾನೂನು ನೆರವಿನ ಲಭ್ಯತೆಯನ್ನು ಖಾತರಿಪಡಿಸಬೇಕು.

10 ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ಬಾಕಿ ಇರುವ ಪ್ರಕರಣಗಳನ್ನು (ವಿಶೇಷ ಕಾರಣಗಳಿಗಾಗಿ ಹೈಕೋರ್ಟ್ ನಿರ್ದೇಶನ ನೀಡದ ಹೊರತು) ಪ್ರಾದೇಶಿಕ ಮತ್ತು ವಿಷಯದ ಅಧಿಕಾರ ವ್ಯಾಪ್ತಿ ಹೊಂದಿರುವ ತ್ವರಿತ ನ್ಯಾಯಾಲಯಕ್ಕೆ ವರ್ಗಾಯಿಸಬೇಕು. ಐದು ಮತ್ತು ಹತ್ತು ವರ್ಷಗಳ ನಡುವೆ ಬಾಕಿ ಉಳಿದಿರುವ ಪ್ರಕರಣಗಳನ್ನು ಜಿಲ್ಲಾ ನ್ಯಾಯಾಧೀಶರ ಶಿಫಾರಸಿನ ಆಧಾರದಲ್ಲಿ ಅಥವಾ ಹೈಕೋರ್ಟ್ ನಿರ್ದೇಶನದ ಮೂಲಕ ತ್ವರಿತ ನ್ಯಾಯಾಲಯಕ್ಕೆ ವರ್ಗಾಯಿಸಬಹುದು. ಹೀಗೆ ವರ್ಗಾಯಿಸಿದ ಪ್ರತಿಯೊಂದು ಪ್ರಕರಣವನ್ನು ಸಾಧ್ಯವಾದಷ್ಟು ಮಟ್ಟಿಗೆ ವರ್ಗಾವಣೆಯಾದ ದಿನದಿಂದ 12 ತಿಂಗಳ ಒಳಗೆ ವಿಲೇವಾರಿ ಮಾಡಬೇಕು. ಈ ಬಗ್ಗೆ ಹೈಕೋರ್ಟ್‌ಗೆ ಪ್ರಗತಿ ವರದಿ ಸಲ್ಲಿಸಬೇಕು.

ಮೇಲ್ವಿಚಾರಣಾ ಸಮಿತಿ ರಚನೆ: ಪ್ರತಿ ಜಿಲ್ಲೆಯಲ್ಲಿ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ, ಇಬ್ಬರು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ವಕೀಲರ ಸಂಘದ ಒಬ್ಬ ಪ್ರತಿನಿಧಿಯನ್ನು ಒಳಗೊಂಡ 'ಜಿಲ್ಲಾ ನ್ಯಾಯಾಂಗ ಮೇಲ್ವಿಚಾರಣಾ ಸಮಿತಿ'ಯನ್ನು ಹೈಕೋರ್ಟ್ ಸ್ಥಾಪಿಸಬೇಕು ಎಂದೂ ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.

ಮಸೂದೆಯ ಪ್ರಮುಖ ಅಂಶಗಳು

- ಎಲ್ಲ ಜಿಲ್ಲಾ ನ್ಯಾಯಾಲಯಗಳು ಹೈಕೋರ್ಟ್‌ಗೆ ಸಂಯೋಜಿತವಾದ 'ಸಮಗ್ರ ಪ್ರಕರಣ ನಿರ್ವಹಣಾ ವ್ಯವಸ್ಥೆ' (ಐಸಿಎಂಎಸ್) ಜಾರಿಗೆ ತರಬೇಕು
- ಕಾಗದ ರಹಿತ ವ್ಯವಸ್ಥೆ ಮತ್ತು ಇ-ನ್ಯಾಯಾಲಯಗಳ ಮೂಲಕ ಪ್ರಕ್ರಿಯೆಗಳನ್ನು ನಡೆಸಬೇಕು
- ಪ್ರಕರಣದ ದತ್ತಾಂಶವನ್ನು ಗೋಪ್ಯತೆಯ ಸುರಕ್ಷತೆಗಳಿಗೆ ಒಳಪಟ್ಟು, ಆನ್‌ಲೈನ್ ಪೋರ್ಟಲ್ ಮೂಲಕ ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಬೇಕು
- ಪ್ರಕರಣಗಳ ಮುಂದೂಡಿಕೆಗೆ ಕೊಟ್ಟ ಕಾರಣ ಕ್ಷುಲ್ಲಕವೆಂದು ಕಂಡುಬಂದರೆ ನ್ಯಾಯಾಲಯಗಳು ಕನಿಷ್ಠ ₹ 5 ಸಾವಿರ ವೆಚ್ಚ ವಿಧಿಸಬಹುದು
- ಗಂಭೀರ ಉಲ್ಲಂಘನೆಗಳು ಸಾಬೀತಾದರೆ ಮಾತ್ರ ಮಧ್ಯಂತರ ತಡೆಯಾಜ್ಞೆ ಅಥವಾ ತಡೆಯಾಜ್ಞೆ ನೀಡಲಾಗುವುದು
- ಮಧ್ಯಂತರ ತಡೆಯಾಜ್ಞೆ ಅಥವಾ ತಡೆಯಾಜ್ಞೆ ವಿರುದ್ಧ 15 ದಿನಗಳೊಳಗೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು
- ಜಿಲ್ಲಾ ನ್ಯಾಯಾಂಗದ ನ್ಯಾಯಾಧೀಶರು ತಮ್ಮ ಆಸ್ತಿಯನ್ನು ವರ್ಷಕ್ಕೊಮ್ಮೆ ಘೋಷಣೆ ಮಾಡುವುದು ಕಡ್ಡಾಯ

'ಜಿಲ್ಲಾ ನ್ಯಾಯಾಂಗ' ಎಂದರೆ ಯಾವುದು?

ಪ್ರಧಾನ ಜಿಲ್ಲಾ ನ್ಯಾಯಾಧೀಶರು, ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಸಿವಿಲ್ ನ್ಯಾಯಾಧೀಶರು, ಮ್ಯಾಜಿಸ್ಟ್ರೇಟ್‌ಗಳು ಮತ್ತು ತ್ವರಿತ ನ್ಯಾಯಾಲಯಗಳು ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರುವ ನ್ಯಾಯಾಲಯಗಳನ್ನು ಒಳಗೊಂಡ ವ್ಯವಸ್ಥೆಯೇ ಜಿಲ್ಲಾ ನ್ಯಾಯಾಂಗ.

'ಬಿಡಿಜೆಆರ್' ಸ್ಥಾಪನೆ ಪ್ರಸ್ತಾಪ



'ಜಿಲ್ಲಾ ನ್ಯಾಯಾಂಗ ಸುಧಾರಣೆಗಳ ಬ್ಯೂರೊ' (ಬಿಡಿಜೆಆರ್) ಎಂಬ ಶಾಶ್ವತ ಸಂಸ್ಥೆಯನ್ನು ಸರ್ಕಾರ ರಚಿಸಬೇಕು. ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅಥವಾ ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ಈ ಬ್ಯುರೊ ಅಧ್ಯಕ್ಷರಾಗಿರುತ್ತಾರೆ. ಹೈಕೋರ್ಟ್‌ನಿಂದ ನಾಮನಿರ್ದೇಶನಗೊಂಡ ಇಬ್ಬರು ಜಿಲ್ಲಾ ನ್ಯಾಯಾಧೀಶರು, ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಒಬ್ಬ ಪ್ರತಿನಿಧಿ, ಮೂವರು ಕಾನೂನು ತಜ್ಞರು ಅಥವಾ ನ್ಯಾಯಾಂಗ ಆಡಳಿತದ ತಜ್ಞರು ಇದರ ಸದಸ್ಯರು. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಶ್ರೇಣಿಯವರು ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ. ಈ ಬ್ಯುರೊ ಜಿಲ್ಲಾ ನ್ಯಾಯಾಂಗದಲ್ಲಿ ಸಮಗ್ರ ಸುಧಾರಣೆಗಾಗಿ ನೇಮಕಾತಿ, ತರಬೇತಿ, ಮೂಲಸೌಕರ್ಯ, ಪ್ರಕರಣಗಳ ನಿರ್ವಹಣೆ ಮತ್ತು ಕಾರ್ಯಕ್ಷಮತೆಯ ಮೌಲ್ಯಮಾಪನದಲ್ಲಿ ಸುಧಾರಣೆಗಳನ್ನು ಪರಿಶೀಲಿಸಬೇಕು ಮತ್ತು ಶಿಫಾರಸು ಮಾಡಬೇಕು ಎಂದು ಕರಡು ಮಸೂದೆ ಹೇಳಿದೆ.



ಟನ್ ಕಬ್ಬಿಗೆ ₹3,500 ದರ ನೀಡಬೇಕು ಎಂದು ಆಗ್ರಹಿಸಿ, ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಗ್ರಾಮದ ಬಳಿ ಸಾವಿರಾರು ರೈತರು ಮಂಗಳವಾರವೂ ಧರಣಿ ನಡೆಸಿದರು

ಹಬ್ಬಿದ ರೈತರ ಹೋರಾಟ

7ನೇ ದಿನಕ್ಕೆ ಕಾಲಿಟ್ಟ ಮುಷ್ಕರ • ಬಿಜೆಪಿ ನಾಯಕರ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಟನ್ ಕಬ್ಬಿಗೆ ₹3,500 ದರ ನೀಡಬೇಕು ಎಂದು ಆಗ್ರಹಿಸಿ ರೈತರು ಆರಂಭಿಸಿರುವ ಹೋರಾಟ ಮಂಗಳವಾರ ತೀವ್ರ ಸ್ವರೂಪ ಪಡೆಯಿತು. ರಸ್ತೆ ತಡೆ, ಪಾದಯಾತ್ರೆ, ಉಪವಾಸ ನಿರಶನ, ಬಂದ್ ಸೇರಿ ವಿವಿಧ ರೀತಿಯಲ್ಲಿ ಜನರು ರೈತರ ಆಂದೋಲನಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್ ಬಳಿ ನಡೆದಿರುವ ರೈತರ ಧರಣಿ ಏಳನೇ ದಿನಕ್ಕೆ ಕಾಲಿಟ್ಟಿತು. ಮಂಗಳವಾರವೂ ಸಾವಿರಾರು ರೈತರು ಒಂದೆಡೆ ಸೇರಿದರು. ಇದೇ ರಾಜ್ಯ ಹೆದ್ದಾರಿಯ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಕಬ್ಬು ಸಾಗಣೆ ವಾಹನಗಳು ಸಂಚರಿಸುತ್ತವೆ. ರೈತರು ಆರು ದಿನಗಳಿಂದ ಈ ಮಾರ್ಗವನ್ನು ಸಂಪೂರ್ಣ ಬಂದ್ ಮಾಡಿದ್ದಾರೆ. ಆಂಬುಲೆನ್ಸ್ ಬಿಟ್ಟರೆ ಯಾವುದೇ ವಾಹನಕ್ಕೂ ಅವಕಾಶ ನೀಡಿಲ್ಲ.

ಟನ್‌ಗೆ ₹3,500ಕ್ಕಿಂತ ಒಂದು ರೂಪಾಯಿ ಕಡಿಮೆ ಘೋಷಿಸಿದರೂ ಒಪ್ಪುವುದಿಲ್ಲ. ರಾಜ್ಯ ಸರ್ಕಾರ ದರ ನಿಗದಿ ವಿಚಾರದಲ್ಲಿ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲವಾದರೆ ಈ ವರ್ಷದ ಕಬ್ಬು ನುರಿಸುವ ಹಂಗಾಮು ಆರಂಭವಾಗುವುದಕ್ಕೆ ಬಿಡುವುದೇ ಇಲ್ಲ ಎಂದು ರೈತರು ಪಟ್ಟು ಹಿಡಿದಿದ್ದಾರೆ.

▶10

ಹತ್ತಿರ ಸುಳಿಯದ ಸಚಿವರು, ಶಾಸಕರು

'ಗುರ್ಲಾಪುರ ಕ್ರಾಸ್ ಬಳಿ ರೈತರು ಧರಣಿ ಕುಳಿತು ವಾರ ಗತಿಸಿದೆ. ಜಿಲ್ಲೆಯ ಸಚಿವರಾದ ಸತೀಶ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳಕರ ಬಂದಿಲ್ಲ. ದುರ್ಯೋಧನ ಐಹೊಳೆ ಹೊರತುಪಡಿಸಿ ಬೇರೆ ಶಾಸಕರೂ ಸುಳಿದಿಲ್ಲ' ಎಂದು ರೈತರು ಆಕ್ರೋಶ ಹೊರಹಾಕಿದರು. 'ಸಚಿವರು, ಶಾಸಕರು, ರಾಜಕಾರಣಿಗಳೇ ಕಾರ್ಖಾನೆಗಳ ಮಾಲೀಕರಾಗಿದ್ದಾರೆ. ಹೀಗಾಗಿ, ರೈತರು ಸತ್ತರೂ ಚಿಂತೆಯಿಲ್ಲ ಎಂಬಂತಿದೆ. ಸರ್ಕಾರ ಇದನ್ನು ಗಮನಿಸಬೇಕು' ಎಂದು ಭಾರತೀಯ ಕೃಷಿಕ ಸಮಾಜ (ಸಂಯುಕ್ತ)ದ ಅಧ್ಯಕ್ಷ ಸಿದಗೌಡ ಮೋದಗಿ ಆಗ್ರಹಿಸಿದರು.

'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ನಮ್ಮದೇ ಕಬ್ಬಿಗೆ ಮಹಾರಾಷ್ಟ್ರದಲ್ಲಿ ₹3,410 ದರ ನೀಡಲಾಗುತ್ತಿದೆ. ಇಲ್ಲಿ ಕಾರ್ಖಾನೆಗಳು ₹3,010 ನಿಗದಿಸಿವೆ. ಕಾರ್ಖಾನೆಗಳು ಪ್ರತಿ ವರ್ಷ ಲಾಭ ಹೆಚ್ಚಿಸಿಕೊಳ್ಳುತ್ತಲಿವೆ. ದಶಕದಿಂದ ರೈತರನ್ನು ಶೋಷಿಸುತ್ತಿವೆ. ಕಬ್ಬು ನಿಯಂತ್ರಣ ಮಂಡಳಿಗೆ ದರ ಹೆಚ್ಚಿಸುವ ಅಧಿಕಾರವಿದೆ. ಆದರೆ, ರಾಜಕಾರಣಿಗಳು ಅದನ್ನೂ ಹಲ್ಲಿಲ್ಲದ ಹಾವಿನಂತೆ ಮಾಡಿದ್ದಾರೆ' ಎಂದೂ ಆಕ್ರೋಶ ಹೊರಹಾಕಿದರು.

30 ಲಕ್ಷ ಯುವಜನರಿಗೆ ಕೌಶಲ ತರಬೇತಿ ಗುರಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಸಂಡೂರಿನಲ್ಲಿ ಕೌಶಲ ವಿ.ವಿ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಕೌಶಲ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಮಂಗಳವಾರ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಆಯೋಜಿಸಿದ್ದ ಮೂರು ದಿನಗಳ 'ಬೆಂಗಳೂರು ಕೌಶಲ ಶೃಂಗಸಭೆ'ಗೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದ ಜನಸಂಖ್ಯೆಯ ಶೇಕಡ 60ಕ್ಕಿಂತ ಹೆಚ್ಚು ಜನರು 35 ವರ್ಷದ ಒಳಗೆ ಇದ್ದಾರೆ. ಯುವಪೀಳಿಗೆಯನ್ನು ಸರಿಯಾದ ಕೌಶಲ ಮತ್ತು ಆತ್ಮವಿಶ್ವಾಸದಿಂದ ಸಜ್ಜುಗೊಳಿಸಬೇಕಿದೆ. ನವೋದ್ಯಮ ರಾಜಧಾನಿಯಾಗಿ ರೂಪಾಂತರಗೊಂಡಿರುವ ಬೆಂಗಳೂರು ನಗರ, ಈಗ ಭಾರತದ ಕೌಶಲ ರಾಜಧಾನಿ ಆಗಿರುವುದು ಹೆಮ್ಮೆ ಎಂದರು.

'ಬಜೆಟ್‌ನಲ್ಲಿ ಘೋಷಿಸಿದ್ದ ಕರ್ನಾಟಕ ಕೌಶಲಾಭಿವೃದ್ಧಿ ನೀತಿ 2025-32 ಅನ್ನು ಕೌಶಲ ಶೃಂಗಸಭೆ–2025ರ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತಿದೆ. ಏಳು ವರ್ಷದ ಕಾರ್ಯತಂತ್ರದ ನೀಲನಕ್ಷೆಗೆ ₹4,432 ಕೋಟಿ ಅನುದಾನ ನೀಡಿ, ರಾಜ್ಯವನ್ನು ಕೌಶಲಭರಿತ ಹಾಗೂ ಭವಿಷ್ಯದ ಸವಾಲುಗಳಿಗೆ ಸನ್ನದ್ಧವಾಗಿಸುವ ಹಾಗೂ ಕಾರ್ಮಿಕ ಶಕ್ತಿಯ ಜಾಗತಿಕ ಕೇಂದ್ರವನ್ನಾಗಿ ರೂಪಿಸುವ ಉದ್ದೇಶವಿದೆ' ಎಂದು ವಿವರಿಸಿದರು.

▶6



ಮಾರಿಷಸ್‌ನ ಕೈಗಾರಿಕಾ ಸಚಿವ ಮುಹಮ್ಮದ್ ರೆಜಾ ಖಾಸ್ಸಂ ಉತೀಮ್ ಅವರಿಗೆ ಸಿ.ಎಂ ಸಿದ್ದರಾಮಯ್ಯ ಹಸ್ತಲಾಘವ ಮಾಡಿದರು. ಡಾ. ಶರಣ ಪ್ರಕಾಶ ಪಾಟೀಲ ಮತ್ತು ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಮಾಜಿ ಸಚಿವ ಮೇಟಿ ನಿಧನ

ಪ್ರಜಾವಾಣಿ ವಾರ್ತೆ



ಬಾಗಲಕೋಟೆ: ಶಾಸಕ ಎಚ್.ವೈ.ಮೇಟಿ (80) ಮಂಗಳವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ.

'ಬುಧವಾರ ಬೆಳಿಗ್ಗೆ 6 ರಿಂದ 10ರವರೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು' ಎಂದು ಕುಟುಂಬದ ಮೂಲಗಳು ತಿಳಿಸಿವೆ.

▶6

ರೈಲು ಅಪಘಾತ: ಎಂಟು ಸಾವು

ಬಿಲಾಸ್‌ಪುರ (ಪಿಟಿಐ): ಛತ್ತೀಸಗಢದ ಬಿಲಾಸ್‌ಪುರ ನಿಲ್ದಾಣದ ಬಳಿ ಪ್ರಯಾಣಿಕ ರೈಲೊಂದು ಸರಕು ಸಾಗಣೆ ರೈಲಿಗೆ ಡಿಕ್ಕಿ ಹೊಡೆದ ಪರಿಣಾಮ ಎಂಟು ಮಂದಿ ಮೃತಪಟ್ಟಿದ್ದು, 14 ಜನರು ಗಾಯಗೊಂಡಿದ್ದಾರೆ.

'ಮೆಮು' ಪ್ರಯಾಣಿಕ ರೈಲು ಕೊರಬಾ ಜಿಲ್ಲೆಯ ಗೆವ್ರಾದಿಂದ ಬಿಲಾಸ್‌ಪುರಕ್ಕೆ ಹೋಗುತ್ತಿದ್ದಾಗ ಮಂಗಳವಾರ ಸಂಜೆ 4 ಗಂಟೆಗೆ ಈ ಘಟನೆ ನಡೆದಿದೆ. ರೈಲು ಗಟೊರಾ ಮತ್ತು ಬಿಲಾಸ್‌ಪುರ ನಿಲ್ದಾಣಗಳ ನಡುವೆ ಇದ್ದಾಗ ಸರಕು ಸಾಗಣೆ ರೈಲಿಗೆ ಹಿಂದಿನಿಂದ ಗುದ್ದಿದೆ ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರಯಾಣಿಕ ರೈಲು ಸಾಗುತ್ತಿದ್ದ ದಿಕ್ಕಿನಲ್ಲಿಯೇ ಸರಕು ಸಾಗಣೆ ರೈಲು ಸಹ ಸಾಗುತ್ತಿತ್ತು. ಡಿಕ್ಕಿಯ ರಭಸಕ್ಕೆ ಪ್ರಯಾಣಿಕ ರೈಲಿನ ಎಂಜಿನ್ ಮತ್ತು ಮುಂಭಾಗದ ಕೋಚ್, ಗೂಡ್ಸ್ ರೈಲಿನ ಮೇಲೆ ಹೋಗಿದೆ ಎಂದು ಅವರು ಹೇಳಿದರು.

'ಈ ದುರಂತದಲ್ಲಿ ಇಲ್ಲಿಯವರೆಗೆ ಏಳು ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಸಿಲುಕಿಕೊಂಡಿರುವ ಇಬ್ಬರನ್ನು ರಕ್ಷಿಸುವ ಕಾರ್ಯ ನಡೆಯುತ್ತಿದೆ' ಎಂದು ಬಿಲಾಸ್‌ಪುರದ ಜಿಲ್ಲಾಧಿಕಾರಿ ಸಂಜಯ್ ಅಗರ್ವಾಲ್ ಸುದ್ದಿಗಾರರಿಗೆ ತಿಳಿಸಿದರು. ಗಾಯಗೊಂಡ ಪ್ರಯಾಣಿಕರನ್ನು ಇಲ್ಲಿನ ಅಪೋಲೊ ಆಸ್ಪತ್ರೆ ಮತ್ತು ಛತ್ತೀಸಗಢ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಅವರಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಅವರು ಹೇಳಿದರು.

ಪರಿಹಾರ: ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹10 ಲಕ್ಷ, ಗಂಭೀರವಾಗಿ ಗಾಯಗೊಂಡವರಿಗೆ ₹5 ಲಕ್ಷ ಮತ್ತು ಸಣ್ಣಪುಟ್ಟ ಗಾಯಗಳಾದವರಿಗೆ ₹1 ಲಕ್ಷ ಪರಿಹಾರವನ್ನು ರೈಲ್ವೆ ಇಲಾಖೆ ಘೋಷಿಸಿದೆ

▶10

ಲಂಚ: ವರದಿ ಕೇಳಿದ ಮಾನವ ಹಕ್ಕು ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಪುತ್ರಿಯ ಅಂತ್ಯಸಂಸ್ಕಾರಕ್ಕೆ ಅಡಿಗಡಿಗೆ ಲಂಚ ಕೇಳಿರುವ ಪ್ರಕರಣದ ಬಗ್ಗೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ಎರಡು ವಾರಗಳಲ್ಲಿ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನೋಟಿಸ್ ಜಾರಿ ಮಾಡಿರುವ ಆಯೋಗವು, 'ಆಡಳಿತ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ಹಾಗೂ ಅಮಾನವೀಯತೆಗೆ ಈ ಘಟನೆ ಸಾಕ್ಷಿ. ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ' ಎಂದು ಹೇಳಿದೆ.

ಪುತ್ರಿಯ ಮೃತದೇಹ ಸಾಗಿಸಲು ಹಾಗೂ ಮರಣೋತ್ತರ ಪರೀಕ್ಷೆ ಸಂದರ್ಭದಲ್ಲಿ ಆಂಬುಲೆನ್ಸ್ ಚಾಲಕ, ಪೊಲೀಸರು, ಸ್ಮಶಾನದ ಸಿಬ್ಬಂದಿ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳು ಲಂಚಕ್ಕೆ ಬೇಡಿಕೆಯಿಟ್ಟ ಬಗೆಯನ್ನು ಭಾರತ್ ಪೆಟ್ರೋಲಿಯಂ ನಿಗಮದ ನಿವೃತ್ತ ಸಿಎಫ್‌ಒ ಕೆ.ಶಿವಕುಮಾರ್ ಅವರು 'ಲಿಂಕ್ಡ್‌ಇನ್'ನಲ್ಲಿ ಹೇಳಿಕೊಂಡಿದ್ದರು.

'ಆಹಾರ ಸುರಕ್ಷತೆಗೆ ಮಾನದಂಡ ರೂಪಿಸಿ'

ಹೋಟೆಲ್‌ಗಳ ಸಂಘದ ಅರ್ಜಿ • ಕಟ್ಟುನಿಟ್ಟಿನ ನಿಯಮಕ್ಕೆ ಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೀದಿ ಬದಿ ವ್ಯಾಪಾರಿಗಳು ಹಾಗೂ ದೊಡ್ಡ-ದೊಡ್ಡ ರೆಸ್ಟೋರೆಂಟ್‌ಗಳು ಆರೋಗ್ಯ ಮತ್ತು ಸುರಕ್ಷತಾ ಮಾನದಂಡ ನಿಯಮಗಳನ್ನು ಚಾಚೂ ತಪ್ಪದೆ ಅನುಸರಣೆ ಮಾಡುವ ಜತೆಗೆ, ನಿಯಮಗಳ ಕಟ್ಟುನಿಟ್ಟಿನ ಅನುಷ್ಠಾನದ ಬಗ್ಗೆ ನಿಗಾ ಇರಿಸುವುದಕ್ಕೆ ಸೂಕ್ತ ಕಾರ್ಯ ವಿಧಾನವೊಂದನ್ನು ರೂಪಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮಹತ್ವದ ನಿರ್ದೇಶನ ನೀಡಿದೆ.



'ಕರ್ನಾಟಕ ಪ್ರದೇಶ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಘ'ದ ಗೌರವ ಕಾರ್ಯದರ್ಶಿ ನಾಗರಾಜ ಧನ್ಯ ಮತ್ತು 'ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ'ದ ಅಧ್ಯಕ್ಷ ಕೆ.ಎನ್. ವಾಸುದೇವ ಅಡಿಗ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

▶6

ನ್ಯಾಯಪೀಠ ಹೇಳಿದ್ದೇನು?


'ಮಾನವನ ಆಹಾರ ಸೇವನೆ ಎಲ್ಲಿಯವರೆಗೆ ಜೀವಂತವಾಗಿರುತ್ತದೆಯೋ ಅಲ್ಲಿಯವರೆಗೂ ಸೇವಿಸುವ ಆಹಾರ ಆರೋಗ್ಯಕರವಾಗಿ ಇರಬೇಕು. ಆರೋಗ್ಯ ಕಾರಣಗಳಿಗಾಗಿ, ಪ್ರತಿಯೊಬ್ಬ ನಾಗರಿಕನೂ ತನ್ನ ಆಹಾರದ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ.

'ಭಾರತದಲ್ಲಿ ಬೀದಿ ಬದಿ ಆಹಾರಕ್ಕೆ ಅದರದೇ ಆದ ಸಾಂಸ್ಕೃತಿಕ ಆಯಾಮವಿದೆ. ರಸ್ತೆಬದಿಯ ಸಾಮಾನ್ಯ ಅಂಗಡಿಗಳಿಂದ ಹಿಡಿದು ಆಧುನಿಕ ರೆಸ್ಟೋರೆಂಟ್‌ಗಳವರೆಗೆ, ಭಾರತೀಯ ಪಾಕಪದ್ಧತಿಯ ವಿಶೇಷ ಘಮಲು ಚೈತನ್ಯಶೀಲ ಅಭಿವೃದ್ಧಿ ಉದ್ಯಮದ ಸಂಕೇತವಾಗಿದೆ. ಆದ್ದರಿಂದ, ಈ ಎಲ್ಲ ಉದ್ಯಮಗಳ ವಾರ್ಷಿಕ ವಹಿವಾಟನ್ನು ಆರ್ಥಿಕ ಮಾಪಕದ ಮೂಲಕ ಆಹಾರ ವ್ಯವಹಾರಗಳ ಪರವಾನಗಿ ಮತ್ತು ನೋಂದಣಿ ನಿಯಮಗಳು-2011ರಡಿ ಸಣ್ಣ ಮತ್ತು ದೊಡ್ಡ ರೆಸ್ಟೋರೆಂಟ್‌ಗಳೆಂದು ಪ್ರತ್ಯೇಕಿಸುತ್ತವೆ ಎಂಬುದು ಗಮನಾರ್ಹ.'

ತಪ್ಪು ಮಾಡದಿದ್ದರೂ ಅಮೆರಿಕದ ಜೈಲಿನಲ್ಲಿ 43 ವರ್ಷ ಕಳೆದ ಭಾರತ ಮೂಲದ ವ್ಯಕ್ತಿ

ವೇದಂ ಗಡಿಪಾರಿಗೆ ಕೋರ್ಟ್ ತಡೆ

ಫಿಲಡೆಲ್ಫಿಯಾ (ಅಮೆರಿಕ) (ಎಪಿ): ಯಾವುದೇ ತಪ್ಪು ಮಾಡದಿದ್ದರೂ, 43 ವರ್ಷಗಳನ್ನು ಅಮೆರಿಕದ ಜೈಲಿನಲ್ಲಿ ಕಳೆದಿರುವ ಭಾರತ ಮೂಲದ ವೇದಂ ಸುಬ್ರಹ್ಮಣ್ಯಂ ಅವರನ್ನು ಗಡಿಪಾರು ಮಾಡದಂತೆ ಅಮೆರಿಕದ ಎರಡು ನ್ಯಾಯಾಲಯಗಳು ವಲಸೆ ಅಧಿಕಾರಿಗಳಿಗೆ ಆದೇಶಿಸಿವೆ.



ಸುಬ್ರಹ್ಮಣ್ಯಂ ವೇದಂ

64 ವರ್ಷದ ವೇದಂ ಅವರನ್ನು ಲೂಸಿಯಾನದ ಅಲೆಕ್ಸಾಂಡ್ರಿಯಾದಲ್ಲಿರುವ ವಲಸಿಗರ ಬಂಧನ ಕೇಂದ್ರದಲ್ಲಿರಿಸಲಾಗಿದೆ. ಕೊಲೆ ಪ್ರಕರಣವೊಂದರಲ್ಲಿ ಬಂಧನಕ್ಕೆ ಒಳಗಾಗಿದ್ದ ಅವರು ನಾಲ್ಕು ದಶಕಗಳ ಕಾನೂನು ಹೋರಾಟದ ನಂತರ ತಿಂಗಳ ಹಿಂದೆಯಷ್ಟೇ ಜೈಲಿನಿಂದ ಬಿಡುಗಡೆಯಾಗಿದ್ದರು.

> **ಸುಬ್ರಹ್ಮಣ್ಯಂ ಅವರ ಗಡಿಪಾರು ಮತ್ತೊಂದು ಅನ್ಯಾಯ ಎಂದು ವಲಸೆ ಮೇಲ್ಮನವಿ ಮಂಡಳಿಯು ಒಪ್ಪಿಕೊಳ್ಳಲಿದೆ ಎಂದು ನಿರೀಕ್ಷಿಸಿದ್ದೇವೆ**
> **ಸರಸ್ವತಿ ವೇದಂ**
> ಸುಬ್ರಹ್ಮಣ್ಯಂ ವೇದಂ ಸಹೋದರಿ

ಕೊಲೆ ಪ್ರಕರಣದ ಶಿಕ್ಷೆ ರದ್ದುಗೊಂಡ ಕಾರಣ ಅಕ್ಟೋಬರ್ 3ರಂದು ಜೈಲಿನಿಂದ ಹೊರಬಂದಿದ್ದರು. ಆದರೆ, ಜೈಲುವಾಸದಿಂದ ಮುಕ್ತಿ ಪಡೆದ ಸಂತಸ ಹೆಚ್ಚು ಸಮಯ ಇರಲಿಲ್ಲ. ಬಂಧನದಿಂದ ಬಿಡುಗಡೆಯಾದ ತಕ್ಷಣವೇ ವಲಸೆ ಅಧಿಕಾರಿಗಳು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು.

ಅವರನ್ನು ಗಡಿಪಾರು ಮಾಡುವ ಸಿದ್ಧತೆ ನಡೆಯುತ್ತಿರುವಾಗಲೇ ಇದೀಗ ಎರಡು ನ್ಯಾಯಾಲಯಗಳು ತಡೆ ನೀಡಿವೆ. 'ವಲಸೆ ಮೇಲ್ಮನವಿ ಬ್ಯೂರೋ ಈ ಪ್ರಕರಣವನ್ನು ಪರಿಶೀಲಿಸಬೇಕೇ ಅಥವಾ ಬೇಡವೇ ಎಂದು ನಿರ್ಧರಿಸುವವರೆಗೆ ಗಡಿಪಾರಿಗೆ ತಡೆ ನೀಡಲಾಗಿದೆ' ಎಂದು ನ್ಯಾಯಾಧೀಶರು ತಿಳಿಸಿದರು.

ವೇದಂ 9 ತಿಂಗಳ ಮಗುವಾಗಿದ್ದಾಗ ತಂದೆ–ತಾಯಿಯೊಂದಿಗೆ ಕಾನೂನುಬದ್ಧವಾಗಿ ಅಮೆರಿಕ ಪ್ರವೇಶಿಸಿದ್ದರು. 1980ರಲ್ಲಿ ನಡೆದಿದ್ದ ಸ್ನೇಹಿತನ ಕೊಲೆ ಪ್ರಕರಣವೊಂದರಲ್ಲಿ ವೇದಂ ಹೆಸರನ್ನೂ ಪೊಲೀಸರು ಆರೋಪ ಪಟ್ಟಿಯಲ್ಲಿ ಸೇರಿಸಿದ್ದರು. ತಾವು ನಿರ್ದೋಷಿ ಎನ್ನುವುದನ್ನು ಸಾಬೀತುಪಡಿಸಲು ಅವರು ನಾಲ್ಕು ದಶಕಗಳ ಹೋರಾಟ ನಡೆಸಿದ್ದರು.

20 ವರ್ಷ ವಯಸ್ಸಾಗಿದ್ದಾಗ ವೇದಂ ಅವರ ಮೇಲೆ ಮಾದಕ ವಸ್ತು ಸಾಗಾಟದ ಆರೋಪದಲ್ಲಿ ಪ್ರಕರಣ ದಾಖಲಾಗಿತ್ತು.

▶10

ಕೊಲೆ ಪ್ರಕರಣ ಏನು?

ಸುಬ್ರಹ್ಮಣ್ಯಂ ವೇದಂ ಮತ್ತು ಥಾಮಸ್ ಕಿನ್ಸರ್ ಪೆನ್ಸಿಲ್ವೇನಿಯಾ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ 1980ರಲ್ಲಿ ಸಹಪಾಠಿಗಳಾಗಿದ್ದರು. ಕಿನ್ಸರ್ ಕೊಲೆ ಬೆನ್ನಲ್ಲೇ ವೇದಂ ಹೆಸರು ಕೇಳಿಬಂದಿತ್ತು. ಕೊನೆಯ ಬಾರಿ ಕಿನ್ಸರ್ ಅವರೊಂದಿಗೆ ಕಾಣಿಸಿಕೊಂಡಿದ್ದು ಸುಬ್ರಹ್ಮಣ್ಯಂ ಎಂದು ಹೇಳಿ ಪೊಲೀಸರು ಅವರನ್ನು ಬಂಧಿಸಿದ್ದರು.

ಈ ವರ್ಷದ ಆಗಸ್ಟ್ ತಿಂಗಳಲ್ಲಿ ವೇದಂ ಪರ ವಕೀಲರು, ಪ್ರಾಸಿಕ್ಯೂಟರ್‌ಗಳು ಎಂದೂ ಬಹಿರಂಗಪಡಿಸದ ಸಾಕ್ಷ್ಯವೊಂದನ್ನು ನ್ಯಾಯಾಲಯದ ಗಮನಕ್ಕೆ ತಂದರು. ಇದನ್ನು ಪರಿಶೀಲಿಸಿದ ನ್ಯಾಯಾಧೀಶರು, ವೇದಂ ಶಿಕ್ಷೆಯನ್ನು ರದ್ದುಗೊಳಿಸುವ ತೀರ್ಮಾನ ಪ್ರಕಟಿಸಿದ್ದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ




V BOSS
ವಿ ಬಾಸ್
ಸನ್ಮಾನ್ಯ ಶ್ರೀ
ಬಿ.ವೈ. ವಿಜಯೇಂದ್ರ
ರವರಿಗೆ
Nov 5th
ಜನ್ಮದಿನದ
ಶುಭಾಶಯಗಳು
ಶುಭ ಕೋರುವವರು
ಶ್ರೀ ಜಿ. ಮರಿಸ್ವಾಮಿ
ನಿಕಟಪೂರ್ವ ಜಿಲ್ಲಾ ಪಂಚಾಯಿತಿ
ಅಧ್ಯಕ್ಷರು, ಬೆಂಗಳೂರು ನಗರ
ಶ್ರೀ ಎಂ. ರುದ್ರೇಶ್
ಕೆಆರ್ಐಡಿಎಲ್
ಮಾಜಿ ಅಧ್ಯಕ್ಷರು
ಶ್ರೀ ಅಭಿಲಾಷ್
ಮರಿಸ್ವಾಮಿ
ಯುವ ಮುಖಂಡರು

ವಾಯು ಮಾರ್ಗ ಲಭ್ಯತೆ ಸವಾಲು

2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ • ಮೂರು ಸ್ಥಳಗಳಲ್ಲೂ ತೊಡಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಆಸುಪಾಸು ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಗುರುತಿಸಿರುವ ಮೂರು ಸ್ಥಳಗಳಲ್ಲೂ ವಿಮಾನ ಸಂಚಾರಕ್ಕೆ ಅಗತ್ಯವಾದ ಮಾರ್ಗಗಳ ಲಭ್ಯತೆಯೇ ದೊಡ್ಡ ಸವಾಲಾಗಿದೆ.

ಎರಡನೇ ವಿಮಾನ ನಿಲ್ದಾಣ ನಿರ್ಮಾಣ ಸಾಧ್ಯತೆಗಳ ಕುರಿತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳ ತಂಡ ಬೆಂಗಳೂರಿಗೆ ಭೇಟಿ ನೀಡಿ, ಉದ್ದೇಶಿತ ಸ್ಥಳಗಳಲ್ಲಿ ಪರಿಶೀಲನೆ ನಡೆಸಿತ್ತು. ಈ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ವಿಮಾನ ಸಂಚರಿಸುವ ವಾಯು ಮಾರ್ಗಗಳ ಕುರಿತು ವರದಿ ಪ್ರಮುಖವಾಗಿ ಉಲ್ಲೇಖಿಸಿದೆ. ರಾಜ್ಯ ಸರ್ಕಾರ ಸೂಚಿಸಿರುವ ಕನಕಪುರ ರಸ್ತೆಯ ಚೂಡಹಳ್ಳಿ–ಸೋಮನಹಳ್ಳಿ ಸುತ್ತಲಿನ ಹತ್ತಿರದ 4,800 ಎಕರೆ ಹಾಗೂ ಕರಿಯಾಳ ಕರೆನಹಳ್ಳಿ 5,000 ಎಕರೆ ಪ್ರದೇಶಗಳು, ನೆಲಮಂಗಲ– ಕುಣಿಗಲ್ ರಸ್ತೆಯ ಸೋಲದೇವನಹಳ್ಳಿ ಟೋಲ್ ಸಮೀಪದ 5,200 ಎಕರೆ ಪ್ರದೇಶಗಳಲ್ಲಿ ವಿಮಾನ ಸಂಚಾರಕ್ಕೆ ಅಗತ್ಯವಾದ ವಾಯು ಮಾರ್ಗಗಳು ಸೀಮಿತವಾಗಿವೆ. ಇದು ವಿಮಾನಗಳ ಸಂಚಾರಕ್ಕೆ ತೊಡಕಾಗುತ್ತದೆ ಎಂದು ಹೇಳಿದೆ.

ಬೆಂಗಳೂರು ಸುತ್ತಮುತ್ತ ಈಗಾಗಲೇ ಹಲವು ಸಂಸ್ಥೆಗಳು ತಮ್ಮ ವಾಯು ಮಾರ್ಗಗಳ ಮೇಲೆ ಹಕ್ಕು ಸ್ಥಾಪಿಸಿವೆ. ನಗರದ ಸುಮಾರು ಅರ್ಧದಷ್ಟು ಮಾರ್ಗಗಳು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ವ್ಯಾಪ್ತಿಯಲ್ಲಿವೆ. ಈ ಮಾರ್ಗಗಳ ಪ್ರದೇಶ ತಮಿಳುನಾಡಿನ ಕೊಯಮತ್ತೂರುವರೆಗೂ ವಿಸ್ತರಿಸಿದೆ. ಉತ್ತರ ಭಾಗದಲ್ಲಿ ಯಲಹಂಕ ವಾಯುಪಡೆಯ ವ್ಯಾಪ್ತಿ ಇದೆ. ಅದು ಹಾಸನದವರೆಗೂ ವಿಸ್ತರಿಸಿದೆ. ಹಾಗಾಗಿ, ಎರಡನೇ ವಿಮಾನ ನಿಲ್ದಾಣಕ್ಕೆ ಪ್ರತ್ಯೇಕ ವಾಯು ಮಾರ್ಗ ಮೀಸಲಿಡುವುದು ಅಗತ್ಯವಾಗಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.



ಕನಕಪುರ ಭಾಗದಲ್ಲಿ ಗುರುತಿಸಿರುವ ಸ್ಥಳಗಳಲ್ಲಿ ಉಪಕರಣ ಹಾರಾಟದ ಕಾರ್ಯವಿಧಾನಗಳು (ಐಎಫ್‌ಪಿ) ಎಚ್‌ಎಎಲ್ ವಿಮಾನನಿಲ್ದಾಣ ಮತ್ತು ಹೊಸೂರಿನ ವಿಮಾನನಿಲ್ದಾಣದ ಕಾರ್ಯ ವಿಧಾನಗಳ ಮೇಲೆ ಅವಲಂಬಿತವಾಗಿರುತ್ತವೆ. ನೆಲಮಂಗಲ ಭಾಗದ ಸ್ಥಳವು ಎಚ್‌ಎಎಲ್ ಹಾಗೂ ಯಲಹಂಕ ವಾಯುನೆಲೆ ಮೇಲೆ ಅವಲಂಬಿತವಾಗಿದೆ. ನೆಲಮಂಗಲ ವಿಮಾನ ನಿಲ್ದಾಣದ ಕಾರ್ಯಾಚರಣೆಗಳು ಈ ಮೂರು ವಿಮಾನ ನಿಲ್ದಾಣಗಳ ವಿಮಾನ ಸಂಚಾರಕ್ಕೂ ಅಡ್ಡಿಯಾಗುವ ಸಾಧ್ಯತೆ ಇದೆ ಎಂದು ವರದಿ ಹೇಳಿದೆ.

ಮೂರು ಸ್ಥಳಗಳಲ್ಲಿಯೂ ಕಠಿಣ ಹಾಗೂ ಮೃದು ಬಂಡೆಯ ಪ್ರದೇಶಗಳಿವೆ. ಕಾಮಗಾರಿ ಕೈಗೊಳ್ಳುವಾಗ ತಾಂತ್ರಿಕ ಸವಾಲುಗಳು ಎದುರಾಗಬಹುದು. ಕನಕಪುರ ಪ್ರದೇಶಗಳಲ್ಲಿ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಗುಡ್ಡಗಳು ಇವೆ. ನೆಲಮಂಗಲ ಪ್ರದೇಶದಲ್ಲಿ ಈ ಗುಡ್ಡಗಳು ಈಶಾನ್ಯ ಮತ್ತು ಪಶ್ಚಿಮ ಭಾಗಗಳಲ್ಲಿ ಇವೆ. ಇವು ವಿಮಾನ ಸಂಚಾರದ ಭದ್ರತೆಗೆ ಅಪಾಯವಾಗುತ್ತವೆಯೇ ಎಂಬುದನ್ನು ವಿಶ್ಲೇಷಿಸಬೇಕು. ಅಗತ್ಯವಿದ್ದರೆ ಗುಡ್ಡಗಳನ್ನು ಸಮತಟ್ಟು ಮಾಡಲು ಕ್ರಮ ಕೈಗೊಳ್ಳಬೇಕಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಸಮಸ್ಯೆಗೆ ಪರಿಹಾರ ಹುಡುಕುತ್ತೇವೆ'

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣದ ಸಮಯದಲ್ಲೂ ಇದೇ ರೀತಿಯ ಸಮಸ್ಯೆ ಎದುರಾಗಿತ್ತು. ಈಗಲೂ ಎಲ್ಲ ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತೇವೆ' ಎಂದು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

'ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಆ ಹೊತ್ತಿನಲ್ಲಿ ಸಣ್ಣ ಭಾಗದ ವಾಯು ಮಾರ್ಗ ಮೀಸಲಿಡಲಾಗಿತ್ತು. ಇದೇ ರೀತಿಯ ಕ್ರಮ ಹೊಸ ವಿಮಾನ ನಿಲ್ದಾಣಕ್ಕೂ ಅಗತ್ಯ. ಇದಕ್ಕೆಲ್ಲ ರಕ್ಷಣಾ ಇಲಾಖೆ ಸಹಕಾರ ಅಗತ್ಯವಿದ್ದು, ಸಮಯ ಮತ್ತು ಎತ್ತರದ ಆಧಾರದ ಮೇಲೆ ವಾಯುಮಾರ್ಗ ನಿಗದಿ ಮಾಡುವ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ' ಎಂದರು.

'ಅನುಮಾನಗಳಿಗೆ ಉತ್ತರ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಸುರಂಗ ರಸ್ತೆ ನಿರ್ಮಾಣ ಮಾಡುವ ಕುರಿತು ಸರ್ಕಾರ ಜನಾಭಿಪ್ರಾಯ ಕೇಳಿಲ್ಲ, ತಜ್ಞರ ವರದಿ ಪಡೆದಿಲ್ಲ, ಮಣ್ಣಿನ ಪರೀಕ್ಷೆ ನಡೆಸಿಲ್ಲ, ತರಾತುರಿಯಲ್ಲಿ ಟೆಂಡರ್ ಕರೆದಿದ್ದಾರೆ.



ವಿಶ್ವನಾಥ್

ಶಾಸಕರು, ತಜ್ಞರಿಗೆ ಪ್ರಾತ್ಯಕ್ಷಿಕೆ ತೋರಿಸಿ ಎಲ್ಲ ಅನುಮಾನಗಳನ್ನು ಬಗೆಹರಿಸಬೇಕಿತ್ತು' ಎಂದು ಬಿಜೆಪಿ ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದ್ದಾರೆ.

'ಯಾರ ಮಾತು ಕೇಳದೇ ಯೋಜನೆ ಮಾಡೇ ತೀರುತ್ತೇವೆ ಎಂದು ಹಟ ಹಿಡಿದು ಹೊರಟರೆ ಸಹಜವಾಗಿ ವಿರೋಧಿಸುತ್ತೇವೆ' ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ನಮ್ಮ ಪಕ್ಷದ ಮುಖಂಡರು ಕೆಲವು ವೈಜ್ಞಾನಿಕ ಅಂಶಗಳನ್ನು ಮುಂದಿಟ್ಟುಕೊಂಡು ಪ್ರಶ್ನಿಸಿದ್ದಾರೆ. ಸುರಂಗ ರಸ್ತೆ ಕನಿಷ್ಠ 60 ಅಡಿ ಆಳದಲ್ಲಿ ನಿರ್ಮಿಸಬೇಕಾಗುತ್ತದೆ. ಎಲ್ಲಿ ಗಟ್ಟಿ ಬಂಡೆ, ಮಣ್ಣು ಇದೆ. ಮೃದು ಬಂಡೆಗಳು ಎಲ್ಲೆಲ್ಲಿವೆ? ನೀರಿನ ಹರಿವು ಇದೆಯೇ? ಕಟ್ಟಡಗಳು ಸುರಕ್ಷಿತವಾಗಿರುತ್ತವೆಯೇ ಎಂಬುದನ್ನು ಪರಿಶೀಲನೆ ಮಾಡದೇ ಒಪ್ಪಿಗೆ ನೀಡಿರುವುದು ಅವ್ಯವಹಾರದ ಬಗ್ಗೆ ಸಂಶಯ ಮೂಡುವಂತೆ ಮಾಡಿದೆ' ಎಂದು ಅವರು ದೂರಿದರು.

'ಬೆಂಗಳೂರಿನಲ್ಲಿ ಅಭಿವೃದ್ಧಿಗೆ ನಾವು ವಿರೋಧ ಮಾಡುತ್ತಿಲ್ಲ. ಪ್ರಶ್ನೆಗಳನ್ನು ಕೇಳಿದರೆ ಹರಿಹಾಯುತ್ತೀರಿ. ತೇಜಸ್ವಿ ಸೂರ್ಯ ಅತಿ ಹೆಚ್ಚು ಮತಗಳನ್ನು ಗಳಿಸಿ ಎರಡು ಬಾರಿ ಸಂಸದರಾಗಿದ್ದಾರೆ. ಸಂಸತ್ತಿನ ವಿವಿಧ ಸಮಿತಿಗಳಲ್ಲಿ ಸದಸ್ಯರಾಗಿದ್ದಾರೆ. ಅವರು ಎಳಸಾಗಿದ್ದರೆ ಅಲ್ಲಿಯವರೆಗೆ ಹೋಗಲು ಸಾಧ್ಯವಿತ್ತೇ? ಡಿ.ಕೆ.ಶಿವಕುಮಾರ್ ಕೂಡ ರಾಜಕೀಯದಲ್ಲಿ ಎಳಸಾಗಿಯೇ ಬಂದವರು. ಮೊದಲಿಗೆ ಜೈಲು ಮಂತ್ರಿಯಾಗಿದ್ದರು' ಎಂದು ವಿಶ್ವನಾಥ್ ಹೇಳಿದರು.

'ಬೆಂಗಳೂರಿನ ರಸ್ತೆ ಗುಂಡಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿವೆ. ರಸ್ತೆ ಗುಂಡಿ, ಕಸದ ಸಮಸ್ಯೆ, ಬೀದಿ ನಾಯಿ ಸಮಸ್ಯೆಗಳನ್ನು ಬಗೆಹರಿಸಿ. ಕೊಟ್ಟ ಸಲಹೆಗಳ ವಿರುದ್ಧ ಮಾತನಾಡುವುದು ಸರಿಯಲ್ಲ. ಅದು ನಿಮ್ಮ ಘನತೆಗೆ ತಕ್ಕುದಲ್ಲ' ಎಂದು ಅವರು ಶಿವಕುಮಾರ್ ಅವರನ್ನು ಉದ್ದೇಶಿಸಿ ಹೇಳಿದರು.

ಬಿಜೆಪಿ ಜನಪ್ರತಿನಿಧಿಗಳಿಂದ ಅಭಿಯಾನ

ನಗರದ ಕಸ ವಿಲೇವಾರಿ ಮತ್ತು ರಸ್ತೆ ಗುಂಡಿ ಸಮಸ್ಯೆಗಳ ವಿರುದ್ಧ ಒಂದು ವಾರ ಕಾಲ ಬಿಜೆಪಿ ಜನಪ್ರತಿನಿಧಿಗಳ ವತಿಯಿಂದ ಸರ್ಕಾರದ ವಿರುದ್ಧ ಅಭಿಯಾನ ನಡೆಸಲಾಗುವುದು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಪಕ್ಷದ ಶಾಸಕರು ಮತ್ತು ಸಂಸದರೊಂದಿಗಿನ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಗರಕ್ಕೆ ದ್ರೋಹ ಬಗೆದ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುವುದು. ಅಲ್ಲದೇ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಇದೇ 6 ರಿಂದ 15 ರವರೆಗೆ ಸಹಿ ಸಂಗ್ರಹ ಅಭಿಯಾನವನ್ನೂ ನಡೆಸಲಾಗುವುದು' ಎಂದರು.

'ಎ ಖಾತಾ, ಬಿ ಖಾತಾ ವಿಚಾರವಾಗಿ ಜನರ ಅಭಿಪ್ರಾಯ ಸಂಗ್ರಹಿಸಲಾಗುವುದು. ಸರ್ಕಾರ ದುಡ್ಡು ಹೊಡೆಯುವ ಸ್ಕೀಮು ಮಾಡಿದೆ. ಬೆಂಗಳೂರಿನ ಅಭಿವೃದ್ಧಿಗೆ ಸರ್ಕಾರದ ಬಳಿ ಹಣವಿಲ್ಲ. ಆ ಹಣವನ್ನು ಹೊಂದಿಸಲು ಈ ಕ್ರಮ ತರಬೇಕಾಗಿಲ್ಲ. ಇಷ್ಟೊಂದು ಹಣವನ್ನು ಜನರು ಪಾವತಿಸಲು ಸಾಧ್ಯವಿಲ್ಲ' ಎಂದರು.

'ಕಸಕ್ಕೂ ಸೆಸ್ ಹಾಕಿ ಜನರ ಮೇಲೆ ಹೊರೆ ಹಾಕಲಾಗಿದೆ. ಬೆಸ್ಕಾಂನಲ್ಲಿ ಒಸಿ, ಸಿಸಿ ಮೂಲಕ ಹಣ ಸಂಗ್ರಹಿಸಲಾಗುತ್ತಿದೆ. ತಾತ್ಕಾಲಿಕವಾಗಿ ವಿದ್ಯುತ್ ಪಡೆದರೆ ಮೂರು ಪಟ್ಟು ಶುಲ್ಕ ನೀಡಬೇಕಿದ್ದು, ಇದನ್ನೇ ಬೆಸ್ಕಾಂನಿಂದ ಪ್ರೋತ್ಸಾಹಿಸಲಾಗುತ್ತಿದೆ. ಜನರಿಗೆ ಇಂತಹ ದುಬಾರಿ ಬ್ರ್ಯಾಂಡ್ ಬೆಂಗಳೂರು ಬೇಕಿಲ್ಲ. ಸಾಮಾನ್ಯ ಜನರ ಬಗ್ಗೆ ಚಿಂತಿಸುವ ಬೆಂಗಳೂರು ಬೇಕಿದೆ' ಎಂದು ಹೇಳಿದರು.

ನಗರ ಯೋಜನೆಗೆ ಮತ್ತಷ್ಟು ಪ್ರದೇಶ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧೀನದಲ್ಲಿರುವ ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ ಮತ್ತಷ್ಟು ಗ್ರಾಮಗಳನ್ನು ಸೇರಿಸಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯ ಮಲ್ಲಸಂದ್ರ, ಮನವರ್ತೆ ಕಾವಲ್ ಹಾಗೂ ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಲಕ್ಷ್ಮೀಪುರ, ಕಾನ್ಶಿರಾಮ ನಗರ, ಲಕ್ಷ್ಮೀಪುರ ಗ್ರಾಮದ ಎಲ್ಲ ಬಡಾವಣೆಗಳು ಸೇರಿದಂತೆ 329.99 ಹೆಕ್ಟೇರ್ ಪ್ರದೇಶವನ್ನು ಜಿಬಿಎ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸೇರಿಸಿ ನಗರಾಭಿವೃದ್ಧಿ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ.

'ಗ್ರೇಟರ್ ಬೆಂಗಳೂರು ಪ್ರದೇಶ'ವನ್ನು 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ'ವೆಂದು ಅ. 13ರಂದು ಘೋಷಿಸಿ, ನಗರ ಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಲಾಗಿತ್ತು. ನಗರಾಭಿವೃದ್ಧಿ ಇಲಾಖೆಯ ಮಂಗಳವಾರದ ಆದೇಶ ನಂತರ, 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ' 303 ಗ್ರಾಮಗಳ 683.51 ಚದರ ಕಿ.ಮೀ ವ್ಯಾಪ್ತಿ, 686.81 ಚದರ ಕಿ.ಮೀ.ಗೆ ವಿಸ್ತಾರಗೊಂಡಿದೆ.

ಪಶ್ಚಿಮ ಘಟ್ಟಗಳ ಕುರಿತು ಚಿತ್ರಕಲೆ ಪ್ರದರ್ಶನ ನಾಳೆಯಿಂದ

ಬೆಂಗಳೂರು: ಇಕೋ–ವಾಚ್ ಮತ್ತು ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿಯಿಂದ ನವೆಂಬರ್ 6ರಿಂದ 10ರವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ಕುರಿತು ಚಿತ್ರಕಲೆ ಪ್ರದರ್ಶನ ಹಾಗೂ ಪರಿಸರ ತಜ್ಞರ ರಾಷ್ಟ್ರ ಮಟ್ಟದ ಸಮ್ಮೇಳನ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಸರವಾದಿ ಸುರೇಶ್ ಹೆಬ್ಳೀಕರ್, ಅಕ್ಷಯ್ ಹೆಬ್ಳೀಕರ್, 'ಪಶ್ಚಿಮಘಟ್ಟ ಪ್ರದೇಶಗಳು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, ಪಶ್ಚಿಮಘಟ್ಟ ಪ್ರದೇಶಗಳನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇದೇ ಮೊದಲ ಬಾರಿಗೆ ಪಶ್ಚಿಮಘಟ್ಟಗಳಿಂದ ಸ್ಫೂರ್ತಿ ಪಡೆದಿರುವ ಕಲಾವಿದರ ಕಲಾಕೃತಿಗಳ ಪ್ರದರ್ಶನಕ್ಕೆ ನ. 6ರಂದು ಸಂಜೆ 5.30ಕ್ಕೆ ಚಾಲನೆ ನೀಡಲಾಗುತ್ತದೆ. ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಕಲಾವಿದ ಎಸ್.ಜಿ. ವಾಸುದೇವ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್, ಕಲಾವಿದ ಚಂದ್ರನಾಥ್ ಆಚಾರ್ಯ ಭಾಗವಹಿಸಲಿದ್ದಾರೆ. ಪ್ರದರ್ಶನವು ನ. 7ರಿಂದ 10ರವರೆಗೆ ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 7ಗಂಟೆಯವರೆಗೆ ಇರಲಿದೆ' ಎಂದು ಮಾಹಿತಿ ನೀಡಿದರು.

'ನ. 10ರಂದು ಬೆಳಿಗ್ಗೆ 9.30ಕ್ಕೆ ನಡೆಯುವ ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ರಾಷ್ಟ್ರ ಮಟ್ಟದ ಪರಿಸರ ಸಮ್ಮೇಳನವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಉದ್ಘಾಟಸಲಿದ್ದಾರೆ. ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿ ಅಧ್ಯಕ್ಷ ಮೊಹಮ್ಮದ್ ತಬ್ರೇಜ್ ಆಲಂ ಷರೀಫ್, ನಿವೃತ್ತ ಪಿಸಿಸಿಎಫ್ ಅವನಿ ಕುಮಾರ್ ವರ್ಮಾ ಅತಿಥಿಗಳಾಗಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ತಂಬಾಕು ನಿಯಂತ್ರಣ: ದಂಡದ ಹಣ ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ (ಕೋಟ್ಪಾ) ಕಾಯ್ದೆ 2003ರ ಅಡಿ ಸಂಗ್ರಹಿಸಲಾದ ದಂಡದ ಹಣವನ್ನು ತಂಬಾಕು ನಿಯಂತ್ರಣ ಕಾರ್ಯಕ್ರಮಗಳಿಗೆ ಬಳಸಬೇಕು ಎಂದು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.



ರಾಜ್ಯದಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದ್ದು, ಕೋಟ್ಪಾ ಕಾಯ್ದೆಯನ್ನು ಈ ಕಾರ್ಯಕ್ರಮದಡಿ ಅನುಷ್ಠಾನ ಮಾಡಲಾಗುತ್ತಿದೆ. ಈ ಕಾಯ್ದೆ ಉಲ್ಲಂಘಿಸಿದವರಿಗೆ ದಂಡ ವಿಧಿಸಲು ಅವಕಾಶವಿದ್ದು, ದಂಡದ ಮೊತ್ತವು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಯ ಜಂಟಿ ಖಾತೆಗೆ ಜಮಾ ಆಗಲಿದೆ. ಜಿಲ್ಲಾ ಮಟ್ಟದಲ್ಲಿ ಸಂಗ್ರಹಿಸಲಾದ ದಂಡದ ಮೊತ್ತದಲ್ಲಿ ಶೇ 70ರಷ್ಟು ಹಣವನ್ನು ತಂಬಾಕು ನಿಯಂತ್ರಣ ಚಟುವಟಿಕೆಗಳಿಗೆ ಬಳಸಿಕೊಳ್ಳಬೇಕು ಎಂದು ಹೇಳಲಾಗಿದೆ.

ಜಿಲ್ಲಾ ತಂಬಾಕು ನಿಯಂತ್ರಣ ಘಟಕಗಳು ಹಿಂದಿನ ಆರ್ಥಿಕ ವರ್ಷದಲ್ಲಿ ಸಂಗ್ರಹಿಸಿದ ದಂಡದ ಮೊತ್ತದ ಬಳಕೆಗಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಬೇಕು ಎಂದು ತಿಳಿಸಲಾಗಿದೆ.

ಅಕ್ಕ ಪಡೆ: ಮಹಿಳೆಯರಿಂದ ಅರ್ಜಿ ಆಹ್ವಾನ

ಬೆಂಗಳೂರು: ಸಂಕಷ್ಟದಲ್ಲಿರುವ ದುರ್ಬಲ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ ನೀಡುವ ಸಲುವಾಗಿ ನಗರದಲ್ಲಿ ಅಕ್ಕ ಪಡೆಗೆ ತಂಡ ರಚಿಸಲು ಎನ್‌ಸಿಸಿ 'ಸಿ' ಪ್ರಮಾಣ ಪತ್ರ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅರ್ಜಿಗಳನ್ನು ಆಹ್ವಾನಿಸಿದೆ.

35ರಿಂದ 45 ವಯೋಮಿತಿಯ ಸ್ಥಳೀಯ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ಇದೆ. ಆಸಕ್ತರು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಡಾ.ಎಂ.ಎಚ್ ಮರಿಗೌಡ ರಸ್ತೆ, ಬೆಂಗಳೂರು-560029. ಇಲ್ಲಿ ಅರ್ಜಿಗಳನ್ನು ಪಡೆದುಕೊಂಡು, ನ.13 ರೊಳಗೆ ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ 080-29578688 ಸಂಪರ್ಕಿಸಬಹುದು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಮೆಟ್ರೊ: ನಿಲ್ದಾಣ ನಿಯಂತ್ರಕರ ಕೊರತೆ

ರಾತ್ರಿ ಪಾಳಿಯಲ್ಲಿ ಅಲಭ್ಯ ತಾಂತ್ರಿಕ ಸಮಸ್ಯೆಗಳಾದಾಗ ಪರದಾಟ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ನಮ್ಮ ಮೆಟ್ರೊ'ದಲ್ಲಿ ನಿಲ್ದಾಣ ನಿಯಂತ್ರಕರ ಕೊರತೆ ಉಂಟಾಗಿದೆ. ಇದರಿಂದ ಹಲವು ಮೆಟ್ರೊ ನಿಲ್ದಾಣಗಳಲ್ಲಿ ರಾತ್ರಿ 10 ಗಂಟೆ ಬಳಿಕ ನಿಲ್ದಾಣ ನಿಯಂತ್ರಕರು ಇಲ್ಲದಂತಾಗಿದೆ.

ಹಸಿರು ಮಾರ್ಗದ ದಾಸರಹಳ್ಳಿ ನಿಲ್ದಾಣದಲ್ಲಿ ಒಂದು ತಿಂಗಳ ಹಿಂದೆ ರಾತ್ರಿ ಪ್ರಯಾಣಿಕರೊಬ್ಬರು ಲಿಫ್ಟ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದರು. ಕೂಡಲೇ ಅವರನ್ನು ಹೊರತರಲು ನಿಲ್ದಾಣ ನಿಯಂತ್ರಕರು ಇರಲಿಲ್ಲ. ಜಾಲಹಳ್ಳಿಯಿಂದ ನಿಯಂತ್ರಕರು ಬಂದು ಪ್ರಯಾಣಿಕರನ್ನು ರಕ್ಷಿಸಿದ್ದರು.

'ಮೆಟ್ರೊ ರೈಲು ಸಂಚರಿಸುವ ಸಮಯದಲ್ಲಿ ಪ್ರತಿ ನಿಲ್ದಾಣದಲ್ಲಿ ನಿಲ್ದಾಣ ನಿಯಂತ್ರಕರು (ಸ್ಟೇಷನ್ ಕಂಟ್ರೋಲರ್) ಇರಬೇಕು ಎಂಬ ನಿಯಮವಿದೆ. ಆದರೆ, ರಾತ್ರಿ ಪಾಳಿಯಲ್ಲಿ ಇರುವುದಿಲ್ಲ. ಮೆಟ್ರೊ ಹಸಿರು ಮಾರ್ಗದಲ್ಲಿ 32 ಹಾಗೂ ನೇರಳೆ ಮಾರ್ಗದಲ್ಲಿ 37 ನಿಲ್ದಾಣಗಳಿವೆ. ಅಕ್ಟೋಬರ್ 2ರಂದು ಹಸಿರು ಮಾರ್ಗದ 9 ನಿಲ್ದಾಣಗಳಲ್ಲಿ ಹಾಗೂ ನೇರಳೆ ಮಾರ್ಗದ 7 ನಿಲ್ದಾಣ ಗಳಲ್ಲಿ ಮಾತ್ರ ನಿಯಂತ್ರಕರು ಕಾರ್ಯನಿರ್ವಹಿಸಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ನಿಲ್ದಾಣ ವಿಧಾನಸೌಧದಂಥ ಪ್ರಮುಖ ನಿಲ್ದಾಣದಲ್ಲಿ ಕೂಡ ಸ್ಟೇಷನ್ ಕಂಟ್ರೋಲರ್ ಇರಲಿಲ್ಲ' ಎಂದು ಮೆಟ್ರೊ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

'ಪರಿಶೀಲನೆ'

'ರಾತ್ರಿ 10ರ ನಂತರ ನಿಯಂತ್ರಕರು ನಿಲ್ದಾಣಗಳಲ್ಲಿ ಇರುತ್ತಾರೊ, ಇಲ್ಲವೊ ಎಂಬ ಬಗ್ಗೆ ಪರಿಶೀಲಿಸಲಾಗುವುದು. ಸಿಬ್ಬಂದಿ ಕೊರತೆ ಬಗ್ಗೆ ಗೊತ್ತಿಲ್ಲ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಈ ಬಗ್ಗೆ ಪ್ರತಿಕ್ರಿಯೆ ಪಡೆಯುವುದಕ್ಕಾಗಿ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರನ್ನು ಸಂಪರ್ಕಿಸಲು ಹಲವು ಬಾರಿ ಪ್ರಯತ್ನಿಸಿದರೂ ಕರೆ ಸ್ವೀಕರಿಸಿಲ್ಲ.

ಭದ್ರತಾ ಸಿಬ್ಬಂದಿ ನೀಡುವ ಭದ್ರತೆ ಬೇರೆ, ನಿಲ್ದಾಣ ನಿಯಂತ್ರಕರು ನೀಡುವ ಸುರಕ್ಷತೆ ಬೇರೆ. ಸಿಗ್ನಲಿಂಗ್, ಟೆಲಿಕಾಂ, ವಿದ್ಯುತ್ ಸರಬರಾಜಿನಲ್ಲಿ ಸಮಸ್ಯೆ ಉಂಟಾದರೆ, ಶಾರ್ಟ್ ಸರ್ಕಿಟ್ ಆದರೆ ಸರಿಪಡಿಸಲು ಭದ್ರತಾ ಸಿಬ್ಬಂದಿಗೆ ಯಾವುದೇ ತರಬೇತಿ ಇರುವುದಿಲ್ಲ. ನಿಯಂತ್ರಕರು ಎಲ್ಲ ತಾಂತ್ರಿಕ ತರಬೇತಿ ಪಡೆದಿರುತ್ತಾರೆ. ರೈಲು ಅರ್ಧದಲ್ಲಿ ನಿಂತರೆ ಪ್ರಯಾಣಿಕರನ್ನು ಸುರಕ್ಷಿತವಾಗಿ ಹೊರತರುವುದೂ ಗೊತ್ತಿರುತ್ತದೆ. ಆದರೆ, ಪ್ರತಿದಿನ ಒಂದಲ್ಲ ಒಂದು ನಿಲ್ದಾಣದಲ್ಲಿ ರಾತ್ರಿ 10ರ ನಂತರ ಭದ್ರತಾ ಸಿಬ್ಬಂದಿಗೆ ನಿಲ್ದಾಣದ ಜವಾಬ್ದಾರಿಯನ್ನು ವಹಿಸಲಾಗುತ್ತಿದೆ ಎಂದಿದ್ದಾರೆ.

ನಿಲ್ದಾಣಗಳಲ್ಲಿ ತಾಂತ್ರಿಕ ನಿರ್ವಹಣೆ ಮಾತ್ರವಲ್ಲ, ಸಿಬ್ಬಂದಿ ನಿರ್ವಹಣೆಯನ್ನೂ ಮಾಡುವ ನಿಲ್ದಾಣ ನಿಯಂತ್ರಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಅಥವಾ ಅರ್ಹರಿಗೆ ಬಡ್ತಿ ನೀಡಿ ಭರ್ತಿ ಮಾಡಬೇಕೆಂದು ಸಿಬ್ಬಂದಿ ಆಗ್ರಹಿಸಿದ್ದಾರೆ.

'ಮೆಟ್ರೊ ಪ್ರಯಾಣ ದರ ಇಳಿಸಿ'

'ವಿಪರೀತ ಏರಿಕೆ ಮಾಡಿರುವ ಮೆಟ್ರೊ ಪ್ರಯಾಣ ದರವನ್ನು ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಕೂಡಲೇ ಕಡಿಮೆ ಮಾಡಬೇಕು' ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಹೇಳಿದರು.



ತೇಜಸ್ವಿ ಸೂರ್ಯ

ಫೆಬ್ರುವರಿಯಲ್ಲಿ ಮೆಟ್ರೊ ಪ್ರಯಾಣ ದರ ಹೆಚ್ಚಿಸಿದ ನಂತರ, ಇಳಿಕೆ ಸಂಬಂಧ ಪ್ರಯತ್ನ ಮಾಡುತ್ತಿರುವ ತೇಜಸ್ವಿ ಸೂರ್ಯ ಮಂಗಳವಾರ ನಿಗಮದ ಕಚೇರಿಗೆ ಬಿಜೆಪಿ ಶಾಸಕರೊಂದಿಗೆ ಭೇಟಿ ನೀಡಿ ದರ ನಿಗದಿ ಮಾಡಿರುವ ಕುರಿತು ಅಧಿಕಾರಿಗಳೊಂದಿಗೆ ಪರಾಮರ್ಶೆ ನಡೆಸಿದರು.

'ಏಳು ವರ್ಷಗಳ ನಂತರ ಮೆಟ್ರೊ ಪ್ರಯಾಣ ದರವನ್ನು ನಿಗಮವು ಹೆಚ್ಚಳ ಮಾಡಿತು. ಆದರೆ ಇದು ಸಮರ್ಪಕವಾಗಿ ಇಲ್ಲ. ದೆಹಲಿ, ಮುಂಬೈ, ಚೆನ್ನೈ, ನಾಗ್ಪುರ ಸೇರಿದಂತೆ ಪ್ರಮುಖ ನಗರಗಳಲ್ಲಿನ ಮೆಟ್ರೊ ಪ್ರಯಾಣ ದರಕ್ಕಿಂತ ಹೆಚ್ಚು ದುಬಾರಿಯಾಗಿದೆ. ಇದನ್ನು ಇಳಿಕೆ ಮಾಡಲು ಕ್ರಮ ವಹಿಸಬೇಕು' ಎಂದರು.

'ಹಿಂದಿನ ದರ ಪರಿಷ್ಕರಣೆ ಸಮಿತಿ ನೀಡಿದ ವರದಿ ಆಧರಿಸಿಯೇ ದರ ನಿಗದಿಯಲ್ಲಿ ಆಗಿರುವ ವ್ಯತ್ಯಾಸಗಳನ್ನು ನಿಗಮದ ಉನ್ನತ ಅಧಿಕಾರಿಗಳ ಗಮನಕ್ಕೆ ತಂದರೂ ಈವರೆಗೂ ದರ ಇಳಿಸುವ ಪ್ರಯತ್ನ ಮಾಡಿಲ್ಲ' ಎಂದು ಬೇಸರ ಹೊರ ಹಾಕಿದರು.

'ದರ ಪರಿಷ್ಕರಣೆ ವೇಳೆ ನಿಗಮವು 2017-18ರ ನಿರ್ವಹಣೆ ಮತ್ತು ಆಡಳಿತ ವೆಚ್ಚವನ್ನು ಪರಿಗಣಿಸಬೇಕಿತ್ತು. ಅದರ ಬದಲು ಬಿಎಂಆರ್‌ಸಿಎಲ್ ಅದಕ್ಕೂ ಹಿಂದಿನ ಸಾಲಿನ ವೆಚ್ಚ ಪರಿಗಣಿಸಿ ಹೆಚ್ಚಳ ಮಾಡಿದ್ದು ದುಬಾರಿಯಾಗಲು ಕಾರಣವಾಗಿದೆ. ಅಲ್ಲದೇ ಪ್ರತಿ ಕಿ.ಮೀ ಆಡಳಿತಾತ್ಮಕ ವೆಚ್ಚದ ಲೆಕ್ಕಾಚಾರದಲ್ಲೂ ವ್ಯತ್ಯಾಸವಾಗಿದೆ' ಎಂದು ಅಂಕಿ ಸಂಖ್ಯೆ ಸಮೇತ ವಿವರಿಸಿದರು.

'ದರ ಏರಿಕೆ ಶೇ 105.15ರಷ್ಟು ಆಗಬೇಕು ಎನ್ನುವ ಬೇಡಿಕೆಯನ್ನು ನಿಗಮ ಇಟ್ಟಿತ್ತು. ಹೆಚ್ಚಳ ಮಾಡಿರುವ ದರ ಶೇ 51.5ರಷ್ಟು ಎಂದು ನಿಗಮ ತಿಳಿಸಿದರೂ 8 ರಿಂದ 15 ಕಿ.ಮೀ. ಪ್ರಯಾಣದ ದರ ಶೇ 70ರಷ್ಟು ಹೆಚ್ಚಳವಾಗಿದೆ. ದರ ಹೆಚ್ಚಳದಿಂದ 9 ತಿಂಗಳಲ್ಲಿ ಸುಮಾರು ₹150 ಕೋಟಿ ಹೆಚ್ಚುವರಿ ಸಂಗ್ರಹವಾಗಿದೆ. ದರ ಪರಿಷ್ಕರಣೆಗೆ ನಿಗಮ ಏನು ಕ್ರಮ ಕೈಗೊಂಡಿದೆ' ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.


ಈ ಕುರಿತು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಹಿರಿಯ ಅಧಿಕಾರಿಗಳ ಜತೆಗೆ ಚರ್ಚಿಸಿ ನಿರ್ಧಾರ ತಿಳಿಸಲಾಗುವುದು ಎಂದು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ತಿಳಿಸಿದರು.

ಪ್ರಿಯಾಂಕ್ ಖರ್ಗೆಗೆ ಕುಟುಕಿದ ಆರ್. ಅಶೋಕ

'ಸಮ್ಮಿಟ್‌ಗೂ ಮುನ್ನ ಗುಂಡಿ ಸರಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಟೆಕ್ ಶೃಂಗಸಭೆಗೆ ಬರುವ ಜಾಗತಿಕ ಪ್ರತಿನಿಧಿಗಳು ಪ್ರಯಾಣಿಸಬೇಕಾದ ಗುಂಡಿ ಬಿದ್ದ, ಕಸದಿಂದ ತುಂಬಿ ತುಳುಕುವ ರಸ್ತೆಗಳನ್ನು ಸರಿಪಡಿಸಲು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗೆ ಮನವಿ ಮಾಡಿ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಕಾಲೆಳೆದಿದ್ದಾರೆ.



ಆರ್.ಅಶೋಕ

'ಪ್ರಿಯಾಂಕ್ ಖರ್ಗೆ ಅವರಿಗೆ ಆರ್‌ಎಸ್‌ಎಸ್ ಬಗ್ಗೆ ಟೀಕಿಸುವ ಹೊರತಾಗಿಯೂ ತಮಗೆ ಒಂದು ಖಾತೆಯ ಜವಾಬ್ದಾರಿ ಇದೆ ಎಂದು ಕಡೆಗೂ ನೆನಪಿಸಿಕೊಂಡಿರುವುದು ಸಂತೋಷ' ಎಂದು ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಕಳೆದ ಎರಡೂವರೆ ವರ್ಷಗಳಿಂದ ಈ ನಾಲಾಯಕ್ ಸರ್ಕಾರ ಬೆಂಗಳೂರಿನ ಮೂಲಸೌಕರ್ಯವನ್ನು ಹಾಳು ಮಾಡಿದೆ. ಟ್ರಾಫಿಕ್ ಸಮಸ್ಯೆ ಉಲ್ಬಣಗೊಳಿಸಿದೆ. ಹೂಡಿಕೆದಾರರನ್ನು ಮತ್ತು ನವೋದ್ಯಮಿಗಳನ್ನು ಹೆದರಿಸಿ, ಬೆದರಿಸಿ, ಅವಮಾನ ಮಾಡಿ ಬೆಂಗಳೂರಿನ ವರ್ಚಸ್ಸಿಗೆ, ಜಾಗತಿಕ ಬ್ರ್ಯಾಂಡ್‌ಗೆ ಧಕ್ಕೆ ತಂದಿದೆ' ಎಂದು ಅಶೋಕ ದೂರಿದ್ದಾರೆ.

'ಕಾಂಗ್ರೆಸ್ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು, ಬೆಂಗಳೂರು ಟೆಕ್ ಶೃಂಗಸಭೆಯಲ್ಲಿ ಭಾಗಿಯಾಗಲು ವಿಶ್ವದ ತಂತ್ರಜ್ಞಾನ ಲೋಕದ ದಿಗ್ಗಜರು ಬೆಂಗಳೂರಿಗೆ ಬರುವ ಮುನ್ನ ಇಲ್ಲಿನ ರಸ್ತೆಗಳನ್ನು ಸರಿಪಡಿಸಿ, ನಮ್ಮ ನಗರವನ್ನು ಮತ್ತೊಂದು ಸುತ್ತಿನ ಅವಮಾನದಿಂದ ಉಳಿಸಲಿ ಎನ್ನುವುದೇ ಜನರ ನಿರೀಕ್ಷೆ' ಎಂದಿದ್ದಾರೆ.

'ಬೆಂಗಳೂರು ಟೆಕ್ ಶೃಂಗಸಭೆಯ ಸಂದರ್ಭದಲ್ಲಿ ನಗರದ ಕೆಟ್ಟ ಸ್ಥಿತಿಯಿಂದ ನಮ್ಮ ಬೆಂಗಳೂರು ನಗರಕ್ಕೆ ಮತ್ತೊಂದು ಜಾಗತಿಕ ಮುಜುಗರವಾಗುವುದಿಲ್ಲ ಎಂದು ರಾಜ್ಯ ಸರ್ಕಾರ ಗ್ಯಾರಂಟಿ ನೀಡುತ್ತದೆಯೇ' ಎಂದೂ ಪ್ರಶ್ನಿಸಿದ್ದಾರೆ.

'ಟಾರ್ಪಲ್ ಮುಚ್ಚಿಟ್ಟ ಪರಿಸ್ಥಿತಿ ಇಲ್ಲ'

'ನಮಸ್ತೆ ಟ್ರಂಪ್'ಗಾಗಿ ಗುಜರಾತಿನ ಅಹಮದಾಬಾದ್‌ನ ಅವ್ಯವಸ್ಥೆಗಳಿಗೆ, ಬಡತನಕ್ಕೆ, ಕಸದ ಕೊಂಪೆಗಳಿಗೆ ಟಾರ್ಪಲ್ ಹಾಕಿ ಮುಚ್ಚಿಟ್ಟದ್ದಂಥ ಪರಿಸ್ಥಿತಿ ಬೆಂಗಳೂರಿನಲ್ಲಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



ಪ್ರಿಯಾಂಕ್ ಖರ್ಗೆ

ಅಶೋಕ ಅವರ ಹೇಳಿಕೆಗೆ ತಮ್ಮ 'ಎಕ್ಸ್' ಖಾತೆಯಲ್ಲಿ ತಿರುಗೇಟು ನೀಡಿರುವ ಅವರು, 'ಜಿ 20 ಶೃಂಗಸಭೆಗಾಗಿ ದೆಹಲಿಯ ಬಡವರಿಗೆ ದಿಗ್ಬಂಧನ ವಿಧಿಸಿ, ಬಡವರನ್ನು, ಬಡತನವನ್ನು ಬಂಧನದಲ್ಲಿ ಇಟ್ಟಿದ್ದಂತಹ ದುಃಸ್ಥಿತಿ ಬೆಂಗಳೂರಿಗೆ ಬಂದಿಲ್ಲ. ಛತ್ ಪೂಜೆಗಾಗಿ ನರ್ಮದಾ ನದಿಯ ಪಕ್ಕದಲ್ಲಿ ಫಿಲ್ಟರ್ ನೀರಿನ ಕೊಳ ನಿರ್ಮಿಸಿ, ನರ್ಮದಾ ನದಿಯ ಅವ್ಯವಸ್ಥೆಯನ್ನು ಮರೆಮಾಚಿದಂಥ ದುಃಸ್ಥಿತಿ ನಮಗೆ ಒದಗಿ ಬಂದಿಲ್ಲ' ಎಂದು ಹಂಗಿಸಿದ್ದಾರೆ.

'ಬೆಂಗಳೂರಿನ ಮಹತ್ವದ ಬಗ್ಗೆ ಬಿಜೆಪಿಯವರಿಗೆ ಅರಿವಿಲ್ಲದಿರಬಹುದು. ಆದರೆ, ಮರ್ಸಿಡಿಸ್ ಬೆಂಜ್‌ನ ಸಿಇಒ ಅವರಿಂದ ಹಿಡಿದು ದೇಶದ ಹೂಡಿಕೆದಾರರವರೆಗೂ ಈ ನಗರದ ಬಗ್ಗೆ ಅರಿವಿದೆ. ಜಾಗತಿಕ ಸ್ಟಾರ್ಟ್‌ಅಪ್ ಇಕೊ ಸಿಸ್ಟಂ ಸೂಚ್ಯಂಕದಲ್ಲಿ ಬೆಂಗಳೂರು 14ನೇ ಸ್ಥಾನಕ್ಕೆ ಏರಿರುವುದು ನಮ್ಮ ಕಾರ್ಯವೈಖರಿಗೆ ಹಿಡಿದ ಕನ್ನಡಿ' ಎಂದಿದ್ದಾರೆ. 'ಅಶೋಕ ಅವರು ಶಾಖೆಗೆ ಹೋಗಿ ದೊಣ್ಣೆ ಹಿಡಿಯುವುದನ್ನು ಬಿಟ್ಟು ಜಗತ್ತಿನ ಆಗುಹೋಗುಗಳ ಬಗ್ಗೆ, ಬೆಂಗಳೂರಿನ ಹೆಗ್ಗಳಿಕೆಯ ಬಗ್ಗೆ ತಿಳಿಯುವ ಪ್ರಯತ್ನ ನಡೆಸಿದ್ದರೆ ಈ ರೀತಿಯ ಅಪ್ರಬುದ್ಧ ಹೇಳಿಕೆ ನೀಡುತ್ತಿರಲಿಲ್ಲ' ಎಂದೂ ತಿವಿದಿದ್ದಾರೆ.



ಇದೇ 8–9ಕ್ಕೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ ಆಯೋಜನೆ

ಮಾನಸಿಕ ಆರೋಗ್ಯಕ್ಕೆ 'ಮನೋತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಅದರ ಮಹತ್ವ ಸಾರಲು ಇದೇ 8-9ರಂದು ಕುಮಾರ ಕೃಪಾ ರಸ್ತೆಯಲ್ಲಿರುವ ದಿ ಲಲಿತ್ ಅಶೋಕ್ ಹೋಟೆಲ್‌ನಲ್ಲಿ 'ಮನೋತ್ಸವ' ಹಮ್ಮಿಕೊಳ್ಳಲಾಗಿದೆ.



ಎರಡು ದಿನಗಳ ಈ ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವವನ್ನು ರೋಹಿಣಿ ನಿಲೇಕಣಿ ಫಿಲಾಂತ್ರೊಪಿಸ್ ಫೌಂಡೇಷನ್, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಾಗೂ ರಾಷ್ಟ್ರೀಯ ಜೈವಿಕ ವಿಜ್ಞಾನಗಳ ಸಂಸ್ಥೆ (ಎನ್‌ಸಿಬಿಎಸ್) ಜಂಟಿಯಾಗಿ ಆಯೋಜಿಸಿವೆ. ಮಾನಸಿಕ ಆರೋಗ್ಯ, ಸಂಶೋಧನೆ ಮತ್ತು ಸಮಾಜದ ನಡುವಿನ ಅಂತರ ಕಡಿಮೆ ಮಾಡುವುದು ಈ ಉತ್ಸವದ ಉದ್ದೇಶವಾಗಿದೆ.

ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿಚಾರಸಂಕಿರಣ, ವಿಷಯ ತಜ್ಞರ ಜತೆಗೆ ಸಂವಾದ ಮತ್ತು ಚರ್ಚೆ, ಕಾರ್ಯಾಗಾರ, ಉಪನ್ಯಾಸ ಸೇರಿ ಹಲವು ಕಾರ್ಯಕ್ರಮಗಳನ್ನು ಉತ್ಸವ ಒಳಗೊಂಡಿದೆ. ಈ ಉತ್ಸವದಲ್ಲಿ ಮಕ್ಕಳು ಸೇರಿ ಎಲ್ಲ ವಯೋಮಾನದವರು ಪಾಲ್ಗೊಳ್ಳಬಹುದು. ವಿದ್ಯಾರ್ಥಿಗಳು, ಪಾಲಕರು, ವೈದ್ಯರು, ಮಾನಸಿಕ ಆರೋಗ್ಯ ತಜ್ಞರು, ಸಂಶೋಧಕರು, ಕಲಾವಿದರು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಒಂದೇ ಸೂರಿನಡಿ ತರಲು ಈ ಉತ್ಸವ ಸಹಕಾರಿಯಾಗಲಿದೆ.

ಮುಕ್ತ ಅವಕಾಶ: ದೈನಂದಿನ ಜೀವನದಲ್ಲಿ ಮಾನಸಿಕ ಸ್ವಾಸ್ಥ್ಯದ ಪ್ರಾಮುಖ್ಯತೆ ತಿಳಿಸಿಕೊಡುವ ಜತೆಗೆ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಜ್ಞರ ಮಾರ್ಗದರ್ಶನ ಉತ್ಸವದಲ್ಲಿ ದೊರೆಯಲಿದೆ. ಎರಡೂ ದಿನ ಬೆಳಿಗ್ಗೆ 10 ಗಂಟೆಯಿಂದ ನಡೆಯುವ ಈ ಉತ್ಸವಕ್ಕೆ, ಪ್ರವೇಶ ಉಚಿತ ಇರಲಿದೆ.

'ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ನಿಮ್ಹಾನ್ಸ್ ಮತ್ತು ಎನ್‌ಸಿಬಿಎಸ್ ಜತೆಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಈ ಒಪ್ಪಂದದ ಭಾಗವಾಗಿ ಮನೋತ್ಸವ ಹಮ್ಮಿಕೊಂಡಿದ್ದೇವೆ. ಜನಸಾಮಾನ್ಯರಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಈ ಉತ್ಸವ ಸಹಕಾರಿಯಾಗಲಿದೆ' ಎಂದು ಫೌಂಡೇಷನ್‌ನ ಸಂಸ್ಥಾಪಕಿ ರೋಹಿಣಿ ನಿಲೇಕಣಿ ತಿಳಿಸಿದರು.


'ಮಾನಸಿಕ ಅನಾರೋಗ್ಯ ಸಮಸ್ಯೆ ಕಳಂಕವೆಂಬ ಭಾವನೆಯಿಂದ ಎಲ್ಲರೂ ಮುಕ್ತವಾಗಿ ಹೇಳಿಕೊಳ್ಳುವುದಿಲ್ಲ. ದೈಹಿಕ ಅನಾರೋಗ್ಯ ಸಮಸ್ಯೆಗಳಂತೆ ಮಾನಸಿಕ ಅನಾರೋಗ್ಯ ಸಮಸ್ಯೆಗಳೂ ವ್ಯಕ್ತಿಯನ್ನು ಜೀವನದುದ್ದಕ್ಕೂ ಕಾಡಲಿವೆ. ಸ್ನೇಹಿತರು, ಕುಟುಂಬಸ್ಥರು, ಸಮಾಲೋಚಕರ ಜತೆಗೆ ಈ ಬಗ್ಗೆ ಮಾತನಾಡಿದಾಗ ಮಾತ್ರ ಸಮಸ್ಯೆಯಿಂದ ಹೊರಬರಲು ಸಾಧ್ಯ' ಎಂದು ಎನ್‌ಸಿಬಿಎಸ್ ನಿರ್ದೇಶಕ ಪ್ರೊ.ಎಲ್.ಎಸ್. ಶಶಿಧರ್ ಅಭಿಪ್ರಾಯಪಟ್ಟರು.

ನೋಂದಣಿಗೆ: https://luma.com/manotsavaindia



ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಗಮನ ನೀಡಬೇಕಾಗಿದೆ. ಕೋವಿಡ್ ಕಾಣಿಸಿಕೊಂಡ ಬಳಿಕ ಮಾನಸಿಕ ಅನಾರೋಗ್ಯ ಸಮಸ್ಯೆ ಹೆಚ್ಚಾಗಿದ್ದು, ಚಿಕಿತ್ಸೆ ಬಗ್ಗೆ ಜಾಗೃತಿ ಮೂಡಿಸಬೇಕಿದೆ

ರೋಹಿಣಿ ನಿಲೇಕಣಿ, ರೋಹಿಣಿ ನಿಲೇಕಣಿ ಫಿಲಾಂತ್ರೊಪಿಸ್ ಫೌಂಡೇಷನ್ ಅಧ್ಯಕ್ಷೆ



ಮಾನಸಿಕ ಅನಾರೋಗ್ಯ ಸಮಸ್ಯೆ ಇರುವವರನ್ನು ಕೀಳಾಗಿ ಕಾಣುವ ಜತೆಗೆ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಮಾನಸಿಕ ಆರೋಗ್ಯದ ಮಹತ್ವದ ಬಗ್ಗೆ ಅರಿವು ಅಗತ್ಯ

ಪ್ರೊ.ಎಲ್.ಎಸ್. ಶಶಿಧರ್, ಎನ್‌ಸಿಬಿಎಸ್ ನಿರ್ದೇಶಕ

'ಏಕ ರೀತಿಯ ಪರೀಕ್ಷೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬಿಎಸ್‌ಇ, ಐಸಿಎಸ್‌ಇ ಸೇರಿದಂತೆ ಕೇಂದ್ರ ಮಂಡಳಿಗಳ ಮಾದರಿಯಲ್ಲೇ ರಾಜ್ಯದ ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷಾ ಪದ್ಧತಿ ಜಾರಿಗೊಳಿಸಿರುವ ಶಾಲಾ ಶಿಕ್ಷಣ ಇಲಾಖೆಯ ನಡೆ, ಶೋಷಿತ ವರ್ಗಕ್ಕೆ ಸಮಾನತೆ ಕಲ್ಪಿಸುವ ಶೈಕ್ಷಣಿಕ ಮಾನದಂಡವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಹೇಳಿದ್ದಾರೆ.



ಪುಟ್ಟಣ್ಣ

ರಾಜ್ಯಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಆಗುತ್ತಿದ್ದ ಪರೀಕ್ಷಾ ತಾರತಮ್ಯವನ್ನು ಶಿಕ್ಷಣ ಇಲಾಖೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ನಿವಾರಿಸಿವೆ. ಎಲ್ಲ ವಿದ್ಯಾರ್ಥಿಗಳಿಗೂ ಸಮಾನ ಅವಕಾಶಗಳನ್ನು ಒದಗಿಸುವುದು ಆಯಾ ರಾಜ್ಯ ಸರ್ಕಾರಗಳ ಕರ್ತವ್ಯ. ಒಂದೇ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಕೇಂದ್ರ ಪಠ್ಯಕ್ರಮ ಓದುವ ವಿದ್ಯಾರ್ಥಿಗಳಿಗೆ ಒಂದು ಮಾದರಿ ಪರೀಕ್ಷೆ, ರಾಜ್ಯ ಪಠ್ಯಕ್ರಮ ಓದುವ ವಿದ್ಯಾರ್ಥಿಗಳಿಗೆ ಮತ್ತೊಂದು ಮಾದರಿ ಪರೀಕ್ಷೆ ನಡೆಸುವುದು ಅಸಮಾನತೆಯ ಭಾಗವಾಗಿದೆ. ಇಂತಹ ನ್ಯೂನತೆಯನ್ನು ಕೊನೆಗೂ ಸರಿಪಡಿಸಿರುವುದು ಸ್ವಾಗತಾರ್ಹ ಎಂದಿದ್ದಾರೆ.

ಇದುವರೆಗೂ ಇದ್ದ ನಿಯಮ ಪ್ರಕಾರ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳು ಲಿಖಿತ ಪರೀಕ್ಷೆಯ ಪ್ರತಿ ವಿಷಯದಲ್ಲೂ 28 ಅಂಕ ಪಡೆಯುವುದು ಕಡ್ಡಾಯವಾಗಿತ್ತು. ಒಂದು-ಎರಡು ಅಂಕ ಕಡಿಮೆ ಪಡೆದರೂ ಆ ವಿದ್ಯಾರ್ಥಿ ಅನುತ್ತೀರ್ಣನಾಗುತ್ತಿದ್ದ. ಅದಕ್ಕಾಗಿ ಕೆಲವರು ಶಿಕ್ಷಣವನ್ನೇ ತೊರೆದಿದ್ದಾರೆ. ಇದನ್ನು ಸರಿದೂಗಿಸಲು ನೀಡುತ್ತಿದ್ದ ಕೃಪಾಂಕ ವ್ಯಾಪಕ ಟೀಕೆಗೂ ಗುರಿಯಾಗಿತ್ತು. ನೆರೆಯ ಕೇರಳದಲ್ಲಿ ತೇರ್ಗಡೆಗೆ ಶೇ 30 ಅಂಕ ಪಡೆದರೆ ಸಾಕು. ಕೇಂದ್ರ ಮಂಡಳಿಗಳಲ್ಲಿ ಶೇ 33 ಇದೆ. ಎಲ್ಲ ರಾಜ್ಯಗಳ ವಿದ್ಯಾರ್ಥಿಗಳ ಜತೆ ಸ್ಪರ್ಧಿಸಲು, ಅವರ ಕೈಕೆಳಗೆ ಕೆಲಸ ಮಾಡುವುದನ್ನು ತಪ್ಪಿಸಲು ಸಮಾನ ಪರೀಕ್ಷಾ ಪದ್ಧತಿ ಅಗತ್ಯ. ಸರ್ಕಾರದ ಒಂದು ನಿರ್ಧಾರ ರಾಜ್ಯದ ಒಂದು ಕೋಟಿಗೂ ಹೆಚ್ಚು ವಿದ್ಯಾರ್ಥಿಗಳಿಗೆ ವರದಾನವಾಗಿದೆ ಎಂದು ಹೇಳಿದ್ದಾರೆ.

ಕೆಲ ವ್ಯಕ್ತಿಗಳು ವಿಷಯದ ಆಳವನ್ನು ಅರಿಯದೆ ತಪ್ಪು ಮಾಹಿತಿ ನೀಡಿ ನಕಾರಾತ್ಮಕ ಪ್ರಚಾರ ಮಾಡುತ್ತಿದ್ದಾರೆ. ಈ ನೀತಿಯನ್ನು ಸಾರ್ವಜನಿಕ ಚರ್ಚೆಗೆ ಬಿಡಲಾಗಿತ್ತು. ಅವರ ಅಭಿಪ್ರಾಯ, ಶಿಕ್ಷಣ ತಜ್ಞರು ಮತ್ತು ಕ್ಷೇತ್ರ ಪರಿಣತರ ಸಲಹೆ ಪಡೆದು ಅಂತಿಮಗೊಳಿಸಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ನಗರದಲ್ಲಿ ಇಂದು

19ನೇ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟ-2025: ಉದ್ಘಾಟನೆ: ಕೆ.ಸಿ. ವೀರಣ್ಣ, ಅತಿಥಿಗಳು: ಶ್ರೀನಿವಾಸು ಪಿ., ಎಚ್.ಎಂ. ಜಯಪ್ರಕಾಶ್, ಅಧ್ಯಕ್ಷತೆ: ಎನ್.ಕೆ. ಶಿವಕುಮಾರ್ ಗೌಡ, ಸ್ಥಳ: ಹೈನುಗಾರಿಕಾ ಮಹಾವಿದ್ಯಾಲಯ ಮೈದಾನ, ಹೆಬ್ಬಾಳ, ಬೆಳಿಗ್ಗೆ 9

ನೂತನ ಇಂಗ್ಲಿಷ್ ಮಾಧ್ಯಮ ಶಾಲೆ ಉದ್ಘಾಟನೆ: ಅತಿಥಿಗಳು: ಪದ್ಮಾ ಬಸವಂತಪ್ಪ, ಶ್ರೀನಿವಾಸ ಜಿ., ಸರೋಜಾ ಪಿ., ಸಂಜೀವ ಜಿ.ಎನ್., ನಾಗಮ್ಮ, ಡಾ. ಪದ್ಮನಾಭ ಭಟ್, ಮೌನೇಶ್ ಪಾಟೀಲ್, ಆಯೋಜನೆ ಮತ್ತು ಸ್ಥಳ: ಕಾಲ್ವರಿ ಚಾಪೆಲ್ ಟ್ರಸ್ಟ್‌ನ ಕ್ಯಾಂಪಸ್, ಕನಕಪುರ ರಸ್ತೆ, ಬೆಳಿಗ್ಗೆ 11.30

ಗ್ಯಾಲಕ್ಸಿ-ಅಂತರ ಶಾಲೆಗಳ ಸಾಂಸ್ಕೃತಿಕ ಸಂಭ್ರಮ: ಅತಿಥಿಗಳು: ಬಿ.ಎಸ್. ರಾಗಿಣಿ ನಾರಾಯಣ, ಪಿ. ದಯಾನಂದ ಪೈ, ಸುಚೇತ ರಂಗಸ್ವಾಮಿ, ಅವಿರಾಮ್ ಶರ್ಮಾ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಪಿಯು ಕಾಲೇಜ್ ಫಾರ್ ವುಮೆನ್, ಬಸವನಗುಡಿ, ಮಧ್ಯಾಹ್ನ 3

ನಾಟಕೋತ್ಸವ-2025: 'ಪುಟ್ಟಪ್ಪನ ಪದ್ಯಗಳು', ಮಾತುಕತೆ: ಮೈಮ್ ರಮೇಶ್, 'ವಾರ್ಡ್ ನಂ.6' ನಾಟಕ ಪ್ರದರ್ಶನ: ನಿರ್ದೇಶನ: ಮೈಮ್ ರಮೇಶ್, ಆಯೋಜನೆ: ರಂಗಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕರ್ನಾಟಕ ರಾಜ್ಯೋತ್ಸವ, ಹರಿದಾಸ ಸಂಭ್ರಮ, ಅನ್ನಮಾಚಾರ್ಯರ ಸಂಸ್ಮರಣೆ: ತ್ರಿವೇಣಿ-ಶಾಸ್ತ್ರೀಯ, ಭಾವಗೀತೆ, ಚಿತ್ರ ಗೀತೆಗಳ ಸಂಗಮ: ಗಾಯನ: ಶಂಕರಾಭರಣಂ ತಂಡ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

'ಶಿವೋಹಂ' ನಾಟಕ ಪ್ರದರ್ಶನ: ಆಯೋಜನೆ: ಕ್ರಾನಿಕಲ್ಸ್ ಆಫ್ ಇಂಡಿಯಾ, ಸ್ಥಳ: ರಂಗಶಂಕರ, ಜೆ.ಪಿ. ನಗರ ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in


ಜಿಲ್ಲಾ ಮಟ್ಟದ ಅಂಚೆ ಚೀಟಿಗಳ ಸಂಗ್ರಹಣಾ ಪ್ರದರ್ಶನಕ್ಕೆ ಚಾಲನೆ

'ಪ್ರೇಮಕ್ಕೆ ಸೇತುವೆಯಾದ ಅಂಚೆ ಪತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಕೂಡ ಅಂಚೆ ಇಲಾಖೆಯ ದೊಡ್ಡ ಫಲಾನುಭವಿಯಾಗಿದ್ದು, ನನ್ನ ಮತ್ತು ಕಮಲಾ ಅವರ ಮನಸ್ಸುಗಳನ್ನು ಸೇತುವೆಯಂತೆ ಸೇರಿಸುವ ಕೆಲಸ ಮಾಡಿದ್ದೇ ಅಂಚೆ ಪತ್ರಗಳು' ಎಂದು ಸಾಹಿತಿ ಹಂಪ ನಾಗರಾಜಯ್ಯ ಸ್ಮರಿಸಿಕೊಂಡರು.

ಭಾರತೀಯ ಅಂಚೆ ಇಲಾಖೆಯ ಕರ್ನಾಟಕ ವೃತ್ತವು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಜಿಲ್ಲಾ ಮಟ್ಟದ ಅಂಚೆ ಚೀಟಿಗಳ ಸಂಗ್ರಹಣಾ ಪ್ರದರ್ಶನಕ್ಕೆ ಮಂಗಳವಾರ ಚಾಲನೆ ನೀಡಿ ಮಾತನಾಡಿದರು.



ಅಂಚೆ ಚೀಟಿಗಳನ್ನು ಹಂಪ ನಾಗರಾಜಯ್ಯ, ಬಿ.ಎಲ್. ಶಂಕರ್ ವೀಕ್ಷಿಸಿದರು. ಎ.ಎಸ್. ಚಂದ್ರಶೇಖರ್ (ಜೆಪಿಒ ಚಂದು) ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ನಾವು ಆರು ವರ್ಷ ಪ್ರೀತಿಸಿ, ನಂತರ ಮದುವೆಯಾದೆವು. ಆ ಅವಧಿಯಲ್ಲಿ ನಾವು ಪ್ರೇಮ ಪತ್ರಗಳನ್ನು ನಿರಂತರ ಬರೆಯುತ್ತಿದ್ದೆವು. ಈ ಪ್ರೇಮ ಪತ್ರಗಳಿಗಾಗಿಯೇ ಒಬ್ಬರಿಗೊಬ್ಬರು ಅಂಚೆ ಅಣ್ಣನನ್ನು ಎದುರು ನೋಡುತ್ತಿದ್ದೆವು. ಮದುವೆಯಾದ ನಂತರವೂ ನಮ್ಮ ಪ್ರೇಮ ಪತ್ರ ನಿಲ್ಲಲಿಲ್ಲ. ನಾನು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಕೆಲಸ ಮಾಡಿದರೆ, ಕಮಲಾ ಅವರು ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ ವಿವಾಹದ ಬಳಿಕವೂ ಪ್ರೇಮ ವ್ಯಕ್ತಪಡಿಸಲು ಅಂಚೆ ಪತ್ರವನ್ನೇ ಅವಲಂಬಿಸಿದ್ದೇವು' ಎಂದರು.

'ಅಂಚೆ ಪತ್ರಗಳು ಪ್ರೀತಿಯನ್ನಷ್ಟೆ ಅಲ್ಲ, ತಂದೆ-ತಾಯಿಗಳನ್ನು, ಬಂಧು-ಬಾಂಧವರನ್ನು ಸೇರಿಸುವ ಕೆಲಸ ಮಾಡಿತು. ಟೆಲಿಗ್ರಾಂ ಬಂದರೆ ಊರಿನಲ್ಲಿ ಗಾಬರಿಯಾಗುತ್ತಿದ್ದರು' ಎಂದು ಹಳೆಯ ದಿನಗಳನ್ನು ನೆನಪಿಸಿಕೊಂಡರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್, 'ಭಾರತೀಯ ಅಂಚೆ ಇಲಾಖೆ ವಿಶ್ವದಲ್ಲೆ ದೊಡ್ಡ ಇಲಾಖೆ ಎನಿಸಿದೆ. ತಾಂತ್ರಿಕವಾಗಿಯೂ ಒಗ್ಗಿಕೊಳ್ಳುತ್ತಾ, ಬ್ಯಾಂಕಿಂಗ್ ಕ್ಷೇತ್ರಕ್ಕೂ ಹೆಜ್ಜೆಯಿರಿಸಿದೆ' ಎಂದು ಶ್ಲಾಘಿಸಿದರು.

ಪೋಸ್ಟ್ ಮಾಸ್ಟರ್ ಜನರಲ್ ಚಂದ್ರಶೇಖರ್ ಕಾಕುಮಾನು, ಅಂಚೆ ಸೇವೆಗಳ ನಿರ್ದೇಶಕರಾದ ಸಂದೇಶ್ ಮಹಾದೇವಪ್ಪ, ವಿ.ತಾರಾ ಉಪಸ್ಥಿತರಿದ್ದರು. ಪ್ರದರ್ಶನದಲ್ಲಿ ಅಪರೂಪದ ಸಾವಿರಾರು ಅಂಚೆ ಚೀಟಿಗಳಿದ್ದು, ವಿದ್ಯಾರ್ಥಿಗಳು ಸೇರಿ ವಿವಿಧ ವಯೋಮಾನದವರು ಕುತೂಹಲದಿಂದ ವೀಕ್ಷಿಸಿದರು.



ಯುವಕರ ಕಣ್ಮಣಿ, ಎಲ್ಲಾ ಜಾತಿ ಧರ್ಮದ
ಸರ್ವತೋಮುಖ ಅಭಿವೃದ್ಧಿಯ ಕನಸುಗಾರ, ಬಡವರ
ಬಂಧು, ಕರ್ನಾಟಕದ ಜನನಾಯಕ, ಕಾರ್ಯಕರ್ತರ
ಆಶಾಕಿರಣ, ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರೂ ಆದ,
ತಂದೆಗೆ ತಕ್ಕ ಮಗ
ಸನ್ಮಾನ್ಯ ಶ್ರೀ
ಬಿ. ವೈ. ವಿಜಯೇಂದ್ರ
ಅಣ್ಣನವರಿಗೆ
ಜನುಮದಿನದ
ಹಾರ್ದಿಕ ಶುಭಾಶಯಗಳು
ಶುಭ ಕೋರುವವರು:
ಅಲೋಕ್ ವಿಶ್ವನಾಥ್
ಯುವ ಬಿಜೆಪಿ ಮುಖಂಡರು
ಯಲಹಂಕ ವಿಧಾನಸಭಾ ಕ್ಷೇತ್ರ
ಸಂದೀಪ ಬಿ ರೆಡ್ಡಿ
ಅಧ್ಯಕ್ಷರು,
ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಹಾಗೂ
ಬಿಜೆಪಿ ಯುವ ಮುಖಂಡರು, ಚಿಕ್ಕಬಳ್ಳಾಪುರ
ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ
ಸಮಸ್ತ ನಾಗರೀಕ ಬಂಧುಗಳು.

ಹಣದ ಮಳೆ ಸುರಿಸುವುದಾಗಿ ವಂಚನೆ: ಸೆರೆ

ಹತ್ತು ಆರೋಪಿಗಳ ಬಂಧನ • ₹2 ಸಾವಿರ ಮುಖಬೆಲೆಯ ₹18 ಲಕ್ಷ ಮೌಲ್ಯದ ನೋಟುಗಳು, ಸ್ಕ್ರೀನ್ ಫಿಲಂ ಪ್ರಿಂಟ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂಜೆಯ ನೆಪದಲ್ಲಿ ₹2 ಸಾವಿರ ಮುಖಬೆಲೆಯ ನೋಟುಗಳ ಮಳೆ ಸುರಿಸುವುದಾಗಿ ಸಾರ್ವಜನಿಕರನ್ನು ನಂಬಿಸಿ ವಂಚಿಸುತ್ತಿದ್ದ 10 ಮಂದಿಯನ್ನು ಹಲಸೂರು ಗೇಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ ಆರೋಪಿಗಳಾದ ಕೆ.ಮೋಹನ್, ಶ್ರೀನಿವಾಸಮೂರ್ತಿ, ರಾಜು, ಬಸವರಾಜ್ ಅಲಿಯಾಸ್ ಸತ್ಯಾನಂದ ಸ್ವಾಮಿ, ಮುನಿಶಾಮಪ್ಪ ಅಲಿಯಾಸ್ ಮೋಹನ್, ಮಲ್ಲಿಕಾರ್ಜುನ್, ರಾಮಕೃಷ್ಣ, ಪಾಲಿ ಮುರಳೀಧರ್, ರಾಮಚಂದ್ರ, ಮುಬಾರಕ್ ಎಂಬುವವರನ್ನು ಬಂಧಿಸಲಾಗಿದೆ.

ಆರೋಪಿಗಳಿಂದ ₹2 ಸಾವಿರ ಮುಖಬೆಲೆಯ ₹18 ಲಕ್ಷ ಮೌಲ್ಯದ ನೋಟುಗಳು, ಸ್ಕ್ರೀನ್ ಫಿಲಂ ಪ್ರಿಂಟ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಚಲಾವಣೆಯಿಂದ ಹಿಂಪಡೆಯಲಾದ ಎರಡು ಸಾವಿರ ಮುಖಬೆಲೆಯ 70 ಅಸಲಿ ನೋಟುಗಳ ಸಿರೀಸ್ ನಂಬರ್ ತಿರುಚಿ ಬ್ಯಾಂಕ್‌ಗೆ ಸಲ್ಲಿಕೆ ಆಗಿರುವ ಸಂಬಂಧ ಹಲಸೂರು ಗೇಟ್ ಠಾಣೆ ಪೊಲೀಸರಿಗೆ ಆರ್‌ಬಿಐ ವ್ಯವಸ್ಥಾಪಕರು ಅಕ್ಟೋಬರ್ 17ರಂದು ದೂರು ನೀಡಿದ್ದರು. ತನಿಖೆ ಕೈಗೊಂಡ ಪೊಲೀಸರು ಆ ನೋಟುಗಳನ್ನು ಬ್ಯಾಂಕ್‌ಗೆ ಜಮೆ ಮಾಡಿದ್ದ ಕಬ್ಬನ್‌ಪೇಟೆಯಲ್ಲಿ ನೆಲಸಿದ್ದ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಕಮಿಷನ್ ಆಸೆಗೆ ಕೃತ್ಯ ಎಸಗಿರುವುದು ಗೊತ್ತಾಗಿತ್ತು. ತನಿಖೆ ಮುಂದುವರಿಸಿದಾಗ ನಕಲಿ ಸ್ವಾಮೀಜಿಗಳ ತಂತ್ರ ಬಯಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪೈಕಿ ಬಸವರಾಜ್, ಮಲ್ಲಿಕಾರ್ಜುನ್ ಹಾಗೂ ಮುನಿಶಾಮಪ್ಪ ಸ್ವಾಮೀಜಿಗಳ ವೇಷ ಧರಿಸಿಕೊಂಡು ಶ್ರೀಮಂತರನ್ನು ಭೇಟಿ ಮಾಡುತ್ತಿದ್ದರು. ಈ ಮೂವರು ನಕಲಿ ಸ್ವಾಮೀಜಿಗಳು, ಸಾರ್ವಜನಿಕರಿಗೆ ಪೂಜೆ ಮಾಡಿಸುವ ನೆಪದಲ್ಲಿ ಚಲಾವಣೆಯಿಂದ ಹಿಂದಕ್ಕೆ ಪಡೆಯಲಾಗಿರುವ 2018ರಲ್ಲಿ ಮುದ್ರಿತವಾಗಿರುವ ಸಿರೀಸ್ ಎಂಎನ್‌ಒಪಿಜಿ ಹೊರತುಪಡಿಸಿ ₹2 ಸಾವಿರ ಮುಖಬೆಲೆಯ ನೋಟುಗಳನ್ನು ನೀಡಿದಲ್ಲಿ ಅವುಗಳಿಗೆ ನೂರುಪಟ್ಟು ಹಣವನ್ನು ನೀಡಲಾಗುವುದು (ಹಣದ ಮಳೆ) ಎಂದು ನಂಬಿಸುತ್ತಿದ್ದರು. ₹2 ಸಾವಿರ ಮುಖಬೆಲೆಯ ನೋಟುಗಳನ್ನು ಬದಲಾವಣೆ ಮಾಡಿಕೊಳ್ಳದೇ ಇನ್ನೂ ಮನೆಯಲ್ಲಿ ಇಟ್ಟುಕೊಂಡವರು ಈ ಆಮಿಷಕ್ಕೆ ಒಳಗಾಗುತ್ತಿದ್ದರು ಎಂದು ಪೊಲೀಸರು ಹೇಳಿದರು.

ಹಣದ ಮಳೆ ಸುರಿಸುವ ಸ್ಥಳವನ್ನೂ ಆರೋಪಿಗಳೇ ಹೇಳುತ್ತಿದ್ದರು. ಪೂಜೆ ಮಾಡಬೇಕು. ಸ್ಥಳಕ್ಕೆ ಒಬ್ಬರೇ ಬರಬೇಕೆಂದು ಆರೋಪಿಗಳು ಷರತ್ತು ವಿಧಿಸುತ್ತಿದ್ದರು. ಬಳಿಕ ನದಿ, ಕೆರೆಗಳ ಬಳಿಗೆ ಜನರನ್ನು ಕರೆದೊಯ್ದು ನಕಲಿ ಸ್ವಾಮೀಜಿಗಳು ಕೃತ್ಯ ಎಸಗುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ನೀವು ನೀಡಿದ ನೋಟುಗಳು ಮುಕ್ಕಾಗಿವೆ. ಹೊಳೆಯಲ್ಲಿ ಮುಳುಗಿ ಏಳಬೇಕು’ ಎಂಬುದಾಗಿ ಸ್ವಾಮೀಜಿಗಳು ಸೂಚಿಸುತ್ತಿದ್ದರು. ನೀರಿನಲ್ಲಿ ಮುಳುಗಿ ಏಳುವಷ್ಟರಲ್ಲಿ ದುಡ್ಡಿನೊಂದಿಗೆ ನಕಲಿ ಸ್ವಾಮೀಜಿಗಳು ಪರಾರಿ ಆಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ನೋಟಿನ ಮೇಲಿರುವ ಕ್ರಮ ಸಂಖ್ಯೆ, ಸಿರೀಸ್ ಹಾಗೂ ಮುದ್ರಿತ ವರ್ಷವನ್ನು ಯಶವಂತಪುರದಲ್ಲಿ ನೆಲಸಿದ್ದ ಮುಬಾರಕ್ ಬದಲಾವಣೆ ಮಾಡುತ್ತಿದ್ದ. ಆತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘₹2 ಸಾವಿರ ಮುಖಬೆಲೆಯ ಲಕ್ಕಿ ಸಿರೀಸ್ ನಮ್ಮ ಬಳಿಯಿದೆ. ಈ ಹಣವನ್ನು ಮನೆಯಲ್ಲಿ ಇಟ್ಟುಕೊಂಡರೆ ಇನ್ನೂ ಶ್ರೀಮಂತರಾಗಬಹುದು ಎಂದೂ ಆರೋಪಿಗಳು ನಂಬಿಸುತ್ತಿದ್ದರು. ಲಕ್ಕಿ ಸಿರೀಸ್‌ನ ನಂಬರಿನ ನೋಟಿಗೆ ₹1 ಲಕ್ಷಕ್ಕೆ ₹2 ಲಕ್ಷ ಪಡೆದು ಪರಾರಿ ಆಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೆ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ.


ಬಸವರಾಜ್


ಮಲ್ಲಿಕಾರ್ಜುನ್



ಮುನಿಶಾಮಪ್ಪ


ಮುಬಾರಕ್


ಮುರಳೀಧರ್


ಮೋಹನ್


ರಾಜು


ರಾಮಕೃಷ್ಣ


ರಾಮಚಂದ್ರ


ಶ್ರೀನಿವಾಸಮೂರ್ತಿ

ವಂಚನೆ ಜಾಲ ವಿಸ್ತರಣೆ

ಈ ರೀತಿ ವಂಚಿಸಿದ ನೋಟುಗಳನ್ನು ಮಧ್ಯವರ್ತಿಗಳ ಮೂಲಕ ಆರ್‌ಬಿಐಗೆ ಜಮೆ ಮಾಡಿಸಿ ₹20 ಸಾವಿರ, ₹30 ಸಾವಿರ ಕಡಿಮೆ ಹಣ ಪಡೆದು ಕೊಳ್ಳುತ್ತಿದ್ದರು. ಬೆಂಗಳೂರು, ಯಾದಗಿರಿ, ಹಾವೇರಿ, ಆಂಧ್ರಪ್ರದೇಶ, ತಮಿಳುನಾಡಿನಲ್ಲೂ ಈ ಜಾಲ ವಿಸ್ತರಿಸಿಕೊಂಡಿದೆ. ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಎಲ್ಲೆಲ್ಲಿ ಆರೋಪಿಗಳ ಬಂಧನ?

ಕಬ್ಬನ್‌ಪೇಟೆ, ಮೆಜೆಸ್ಟಿಕ್, ಯಶವಂತಪುರ ಹಾಗೂ ಆಂಧ್ರಪ್ರದೇಶದ ವಿವಿಧೆಡೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

‘ಧರ್ಮಸ್ಥಳ ಪ್ರಕರಣ: ಸಮಗ್ರ ತನಿಖೆ ನಡೆಸದ ಎಸ್‌ಐಟಿ’

ಬೆಂಗಳೂರು: ‘ಧರ್ಮಸ್ಥಳ ವ್ಯಾಪ್ತಿಯಲ್ಲಿ 20 ವರ್ಷಗಳಿಂದ ನಾಪತ್ತೆ ಆಗಿರುವ ಮಹಿಳೆಯರು, ವಿದ್ಯಾರ್ಥಿನಿಯರು, ಅಲ್ಲಿ ನಡೆದ ಅಸ್ವಾಭಾವಿಕ ಸಾವು, ಕೊಲೆ ಹಾಗೂ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ರಚಿಸಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ) ಸಮಗ್ರ ತನಿಖೆ ನಡೆಸುತ್ತಿಲ್ಲ’ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಆರೋಪಿಸಿದ್ದಾರೆ.

ಈ ಬಗ್ಗೆ ಎಸ್‌ಐಟಿ ಮುಖ್ಯಸ್ಥರಿಗೆ ಪತ್ರ ಬರೆದಿರುವ ಅವರು, ‘ಎಸ್‌ಐಟಿ ತಂಡವು ಚಿನ್ನಯ್ಯ ಅವರ ಹೇಳಿಕೆ ಆಧರಿಸಿ ಮಾನವ ಕಳೇಬರಗಳ ಉತ್ಖನನಕ್ಕೆ ಸೀಮಿತವಾಗಿದ್ದು, ಆತನ ಹೇಳಿಕೆ ಮಿತಿಯೊಳಗೆ ತನಿಖೆ ನಡೆಸುತ್ತಿದೆ. ಇಲ್ಲಿ ನಾಪತ್ತೆಯಾಗಿರುವ ಮಹಿಳೆಯರು, ವಿದ್ಯಾರ್ಥಿನಿಯರು, ಅಸ್ವಾಭಾವಿಕ ಸಾವು, ಕೊಲೆ ಹಾಗೂ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ಆಗಿದೆಯೇ’ ಎಂದು ಪ್ರಶ್ನಿಸಿದ್ದಾರೆ.



‘ದೊರೆತ ಅಸ್ಥಿ ಪಂಜರಗಳಲ್ಲಿ ಮಹಿಳೆಯರ ಅಸ್ಥಿ ಪಂಜರಗಳನ್ನು ಗುರುತಿಸುವ ಕೆಲಸವಾಗಿದೆಯೇ? ಕಾಡಿನಲ್ಲಿ ಅಸ್ಥಿಪಂಜರಗಳು ದೊರೆತಿದ್ದು, ಈ ಬಗ್ಗೆ ತನಿಖೆ ಏನಾದರೂ ಕೈಗೊಳ್ಳಲಾಗಿದೆಯೇ? ಕೈಗೊಂಡಿದ್ದರೆ ಈ ಬಗ್ಗೆ ಮಾಹಿತಿಯನ್ನು ಆಯೋಗಕ್ಕೆ ಸಲ್ಲಿಸಬೇಕು’ ಎಂದು ಸೂಚಿಸಿದ್ದಾರೆ.

ಅಶ್ಲೀಲ ವೆಬ್‌ಸೈಟ್ ವೀಕ್ಷಣೆಗೆ ನಿರ್ಬಂಧ: ಪಿಐಎಲ್ ವಿಲೇವಾರಿ

ಬೆಂಗಳೂರು: ‘ಬೆತ್ತಲೆ, ಅಶ್ಲೀಲ ಚಿತ್ರಗಳನ್ನು ಬಿತ್ತರಿಸುವ ವೆಬ್‌ಸೈಟ್ ಹಾಗೂ ಅಪ್ಲಿಕೇಶನ್‌ಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಸಂಬಂಧ ‘ಲೀಗಲ್ ಅಟಾರ್ನೀಸ್’ ಮತ್ತು 'ಬ್ಯಾರಿಸ್ಟರ್ಸ್ ಲಾ ಫರ್ಮ್' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ಹಾಜರಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಅವರು, ‘ಇದೇ ವಿಚಾರಕ್ಕೆ ಸಂಬಂಧಿಸಿದ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ ‘ಈ ಹಂತದಲ್ಲಿ ಈ ಅರ್ಜಿ ವಿಚಾರಣೆ ಸೂಕ್ತವಲ್ಲ. ಯಾವುದೇ ಆದೇಶದ ಅಗತ್ಯವೂ ಇಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿ ಆದೇಶಿಸಿತು.

‘ಹದಿನೆಂಟು ವರ್ಷದ ಕೆಳಗಿನ ಮಕ್ಕಳ ಅಶ್ಲೀಲ ವಿಚಾರಗಳ ವೀಕ್ಷಣೆಗೆ ನಿರ್ಬಂಧ ವಿಧಿಸಬೇಕು’ ಎಂಬ ಕೋರಿಕೆಯೂ ಸೇರಿದಂತೆ ಹಲವು ಅಂಶಗಳ ಮನವಿ ಹೊಂದಿದ ಅರ್ಜಿಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇವೆ.

ಚಿಟಿಕೆ ಸುದ್ದಿ

ಅವಹೇಳನ: ಯುಟ್ಯೂಬ್ ವಿರುದ್ಧ ಎಫ್‌ಐಆರ್

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿದ್ದ ‘ನ್ಯೂಸ್ ಫ್ಯಾಕ್ಟರಿ–09’ ಹೆಸರಿನ ಯು–ಟ್ಯೂಬ್ ವಿರುದ್ಧ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಎಸ್‌ಐ ಅಸ್ಮಾಬೇಗಂ ಅವರು ನೀಡಿದ ದೂರಿನ ಮೇರೆಗೆ ನಗರ ಸೈಬರ್ ಕ್ರೈಂ ಠಾಣೆ ಪೊಲೀಸರು ನ್ಯೂಸ್ ಫ್ಯಾಕ್ಟರಿ 09 ಎಂಬ ಯುಟ್ಯೂಬ್ ಚಾನಲ್ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಭಾವಚಿತ್ರಗಳನ್ನು ಅವಹೇಳನಕಾರಿಯಾಗಿ ರೀಲ್ಸ್ ಮಾಡಿದ್ದ ಆರೋಪದ ಅಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಪಘಾತ: ಡಾನ್ಸ್ ಮಾಸ್ಟರ್ ಸಾವು

ದಾಬಸ್‌ಪೇಟೆ: ರಾಷ್ಟ್ರೀಯ ಹೆದ್ದಾರಿ–48ರ ದಾಬಸ್‌ಪೇಟೆ ಪಟ್ಟಣಕ್ಕೆ ಹೊಂದಿಕೊಂಡಿರುವ ಪೆಮ್ಮನಹಳ್ಳಿ ಮೇಲ್ಸೇತುವೆ ಬಳಿ ಮಂಗಳವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಶ್ಯಾಮ್ ಡಾನ್ಸ್ ಸ್ಕೂಲ್‌ನ ಡಾನ್ಸ್ ಮಾಸ್ಟರ್ ಸುಧೀಂದ್ರ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

7.30ರ ಸುಮಾರಿಗೆ ದೊಡ್ಡಬಳ್ಳಾಪುರ ಕಡೆಯಿಂದ ದಾಬಸ್‌ಪೇಟೆಗೆ ಬರುವಾಗ ಮೇಲ್ಸೇತುವೆಯ ಬದಿಯಲ್ಲಿ ಕಾರು ನಿಲ್ಲಿಸಿಕೊಂಡು ಸ್ನೇಹಿತರ ಜೊತೆ ಮಾತನಾಡುತ್ತಿದ್ದರು. ಬಳಿಕ ಸ್ನೇಹಿತರು ಕಾರಿನಲ್ಲಿ ಮುಂದೆ ತೆರಳಿದ್ದರು. ಸುಧೀಂದ್ರ ಅವರು ಕಾರು ಹತ್ತಲು ಹೋಗುವಾಗ ಹಿಂದಿನಿಂದ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಕ್ಯಾಂಟರ್ ಡಿಕ್ಕಿ ಹೊಡೆಯುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕ್ಯಾಂಟರ್ ಜಪ್ತಿ ಮಾಡಲಾಗಿದೆ. ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪ್ರಾವಿಜನ್ ಸ್ಟೋರ್ ಮಾಲೀಕನ ಕತ್ತು ಕೊಯ್ದು ಹತ್ಯೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಕಾಚನಾಯಕನಹಳ್ಳಿಯಲ್ಲಿ ಮಂಗಳವಾರ ಹಗಲಿನಲ್ಲಿಯೇ ಕಿರಾಣಿ ಅಂಗಡಿ ಮಾಲೀಕನನ್ನು ಕತ್ತು ಕೊಯ್ದು ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಮಾದೇಶ್ ಪ್ರಾವಿಜನ್ ಸ್ಟೋರ್ ಮಾಲೀಕ ಮಾದೇಶ್ (40) ಮನೆಗೆ ಏಕಾಏಕಿ ಏರ್‌ಗನ್, ಚಾಕು, ಮಾರಕಾಸ್ತ್ರಗಳೊಂದಿಗೆ ನುಗ್ಗಿದ ದುಷ್ಕರ್ಮಿಗಳು ಹತ್ಯೆ ಮಾಡಿ, ತಡೆಯಲು ಬಂದ ಸ್ಥಳೀಯರ ಮೇಲೂ ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ದುಷ್ಕರ್ಮಿಗಳು ಹೆಲ್ಮೆಟ್ ಧರಿಸಿದ್ದರು. ಈ ಸಂದರ್ಭದಲ್ಲಿ ಮನೆಯಲ್ಲಿ ಯಾರೂ ಇರಲಿಲ್ಲ ಎಂದು ಗೊತ್ತಾಗಿದೆ.

ತಮಿಳುನಾಡಿನ ಡೆಂಕಣಿಕೋಟೆ ಸಮೀಪದ ಬಾರಂದೂರು ನಿವಾಸಿಯಾಗಿದ್ದ ಮಾದೇಶ ಪತ್ನಿ, ಮಗ, ಭಾಮೈದನೊಂದಿಗೆ ಕಾಚನಾಯಕನಹಳ್ಳಿಯಲ್ಲಿ ವಾಸವಾಗಿದ್ದರು. ಕಾಲಿಗೆ ಗಾಯವಾದ ಕಾರಣ ಮನೆಯಲ್ಲಿದ್ದರು. ಮನೆಯಲ್ಲಿ ₹2 ಲಕ್ಷ ನಗದು ಇತ್ತು ಎಂದು ತಿಳಿದು ಬಂದಿದೆ.

ಘಟನಾ ಸ್ಥಳದಲ್ಲಿ ಬ್ಯಾಗ್, ಹೆಲ್ಮೆಟ್, ಏರ್ ಪಿಸ್ತೂಲ್, ಮೆಟಲ್ ಡಿಟೆಕ್ಟರ್, ಟಾರ್ಚ್ ಪತ್ತೆಯಾಗಿವೆ. ಸ್ಥಳಕ್ಕೆ ಎಲೆಕ್ಟ್ರಾನಿಕ್‌ಸಿಟಿ ಡಿಸಿಪಿ ನಾರಾಯಣ್, ಎಸಿಪಿ ಸತೀಶ್, ಹೆಬ್ಬಗೋಡಿ ಪೊಲೀಸ್ ಇನ್‌ಸ್ಪೆಕ್ಟರ್ ಸೋಮಶೇಖರ್ ಭೇಟಿ ನೀಡಿದ್ದರು. ಆರೋಪಿಗಳ ಪತ್ತೆಗೆ ಮೂರು ತಂಡ ರಚಿಸಲಾಗಿದೆ.

ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ನಟಿಗೆ ಅಶ್ಲೀಲ ಚಿತ್ರ ಕಳುಹಿಸಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುತೆರೆ ನಟಿಗೆ ಅಶ್ಲೀಲ ಸಂದೇಶ ಹಾಗೂ ಚಿತ್ರ ಕಳುಹಿಸಿ ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.


ನವೀನ್

ಟೆಂಪಲ್ಟನ್ ಆ್ಯಂಡ್ ಪಾರ್ಟನರ್ ಎಂಬ ಕಂಪನಿಯಲ್ಲಿ ಡೆಲಿವರಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ನವೀನ್ ಕೆ. ಮಾನ್ ಬಂಧಿತ ಆರೋಪಿ. ಕೇರಳದ ನವೀನ್, ವೈಟ್‌ಫೀಲ್ಡ್‌ನಲ್ಲಿ ಇರುವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆರೋಪಿಯನ್ನು ಬಂಧಿಸಿ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕನ್ನಡ ಹಾಗೂ ತೆಲುಗು ಧಾರಾವಾಹಿಗಳಲ್ಲಿ ನಟಿಸುತ್ತಿರುವ ನಟಿಯೊಬ್ಬರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ. ಸಾಮಾಜಿಕ ಜಾಲತಾಣದ ಮೂಲಕ ನಟಿಗೆ ನಿರಂತರವಾಗಿ ಅಶ್ಲೀಲ ಫೋಟೊ, ವಿಡಿಯೊಗಳನ್ನು ಕಳಿಸುತ್ತಿದ್ದ ಎಂದು ಪೊಲೀಸರು ತಿಳಿಸಿದರು. ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 75(1)(iii), 78(1)(ii), 79ರ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಮೂರು ತಿಂಗಳ ಹಿಂದೆ ಫೇಸ್‌ಬುಕ್ ಮೂಲಕ ಆರೋಪಿ ‘ಫ್ರೆಂಡ್ ರಿಕ್ವೆಸ್ಟ್’ ಕಳಿಸಿದ್ದ. ರಿಕ್ವೆಸ್ಟ್ ಅನ್ನು ನಟಿ ಸ್ವೀಕರಿಸಿರಲಿಲ್ಲ. ಅಂದಿನಿಂದ ದೂರುದಾರೆಗೆ ನಿತ್ಯವೂ ಮೆಸೆಂಜರ್ ಮೂಲಕ ಅಶ್ಲೀಲ ಸಂದೇಶ ಹಾಗೂ ಚಿತ್ರಗಳನ್ನು ಕಳುಹಿಸಲು ಆರಂಭಿಸಿದ್ದ. ಬಳಿಕ ಆರೋಪಿಯ ಪ್ರೊಫೈಲ್ ಬ್ಲಾಕ್ ಮಾಡಿದ್ದರು. ಅದಾದ ನಂತರವೂ ಬೇರೆ ಬೇರೆ ಪ್ರೊಫೈಲ್ ಮೂಲಕ ದೂರುದಾರೆಗೆ ಆರೋಪಿ ಅಶ್ಲೀಲ ಸಂದೇಶ ಹಾಗೂ ವಿಡಿಯೊಗಳನ್ನು ಕಳುಹಿಸುತ್ತಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಬುದ್ಧಿಮಾತು ಹೇಳಿದ್ದ ನಟಿ: ನವೆಂಬರ್ 1ರಂದು ನಾಗರಭಾವಿ ಎರಡನೇ ಹಂತದಲ್ಲಿರುವ ಹೋಟೆಲ್‌ವೊಂದರಲ್ಲಿ ಆರೋಪಿಯನ್ನು ನೇರವಾಗಿ ಭೇಟಿ ಮಾಡಿದ್ದ ನಟಿ ಬುದ್ಧಿಮಾತು ಹೇಳಿದ್ದರು. ಇದೇ ವರ್ತನೆ ಮುಂದುವರಿಸಿದರೆ ದೂರು ನೀಡಲಾಗುವುದು ಎಂಬುದಾಗಿ ಎಚ್ಚರಿಕೆ ನೀಡಿದ್ದರು. ಆರೋಪಿ ಮತ್ತೆ ಅದೇ ವರ್ತನೆ ತೋರಿದ್ದರಿಂದ ದೂರು ನೀಡಲಾಯಿತು ಎಂದು ಮೂಲಗಳು ಹೇಳಿವೆ.

ವಾಯುವಿಹಾರಕ್ಕೆ ತೆರಳಿದ ವೇಳೆ ಮಹಿಳೆಗೆ ಲೈಂಗಿಕ ಕಿರುಕುಳ

ಬೆಂಗಳೂರು: ವಾಯುವಿಹಾರಕ್ಕೆ ತೆರಳಿದ್ದ ವೇಳೆ ಮಹಿಳೆಯನ್ನು ಅಡ್ಡಗಟ್ಟಿದ ಯುವಕನೊಬ್ಬ ಲೈಂಗಿಕ ಕಿರುಕುಳ ನೀಡಿರುವ ಘಟನೆ ಇಂದಿರಾನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅಪರಾಧ ಸುದ್ದಿ

ಈ ಸಂಬಂಧ ಇಂದಿರಾನಗರ ನಿವಾಸಿ 31 ವರ್ಷದ ಮಹಿಳೆ ನೀಡಿದ ದೂರಿನ ಮೇರೆಗೆ ವ್ಯಕ್ತಿಯ ವಿರುದ್ಧ ಇಂದಿರಾನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಶೋಧ ಕಾರ್ಯ ನಡೆಸುತ್ತಿದ್ದಾರೆ. ನ.1ರಂದು ಬೆಳಿಗ್ಗೆ ಮಹಿಳೆಯೊಬ್ಬರು ಸಾಕು ನಾಯಿಯನ್ನು ಕರೆದುಕೊಂಡು ದೊಮ್ಮಲೂರು ಎರಡನೇ ಹಂತದ ರಸ್ತೆಯಲ್ಲಿ ವಾಯುವಿಹಾರಕ್ಕೆ ಹೋಗುತ್ತಿದ್ದರು. ಆಗ ಹಿಂದಿನಿಂದ ಬಂದಿದ್ದ ಆರೋಪಿ ಮೇಡಂ ಎಂದು ಕರೆದು ಸಂತ್ರಸ್ತೆಯನ್ನು ಮಾತನಾಡಿಸಿದ್ದ. ಬಳಿಕ ಅಶ್ಲೀಲವಾಗಿ ವರ್ತಿಸಿದ್ದ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಘಟನಾ ಸ್ಥಳದ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದ್ದು, ಆರೋಪಿಯ ಮುಖ ಚಹರೆ ಪತ್ತೆಯಾಗಿದೆ. ಸದ್ಯದಲ್ಲೇ ಆರೋಪಿಯನ್ನು ಬಂಧಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

₹75 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ



ಬೆಂಗಳೂರು: ಬಂಡೇಪಾಳ್ಯ ಮತ್ತು ಮಲ್ಲೇಶ್ವರ ಠಾಣೆ ಪೊಲೀಸರು ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ಕಾರ್ಯಾಚರಣೆ ನಡೆಸಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆ ಸೇರಿ ಐವರನ್ನು ಬಂಧಿಸಿದ್ದಾರೆ.

ನೈಜೀರಿಯಾ ದೇಶದ ಇಬಾನುಗೊ(35) ಎಂಬಾತನನ್ನು ಬಂಡೇಪಾಳ್ಯ ಠಾಣೆ ಪೊಲೀಸರು ಬಂಧಿಸಿ ₹75 ಲಕ್ಷ ಮೌಲ್ಯದ 752 ಗ್ರಾಂ ಎಂಡಿಎಂಎ, 8 ಗ್ರಾಂ ಕೊಕೇನ್ ಹಾಗೂ ಒಂದು ಬೈಕ್ ವಶಕ್ಕೆ ಪಡೆದುಕೊಂಡಿದ್ದಾರೆ.

2018ರಲ್ಲಿ ವ್ಯವಹಾರಿಕ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ, ದೆಹಲಿಯಲ್ಲಿ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದ. ಬಳಿಕ ಮೂರು ತಿಂಗಳ ಹಿಂದೆ ನಗರಕ್ಕೆ ಬಂದು ಬಂಡೇಪಾಳ್ಯದಲ್ಲಿ ಸ್ನೇಹಿತರ ಮನೆಯಲ್ಲಿ ವಾಸವಾಗಿದ್ದ. ಅಪರಿಚಿತರ ಮೂಲಕ ಮಾದಕ ವಸ್ತುಗಳಾದ ಎಂಡಿಎಂಎ ಮತ್ತು ಕೊಕೇನ್‌ಗಳನ್ನು ತರಿಸಿಕೊಂಡು ಟೆಕಿ, ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಇತರೆ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಮಲ್ಲೇಶ್ವರ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ ₹19.70 ಲಕ್ಷ ಮೌಲ್ಯದ ಗಾಂಜಾ, ಹ್ಯಾಶೀಸ್ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಚಿನ್ನದ ಮೇಲೆ ಬಡ್ಡಿರಹಿತ ಸಾಲ ನೀಡುವುದಾಗಿ ವಂಚನೆ

ಬೆಂಗಳೂರು: ಚಿನ್ನದ ಮೇಲೆ ಬಡ್ಡಿರಹಿತ ಸಾಲ ನೀಡುವುದಾಗಿ ಜಾಹೀರಾತು ನೀಡಿ ವಂಚಿಸಿದ್ದ ಇಬ್ಬರು ಆರೋಪಿಗಳನ್ನು ನಗರ ಕೇಂದ್ರ ಅಪರಾಧ ಶಾಖೆಯ(ಸಿಸಿಬಿ) ಆರ್ಥಿಕ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.


ಸಲಾಂ


ಅಜಿತ್

ಕೇರಳದ ಸಲಾಂ ಹಾಗೂ ಅಜಿತ್ ಬಂಧಿತರು.

ಬಂಧಿತರಿಂದ ₹1.80 ಕೋಟಿ ಮೌಲ್ಯದ 1 ಕೆ.ಜಿ 478 ಗ್ರಾಂ ಚಿನ್ನಾಭರಣ, ಐದು ಕೆ.ಜಿ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳಿಬ್ಬರು ವಿದ್ಯಾರಣ್ಯಪುರದಲ್ಲಿ ಚಿನ್ನಾಭರಣ ಮಾರಾಟ ಮಳಿಗೆ ತೆರೆದಿದ್ದರು. ಶೂನ್ಯ ಬಡ್ಡಿ ದರದಲ್ಲಿ ಚಿನ್ನದ ಮೇಲೆ ಸಾಲ ನೀಡುವುದಾಗಿ ಜಾಹೀರಾತು ನೀಡಿದ್ದರು. ಈ ಪ್ರಚಾರವನ್ನು ನಂಬಿದ್ದ ಅನೇಕರು ಚಿನ್ನವನ್ನು ಅಡಮಾನವಿಡಲು ಮುಂದಾಗಿದ್ದರು. ಚಿನ್ನದ ಮೌಲ್ಯದ ಮೇಲೆ ಶೇ 50 ಹಣವನ್ನು ಆರೋಪಿಗಳು ನೀಡುತ್ತಿದ್ದರು. ಕನಿಷ್ಠ 11 ತಿಂಗಳ ಅವಧಿವರೆಗೂ ಚಿನ್ನವನ್ನು ಬಿಡಿಸಿಕೊಳ್ಳಬಾರದು ಎಂದು ಷರತ್ತು ವಿಧಿಸುತ್ತಿದ್ದರು. ಜನರಿಂದ 4 ಕೆ.ಜಿ ಚಿನ್ನ ಅಡಮಾನ ಇಟ್ಟುಕೊಂಡಿದ್ದರು.

ಆ ಚಿನ್ನವನ್ನು ಎಚ್‌ಆರ್‌ಬಿಆರ್ ಲೇಔಟ್‌ನ ಚಿನ್ನಾಭರಣ ಅಂಗಡಿಗೆ ಮಾರಾಟ ಮಾಡಿದ್ದರು. 11 ತಿಂಗಳ ಬಳಿಕ ಅಂಗಡಿಯನ್ನು ಬಂದ್ ಮಾಡಿಕೊಂಡು ಕೇರಳಕ್ಕೆ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳು ಕೇರಳದಿಂದ ನಗರಕ್ಕೆ ವಾಪಸ್ ಬಂದಿರುವ ಮಾಹಿತಿ ಆಧರಿಸಿ ಪೀಣ್ಯದಲ್ಲಿ ವಶಕ್ಕೆ ಪಡೆದು ಬಂಧಿಸಲಾಯಿತು. ಆರೋಪಿಗಳಿಬ್ಬರು ಕೇರಳ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇದೇ ರೀತಿ ವಂಚನೆ ನಡೆಸಿರುವುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

‘ಚಿನ್ನವನ್ನು ಅಡಮಾನ ಇಡುವ ಮೊದಲು ಸಂಸ್ಥೆಯ ಪರವಾನಗಿ ಮತ್ತು ನೈಜತೆ ಪರಿಶೀಲಿಸಿಕೊಳ್ಳಬೇಕು. ಶೂನ್ಯ ಬಡ್ಡಿ ಎನ್ನುವ ಅಸಾಧ್ಯ ಯೋಜನೆಗಳಿಗೆ ಬಲಿಯಾಗಬಾರದು. ಅನುಮಾನಸ್ಪದ ಜಾಹೀರಾತು ಹಾಗೂ ಯೋಜನೆಗಳು ಕಂಡುಬಂದರೆ ಸಮೀಪದ ಪೊಲೀಸ್ ಠಾಣೆಗೆ ಅಥವಾ ಸಿಸಿಬಿ ವಿಭಾಗಕ್ಕೆ ತಕ್ಷಣವೇ ಮಾಹಿತಿ ನೀಡಬಹುದು’ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದರು.

ಮೂವರ ಅಮಾನತು, ಪಿಎಸ್‌ಐ ಲೋಪ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೋಭಾ ಡ್ರೀಮ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ಮನೆ ಕೆಲಸದಾಕೆಯನ್ನು ಕಳ್ಳತನ ಪ್ರಕರಣದಲ್ಲಿ ಠಾಣೆಗೆ ಕರೆದೊಯ್ದು ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ವರ್ತೂರು ಪೊಲೀಸ್ ಠಾಣೆಯ ಅಪರಾಧ ವಿಭಾಗದ ಮೂವರು ಪೊಲೀಸರನ್ನು ವೈಟ್‌ಫೀಲ್ಡ್ ಡಿಸಿಪಿ ಪರಶುರಾಮ್ ಅವರು ಅಮಾನತುಗೊಳಿಸಿ ಮಂಗಳವಾರ ರಾತ್ರಿ ಆದೇಶಿಸಿದ್ದಾರೆ.



ಗೃಹ ಸಚಿವ ಜಿ.ಪರಮೇಶ್ವರ ಹಾಗೂ ಸೀಮಾಂತ್‌ಕುಮಾರ್ ಸಿಂಗ್ ಅವರು ಪ್ರಕರಣದ ತನಿಖೆಗೆ ಆದೇಶಿಸಿದ್ದರು. ಮಾರತ್‌ಹಳ್ಳಿ ವಿಭಾಗದ ಎಸಿಪಿಯವರು ತನಿಖೆ ನಡೆಸಿ ವರದಿ ಸಲ್ಲಿಸಿದ ಬೆನ್ನಲ್ಲೇ ಸಂಜಯ್ ರಾಥೋಡ್, ಸಂತೋಷ್ ಕುದ್ರಿ ಹಾಗೂ ಅರ್ಚನಾ ಅವರನ್ನು ಅಮಾನತು ಮಾಡಲಾಗಿದೆ. ಪಿಎಸ್‌ಐ ಮೌನೇಶ್ ದೊಡ್ಡಮನಿ ಅವರು ಎನ್‌ಸಿಆರ್ ದಾಖಲಿಸಿಕೊಂಡು ಠಾಣೆಯಿಂದ ಹೊರಹೋಗಿ ಲೋಪ ಎಸಗಿದ್ದಾರೆ. ಅವರ ವಿರುದ್ಧ ರೂಲ್ಸ್ 7 ಜಾರಿ ಮಾಡಲಾಗಿದೆ ಎಂದು ಡಿಸಿಪಿ ತಿಳಿಸಿದ್ದಾರೆ.

ಶೋಭಾ ಡ್ರೀಮ್ ಅಪಾರ್ಟ್‌ಮೆಂಟ್‌ನಲ್ಲಿ ಪ್ರಿಯಾಂಕಾ ಅವರಿಗೆ ಸೇರಿದ ಫ್ಲ್ಯಾಟ್‌ನಲ್ಲಿ ಹೊರರಾಜ್ಯದ ಸುಂದರಿ ಬೀಬಿ (34) ಅವರು ಕೆಲಸ ಮಾಡುತ್ತಿದ್ದರು. ಫ್ಲ್ಯಾಟ್‌ನಲ್ಲಿ ಕಸ ಗುಡಿಸುವಾಗ ಅವರಿಗೆ ₹100 ಸಿಕ್ಕಿತ್ತು. ಅದನ್ನು ಮಾಲೀಕರಿಗೆ ವಾಪಸ್ ಕೊಟ್ಟಿದ್ದರು. ಆದರೆ, ಹಣದ ಜೊತೆಗೆ ಮನೆಯಲ್ಲಿ ವಜ್ರದ ಉಂಗುರ ಸಹ ಕಳ್ಳತನವಾಗಿದೆ ಎಂದು ಆರೋಪಿಸಿದ್ದ ಮಾಲೀಕರು, ವರ್ತೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಬಳಿಕ ಸುಂದರಿ ಬೀಬಿ ಹಾಗೂ ಅವರ ಪತಿಯನ್ನು ಠಾಣೆಗೆ ಕರೆದೊಯ್ದು ಪೊಲೀಸರು ಹಲ್ಲೆ ನಡೆಸಿದ್ದಾರೆ ಎಂಬ ಆರೋಪವಿತ್ತು.

ಪ್ರಕರಣದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ರಾಜ್ಯ ಮಹಿಳಾ ಆಯೋಗವೂ ಸೂಚನೆ ನೀಡಿತ್ತು.

₹48 ಕೋಟಿ ಗಾಂಜಾ ವಾರದಲ್ಲಿ ವಶ

ದೇವನಹಳ್ಳಿ: ಕಳೆದ ಒಂದು ವಾರದ ಅವಧಿಯಲ್ಲಿ ಬ್ಯಾಂಕಾಕ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರತ್ಯೇಕವಾಗಿ ಬಂದಿಳಿದ ನಾಲ್ವರು ಪ್ರಯಾಣಿಕರಿಂದ ಕಸ್ಟಮ್ಸ್ ಅಧಿಕಾರಿಗಳು ಒಟ್ಟು 48.57 ಕೆ.ಜಿ ತೂಕದ ಗಾಂಜಾ, ಹೈಡ್ರೊ ಗಾಂಜಾ ಜಪ್ತಿ ಮಾಡಿದ್ದಾರೆ.

ಒಟ್ಟು 4 ಪ್ರತ್ಯೇಕ ಪ್ರಕರಣಗಳಲ್ಲಿ ವಶಕ್ಕೆ ಪಡೆದ ಗಾಂಜಾದ ಅಂತರರಾಷ್ಟ್ರೀಯ ಮಾರುಕಟ್ಟೆಯ ಮೌಲ್ಯ ₹48 ಕೋಟಿ ಎಂದು ಅಂದಾಜಿಸಲಾಗಿದೆ.

ಸಾರ್ವಜನಿಕ ಆಸ್ತಿಗಳ ಬಳಕೆ ಮುನ್ನ ಕಡ್ಡಾಯ ಪೂರ್ವಾನುಮತಿ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಮೇಲ್ಮನವಿ

ವಿಚಾರಣೆ ಪೂರ್ಣ: ಕಾಯ್ದಿರಿಸಿದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ, ಆವರಣ ಹಾಗೂ ಸಾರ್ವಜನಿಕ ಆಸ್ತಿಗಳನ್ನು ಬಳಸುವ ಮುನ್ನ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು’ ಎಂಬ ರಾಜ್ಯ ಸರ್ಕಾರದ ಆದೇಶದ ಅನುಷ್ಠಾನಕ್ಕೆ ತಡೆ ನೀಡಿರುವುದನ್ನು ಪ್ರಶ್ನಿಸಲಾದ ಮೇಲ್ಮನವಿ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಆದೇಶ ಕಾಯ್ದಿರಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಹಾಗೂ ಕೆ.ಬಿ. ಗೀತಾ ಅವರಿದ್ದ ವಿಭಾಗೀಯ ನ್ಯಾಯಪೀಠ (ಧಾರವಾಡ) ವಿಚಾರಣೆ ನಡೆಸಿ ಈ ಕುರಿತ ಆದೇಶ ಕಾಯ್ದಿರಿಸಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಿಗೆ ನಿರ್ಬಂಧ ಹೇರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 2025ರ ಅಕ್ಟೋಬರ್ 18ರಂದು ಈ ಸಂಬಂಧ ಆದೇಶ ಹೊರಡಿಸಿತ್ತು.

ರಾಜ್ಯ ಸಚಿವ ಸಂಪುಟದ ಈ ನಿರ್ಣಯವನ್ನು ಪ್ರಶ್ನಿಸಿ ಹುಬ್ಬಳ್ಳಿಯ, ‘ಪುನಃಶ್ಚೇತನ ಸೇವಾ ಸಂಸ್ಥೆ’ ಅಧ್ಯಕ್ಷ ವಿನಾಯಕ ಮತ್ತು ‘ವಿ ಕೇರ್ ಫೌಂಡೇಷನ್’ ಅಧ್ಯಕ್ಷ ಗಂಗಾಧರಯ್ಯ, ಧಾರವಾಡದ ರಾಜೀವ ಮಲ್ಹಾರ ಕುಲಕರ್ಣಿ ಹಾಗೂ ಬೆಳಗಾವಿಯ ಉಮಾ ಸತ್ಯಜಿತ್ ಚವಾಣ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಧ್ಯಂತರ ತಡೆ ನೀಡಿತ್ತು.

‘ಸಾರ್ವಜನಿಕ ಸ್ಥಳಗಳಲ್ಲಿ ಹತ್ತಕ್ಕೂ ಅಧಿಕ ಮಂದಿ ಗುಂಪು ಸೇರುವುದನ್ನು ನಿರ್ಬಂಧಿಸಿ ಸರ್ಕಾರ ಹೊರಡಿಸಿರುವ ಆದೇಶವು ಮೇಲ್ನೋಟಕ್ಕೆ ಸಂವಿಧಾನದ 19(1)(ಎ) (ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ) ಹಾಗೂ 19(1)(ಬಿ) (ಶಸ್ತ್ರಾಸ್ತ್ರ ರಹಿತವಾಗಿ, ಶಾಂತಿಯುತವಾಗಿ ಒಟ್ಟುಗೂಡುವ) ವಿಧಿ ಅಡಿಯಲ್ಲಿ ಸಾರ್ವಜನಿಕರಿಗೆ ದೊರೆತಿರುವ ಹಕ್ಕುಗಳನ್ನು ಕಸಿದುಕೊಳ್ಳುವಂತಿವೆ. ಸಂವಿಧಾನ ಪ್ರದತ್ತವಾದ ಹಕ್ಕನ್ನು ಕಾನೂನು ಜಾರಿಗೊಳಿಸುವ ಮೂಲಕ ಕಸಿದು-ಕೊಳ್ಳಬಹುದೇ ಹೊರತು ಸರ್ಕಾರಿ ಆದೇಶ ಹೊರಡಿಸುವ ಮೂಲಕವಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ಕಳೆದ ಅಕ್ಟೋಬರ್ 28ರಂದು ಮಧ್ಯಂತರ ಆದೇಶ ಹೊರಡಿಸಿತ್ತು.

‘ಒಂದೊಮ್ಮೆ, ಸರ್ಕಾರದ ಆದೇಶವನ್ನು ಹೀಗೇ ಬಿಟ್ಟರೆ, ಸಾರ್ವಜನಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಂತಾಗಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶವನ್ನು ಕಾರ್ಯಗತಗೊಳಿಸಲು ಅನುಮತಿಸಲು ಸಾಧ್ಯವಿಲ್ಲ’ ಎಂದಿತ್ತು.

ಟೆಕಿ ಕೊಲೆ ಪ್ರಕರಣ: ಜೀವಾವಧಿ ಶಿಕ್ಷೆ

ಬೆಂಗಳೂರು: ಮೂತ್ರ ವಿಸರ್ಜನೆಗಾಗಿ ಕಾರಿನಿಂದ ಇಳಿದು ನಡೆದುಕೊಂಡು ಹೋಗುವಾಗ ಬೈಕ್‌ನಿಂದ ಗುದ್ದಿದ್ದನ್ನು ಪ್ರಶ್ನಿಸಿದ್ದಕ್ಕೆ ಟೆಕಿಯನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದ ಇಬ್ಬರು ಅಪರಾಧಿಗಳಿಗೆ ನಗರದ 59ನೇ ಸಿಸಿಎಚ್ ನ್ಯಾಯಾಲಯ ಜೀವಾವಧಿ ಶಿಕ್ಷೆ ಪ್ರಕಟಿಸಿದೆ.

ಮೈಕೋಲೇಔಟ್‌ನ ಗಿರೀಶ್ (21) ಮತ್ತು ಮಹೇಶ್(19) ಶಿಕ್ಷೆಗೆ ಒಳಗಾದವರು. 2018ರ ಜೂನ್ 26ರಂದು ಬಿಹಾರದ ಸಿದ್ಧಾರ್ಥ್ ಕೌಶಲ್ ಅವರಿಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದರು.

ಈ ಸಂಬಂಧ ಮೈಕೋಲೇಔಟ್ ಠಾಣೆ ಪೊಲೀಸರು ಆರೋಪಿಗಳಾದ ಗಿರೀಶ್ ಮತ್ತು ಮಹೇಶ್‌ನನ್ನು ಬಂಧಿಸಿದ್ದರು. ಬಳಿಕ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಕೋರ್ಟ್, ಇಬ್ಬರು ಅಪರಾಧಿಗಳಿಗೆ ತಲಾ ₹10 ಸಾವಿರ ದಂಡ ಹಾಗೂ ಜೀವಾವಧಿ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ.

ಕೊಲೆಯಾದ ಟೆಕಿಯ ಜನ್ಮದಿನಾಚರಣೆ ದಿನದಂದೇ ಶಿಕ್ಷೆ ಪ್ರಕಟಗೊಂಡಿದ್ದು, ಸಿದ್ಧಾರ್ಥ್ ಕೌಶಲ್ ಅವರ ತಂದೆ ಬಿಹಾರದಿಂದ ಬೆಂಗಳೂರಿಗೆ ಬಂದು ಪೊಲೀಸರಿಗೆ ಧನ್ಯವಾದ ತಿಳಿಸಿದ್ದಾರೆ.

ಚಿತ್ರಾವಳಿ


ಸ್ಪರ್ಶ್ ಆಸ್ಪತ್ರೆಯ ಹೆಣ್ಣೂರು ಶಾಖೆಯಲ್ಲಿ ನಿರ್ಮಾಣಗೊಂಡಿರುವ ಕ್ಯಾನ್ಸರ್ ಚಿಕಿತ್ಸಾ ಘಟಕವನ್ನು ಚಲನಚಿತ್ರ ನಟ ಶಿವರಾಜ್ ಕುಮಾರ್ ಅವರು ಮಂಗಳವಾರ ಉದ್ಘಾಟಿಸಿದರು. ನಟಿ ಪ್ರೇಮಾ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ, ಸ್ಪರ್ಶ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ.ಶರಣ್ ಶಿವರಾಜ್ ಪಾಟೀಲ ಉಪಸ್ಥಿತರಿದ್ದರು



ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ‘ಶ್ರೀ ಪರಮೇಶ್ವರ ಪುಲಿಕೇಶಿ ಪ್ರಶಸ್ತಿ’ಯನ್ನು ಪ್ರದಾನ ಮಾಡಲಾಯಿತು. ಕೇಂದ್ರ ಜಲಶಕ್ತಿ ಹಾಗೂ ರೈಲ್ವೇ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಗುರುದೇವ್ ನಾರಾಯಣ ಕುಮಾರ್, ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ಉಪಸ್ಥಿತರಿದ್ದರು



ಬಿ.ಎಂ.ಶ್ರೀ. ಪ್ರತಿಷ್ಠಾನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹೋರಾಟಗಾರರೂ ಆದ ಪತ್ರಕರ್ತ ರು.ಬಸಪ್ಪ ಅವರಿಗೆ ‘ಕನ್ನಡ ಪರ ಹೋರಾಟ ರತ್ನ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ಎಡದಿಂದ) ಪ್ರತಿಷ್ಠಾನದ ಕೋಶಾಧಿಕಾರಿ ಚಂದ್ರಶೇಖರ ನಾದೂರು, ಕಾರ್ಯದರ್ಶಿ ಶಾಂತರಾಜು, ದತ್ತಿದಾನಿ ರಾಣಿ ಗೋವಿಂದರಾಜು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು

ನಿಧನ ವಾರ್ತೆ

ಜಯಂತ್ ಕಾಮತ್



ಬೆಂಗಳೂರು: ಬಸವನಗುಡಿಯಲ್ಲಿ ದಿನ ಪತ್ರಿಕೆ ವಿತರಕರಾಗಿದ್ದ ಜಯಂತ್ ಕಾಮತ್ (66) ಅವರು ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. 40 ವರ್ಷಗಳಿಂದ ಬಸವನಗುಡಿ ಭಾಗದಲ್ಲಿ ದಿನ ಪತ್ರಿಕೆಗಳ ವಿತರಕರಾಗಿ ಕೆಲಸ ಮಾಡುತ್ತಿದ್ದರು.

₹19 ಕೋಟಿ ಅನುದಾನ ಕೋರಿ ಪ್ರಸ್ತಾವ

ದೌರ್ಜನ್ಯಗಳ ಬಗ್ಗೆ ಅರಿವು ಮೂಡಿಸಲು ಮಹಿಳಾ ಆಯೋಗದಿಂದ ಕಾರ್ಯಕ್ರಮ

• ಖಲೀಲಅಹ್ಮದ ಶೇಖ

ಬೆಂಗಳೂರು: ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ 31 ಜಿಲ್ಲೆಗಳಲ್ಲಿ ಮಹಿಳಾ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ಜಾಗೃತಿ ಫಲಕ ಅಳವಡಿಕೆ, ಪ್ರತ್ಯೇಕ ಆ್ಯಪ್ ಮತ್ತು ಸಹಾಯವಾಣಿ ಆರಂಭಿಸಲು ಹೆಚ್ಚುವರಿಯಾಗಿ ₹19.80 ಕೋಟಿ ಅನುದಾನ ನೀಡುವಂತೆ ರಾಜ್ಯ ಮಹಿಳಾ ಆಯೋಗವು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಮಹಿಳೆಯರ ಹಕ್ಕುಗಳ ರಕ್ಷಣೆ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಯಲು 2013ರ ಕಾಯ್ದೆಯ ಪ್ರಕಾರ 10ಕ್ಕಿಂತ ಹೆಚ್ಚು ಸಿಬ್ಬಂದಿ ಕರ್ತವ್ಯ ನಿರ್ವಹಿಸುವ ಸರ್ಕಾರಿ ಅಥವಾ ಖಾಸಗಿ ಕಚೇರಿಗಳು, ಕಾರ್ಖಾನೆಗಳು, ಗಾರ್ಮೆಂಟ್ಸ್, ವಿಶ್ವವಿದ್ಯಾಲಯಗಳು, ಸಂಘ– ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚಿಸುವ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

'ಆಯೋಗದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ದೂರುಗಳನ್ನು ಸ್ವೀಕರಿಸುವ ವ್ಯವಸ್ಥೆ ಇಲ್ಲ. ನೂತನ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ದೂರು ಸ್ವೀಕಾರ, ದೂರಿನ ಸ್ಥಿತಿಗತಿ, ವಿಲೇವಾರಿಯಾದ ದೂರುಗಳ ಮಾಹಿತಿ ಇರಲಿದೆ. ಇದರಿಂದ ಸಂತ್ರಸ್ತರಿಗೆ ನ್ಯಾಯ ದೊರಕಿಸಿ ಕೊಡಲು ಅನುಕೂಲವಾಗಲಿದೆ. ಜೊತೆಗೆ ಪಾರದರ್ಶಕವಾಗಿ ಕಾರ್ಯನಿರ್ವಹಿಸಲು ಸಹಾಯಕವಾಗುತ್ತದೆ' ಎಂದು ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

> **ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್‌ಆರ್) ಬಳಸಿಕೊಂಡು ಮಹಿಳಾ ಆಯೋಗವನ್ನು ಮೇಲ್ದರ್ಜೆಗೇರಿಸಲು ಚಿಂತನೆ ನಡೆದಿದೆ**
> **ಡಾ. ನಾಗಲಕ್ಷ್ಮೀ ಚೌಧರಿ,**
> ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

'ಇತ್ತೀಚೆಗೆ ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಪೋಕ್ಸೊ ಕಾಯ್ದೆ ಅಡಿ ದಾಖಲಾಗುವ ಪ್ರಕರಣಗಳು ಹೆಚ್ಚುತ್ತಿವೆ. ಈ ಬಗ್ಗೆ ಸಾರ್ವಜನಿಕರಲ್ಲಿ ಮಹಿಳಾ ಕಾನೂನುಗಳ ಕುರಿತು ಜಾಗೃತಿ ಮೂಡಿಸುವ ಅವಶ್ಯಕತೆ ಇದೆ' ಎಂದು ಹೇಳಿದರು.

'ವಿಭಾಗೀಯ, ಜಿಲ್ಲಾ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಕೆಲಸ ಮಾಡುವ ಸ್ಥಳಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚಿಸಿರುವ ಕುರಿತು ಸಮೀಕ್ಷೆ ನಡೆಸಬೇಕಾಗಿದೆ. ಮಾಧ್ಯಮ ನಿರ್ವಹಣೆ, ಮಹಿಳಾ ಸಹಾಯ ವೇದಿಕೆ, ಪ್ರತ್ಯೇಕ ಸಹಾಯವಾಣಿ, ಮಹಿಳಾ ಆಯೋಗದ ಆ್ಯಪ್ ರಚಿಸುವ ಅವಶ್ಯಕತೆ ಇದೆ' ಎನ್ನುತ್ತಾರೆ ನಾಗಲಕ್ಷ್ಮೀ ಚೌಧರಿ.

'ರಾಜ್ಯದ ಯಾವುದೇ ಭಾಗದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದರೆ, ಬೆಂಗಳೂರಿನ ಕೇಂದ್ರ ಕಚೇರಿಗೆ ಬಂದು ದೂರು ನೀಡಬೇಕಾಗಿದೆ. ಇದಕ್ಕಾಗಿ ಕೇವಲ ಐದು ಮಂದಿ ಸಿಬ್ಬಂದಿ ನಿಯೋಜಿಸಿದ್ದು, ಇದರಲ್ಲಿ ಒಬ್ಬರು ಕಾಯಂ. ಉಳಿದವರು ಗುತ್ತಿಗೆ ಆಧಾರದಲ್ಲಿ ಕಡಿಮೆ ಸಂಬಳದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರಿಂದ ಕೆಲಸದ ಒತ್ತಡವೂ ಹೆಚ್ಚಾಗಿ, ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ' ಎಂದು ಆಯೋಗದ ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅಂಕಿ ಅಂಶಗಳು

- **₹10 ಕೋಟಿ** ಮಹಿಳಾ ಕಾನೂನಿನ ಜಾಗೃತಿ ಫಲಕ ಅಳವಡಿಕೆಗೆ
- **₹5 ಕೋಟಿ** ವಿಭಾಗೀಯ, ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಕಾನೂನು ಅರಿವು ಕಾರ್ಯಕ್ರಮಗಳಿಗೆ
- **₹2 ಕೋಟಿ** ಆಂತರಿಕ ದೂರು ಸಮಿತಿಯ ಸಮೀಕ್ಷೆ ನಡೆಸಲು
- **₹40 ಲಕ್ಷ** ಗ್ರಾಮ ಪಂಚಾಯಿತಿಗಳಿಗೆ ಕೈಪಿಡಿ ಮುದ್ರಿಸಿ ಸರಬರಾಜು ಮಾಡಲು
- **₹2 ಕೋಟಿ** ಮಾಧ್ಯಮ ನಿರ್ವಹಣೆ, ಮಹಿಳಾ ಸಹಾಯ ವೇದಿಕೆ, ಸಹಾಯವಾಣಿ, ಆ್ಯಪ್ ರಚನೆ
- **₹40 ಲಕ್ಷ** ಹೊರಗುತ್ತಿಗೆ ನೌಕರರ ವೇತನ ಹೆಚ್ಚಿಸಲು
- **₹19.80 ಕೋಟಿ** ಒಟ್ಟು ಬೇಡಿಕೆ

ಇನ್ನೂ ಸದಸ್ಯರ ನೇಮಕ ಮಾಡದ ಸರ್ಕಾರ

ಡಾ.ನಾಗಲಕ್ಷ್ಮೀ ಚೌಧರಿ ಅವರು ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡು 1 ವರ್ಷ ಏಳು ತಿಂಗಳು ಆಗಿದೆ. ಆಯೋಗದಲ್ಲಿ ಖಾಲಿ ಇರುವ ಆರು ಮಂದಿ ನಾಮನಿರ್ದೇಶಿತ ಸದಸ್ಯರ ಸ್ಥಾನಗಳನ್ನು ಮೂರು ತಿಂಗಳೊಳಗೆ ತುಂಬಬೇಕು ಎಂಬ ನಿಯಮ ಇದೆ. ಆದರೆ ರಾಜ್ಯ ಸರ್ಕಾರ ಇದುವರೆಗೂ ಸದಸ್ಯರನ್ನು ನೇಮಕ ಮಾಡಿಲ್ಲ.

ಮಲ್ಲೇಶ್ವರ: ಕಡಲೆಕಾಯಿ ಪರಿಷೆ 8ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಮರಾಂಬ ಸಮೇತ ಕಾಡು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಹಾಗೂ ಕಾಡು ಮಲ್ಲೇಶ್ವರ ಬಳಗದಿಂದ ನವೆಂಬರ್ 8ರಿಂದ 10ರವರೆಗೆ ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿ ಒಂಬತ್ತನೇ ವರ್ಷದ ಕಡಲೆಕಾಯಿ ಪರಿಷೆ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ, 'ನಗರದ ಜನರಿಗೆ ಗ್ರಾಮೀಣ ಸಂಸ್ಕೃತಿ, ಜೀವನ ಪದ್ಧತಿಯನ್ನು ಪರಿಚಯಿಸಲು ಕಾರ್ತಿಕ ಮಾಸದಲ್ಲಿ ಮೂರು ದಿನ ಕಡಲೆಕಾಯಿ ಪರಿಷೆ ಹಮ್ಮಿಕೊಳ್ಳಲಾಗಿದೆ. ಕಡಲೆಕಾಯಿ ಪರಿಷೆಯಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣದಿಂದ ರೈತರು ಕಡಲೆಕಾಯಿ ತಂದು ಮಾರಾಟ ಮಾಡಲಿದ್ದಾರೆ. 400ಕ್ಕೂ ಹೆಚ್ಚು ಮಳಿಗೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ನ.8ರಂದು ಸಂಜೆ 5ಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಕಡಲೆಕಾಯಿ ಪರಿಷೆಗೆ ಚಾಲನೆ ನೀಡಿಲಿದ್ದಾರೆ. ಸಂಜೆ 6.30ಕ್ಕೆ 'ಪುಟ್ಟಣ್ಣ ಕಣಗಾಲ್' ನೆನಪಿನ ಹಾಡುಗಳನ್ನು ಸವಿತಾ ಗಣೇಶ್ ಪ್ರಸಾದ್ ಪ್ರಸ್ತುತಪಡಿಸಲಿದ್ದು, ಶಾಸಕ ವಿಜಯಾನಂದ ಕಾಶಪ್ಪನವರ, ವೀರಕಪುತ್ರ ಶ್ರೀನಿವಾಸ್ ಭಾಗವಹಿಸಲಿದ್ದಾರೆ' ಎಂದರು.

'ನ. 9ರಂದು ಬೆಳಿಗ್ಗೆ 11ಕ್ಕೆ ಮಧುಮನೋಹರನ್, ಕಾರ್ತಿಕ್ ಪಾಂಡವಪುರ ತಂಡದಿಂದ ಭಾವ ಸಂಗೀತ ಸಂಗಮ' ಸಂಗೀತ ಕಛೇರಿ ನಡೆಯಲಿದೆ. ಸಂಜೆ 5ಕ್ಕೆ ಹುಣ್ಣಿಮೆ ಹಾಡು ವಾರ್ಷಿಕ ಪ್ರಶಸ್ತಿಯನ್ನು ಗರ್ತಿಕೆರೆ ರಾಘಣ್ಣ ಅವರಿಗೆ ಪ್ರದಾನ ಮಾಡಲಾಗುತ್ತದೆ. ಸಂಜೆ 6ಕ್ಕೆ ಡಾ. ರಾಜ್‌ಕುಮಾರ್ ಮಾಧುರ್ಯದ ನೆನಪಿನಲ್ಲಿ ಸಂಗೀತ ಕಛೇರಿ ನಡೆಯಲಿದೆ ಎಂದು ತಿಳಿಸಿದರು.

ನ.10ರಂದು ಸಂಜೆ 5ಕ್ಕೆ ಕಡಲೆಕಾಯಿ ಪರಿಷೆ ಸಂಪನ್ನಗೊಳ್ಳಲಿದ್ದು, ಸಂಜೆ 6.30ಕ್ಕೆ ಹುಣ್ಣಿಮೆ ಹಾಡು 255ರ ಕಾರ್ಯಕ್ರಮದಲ್ಲಿ ಕಾರ್ತಿಕ್ ಮಣಿ ಮತ್ತು ಜರ್ಮನಿಯ ಮ್ಯಾಗ್ನಸ್ ಡವ್‌ನರ್ ತಂಡದಿಂದ ಜರ್ಮನಿ ಕರ್ನಾಟಕ ಸಂಗೀತ ತಾಳವಾದ್ಯ ಜರುಗಲಿದೆ ಎಂದರು.

ಮುಖ್ಯಾಂಶಗಳು

- ಕಾಡುಮಲ್ಲೇಶ್ವರ ದೇಗುಲದ ಆವರಣದಲ್ಲಿ ಆಯೋಜನೆ
- 400ಕ್ಕೂ ಹೆಚ್ಚು ಮಳಿಗೆಗಳ ಸ್ಥಾಪನೆ
- 10ರಂದು ಪರಿಷೆ ಸಂಪನ್ನ

ಇಕೋ ವಾಚ್ ಸುರೇಶ್ ಹೆಬ್ಳೀಕರ್‌ರವರು ಮತ್ತು ಕೃಪಾನಿಧಿ ಸಮೂಹ ಸಂಸ್ಥೆಗಳ ಸಹ ಸಂಸ್ಥಾಪಕರಾದ ಗೀತಪ್ರಿಯರವರು ಸೇರಿ ಮತ್ತಿತರ ಸಂಸ್ಥೆಗಳ ಜಂಟಿ ಸಹಯೋಗದಲ್ಲಿ ನ.6ರಿಂದ ನ.10ರವರೆಗೆ ಚಿತ್ರಕಲಾ ಪ್ರದರ್ಶನ ಮತ್ತು ನ. 10ರಂದು ರಾಷ್ಟ್ರಮಟ್ಟದ ಪರಿಸರ ತಜ್ಞರ ಸಭೆ

ಚಿತ್ರಕಲಾ ಸ್ಪರ್ಧೆ, ರಾಷ್ಟ್ರಮಟ್ಟದ ಸಭೆ



ಬೆಂಗಳೂರು : ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಯ ಕುರಿತು ಬೆಂಗಳೂರಿನ ಇಕೋ ವಾಚ್ ಸುರೇಶ್ ಹೆಬ್ಳೀಕರ್‌ರವರು ಮತ್ತು ಕೃಪಾನಿಧಿ ಸಮೂಹ ಸಂಸ್ಥೆಗಳ ಸಹ ಸಂಸ್ಥಾಪಕರಾದ ಗೀತಪ್ರಿಯರವರು ಸೇರಿ ಮತ್ತಿತರ ಸಂಸ್ಥೆಗಳ ಜಂಟಿ ಸಹಯೋಗದಲ್ಲಿ ಚಿತ್ರಕಲಾ ಪ್ರದರ್ಶನ ಮತ್ತು ರಾಷ್ಟ್ರಮಟ್ಟದ ಪರಿಸರ ತಜ್ಞರ ಸಭೆ ನಡೆಯಲಿದೆ. ಚಿತ್ರಕಲಾ ಪರಿಷತ್ತಿನಲ್ಲಿ ನ.6ರಿಂದ ಚಿತ್ರಕಲಾ ಪ್ರದರ್ಶನ ನಡೆಯಲಿದ್ದು, ನ.10ರಂದು ರಾಷ್ಟ್ರೀಯ ಸಮ್ಮೇಳನ ನಡೆಯಲಿದೆ. ದಕ್ಷಿಣ ಭಾರತದ ವಿವಿಧ ರಾಜ್ಯಗಳಿಂದ 65ಕ್ಕೂ ಹೆಚ್ಚು ಕಲಾವಿದರು ಈ ಚಿತ್ರಕಲಾ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದು, ಪಶ್ಚಿಮ ಘಟ್ಟಗಳ ಹಸಿರು ಜೀವವೈವಿಧ್ಯ ಶ್ರೀಮಂತಿಕೆಯ ಮಹತ್ವ ಸಾರಲಿರುವ ನಾನಾ ಕಲಾಕೃತಿಗಳು ಪ್ರದರ್ಶನಗೊಳ್ಳಲಿವೆ. ಜತೆಗೆ, ನ.10ರಂದು ರಾಷ್ಟ್ರಮಟ್ಟದ ಸಭೆ ನಡೆಯಲಿದ್ದು, ರಾಜ್ಯ ಮಾತ್ರವಲ್ಲದೆ ಕೇರಳ, ಮಹಾರಾಷ್ಟ್ರ, ಪಾಂಡಿಚೇರಿ, ಗೋವಾ, ತಮಿಳುನಾಡಿನ ವಿಷಯ ತಜ್ಞರಿಂದ ಪಶ್ಚಿಮ ಘಟ್ಟಗಳ ಕುರಿತಾದ ಗಂಭೀರ ಚರ್ಚೆಗಳು ನಡೆಯಲಿವೆ. ಚಿತ್ರಕಲಾ ಪ್ರದರ್ಶನ ಮತ್ತು ರಾಷ್ಟ್ರಮಟ್ಟದ ಸಭೆ ಮೂಲಕ ದಕ್ಷಿಣ ಭಾರತದ ಕೈಗಾರಿಕೆಗಳು, ಉದ್ಯಮಿಗಳು, ಸರ್ಕಾರೇತರ ಕಂಪನಿಗಳು, ಅಭಿವೃದ್ಧಿ ಸಂಸ್ಥೆಗಳನ್ನೊಳಗೊಂಡಂತೆ ಸಾರ್ವಜನಿಕರಲ್ಲಿ ಪಶ್ಚಿಮ ಘಟ್ಟಗಳ ಮಹತ್ವ ಸಾರುವುದು ಅತಿಮುಖ್ಯ ಗುರಿಯಾಗಿದೆ. ಜತೆಗೆ, ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಕಾನೂನಾತ್ಮಕ ಹಾದಿಗಳ ಬಗ್ಗೆ ಸಮಗ್ರ ಚರ್ಚೆ ನಡೆಸಿ, ಕೈಗೊಳ್ಳಬೇಕಿರುವ ಎಲ್ಲಾ ಪ್ರಯತ್ನಗಳ ಕುರಿತು ಕೆಲ ಗಂಭೀರ ನಿರ್ಧಾರಗಳನ್ನು ಕಂಡುಕೊಳ್ಳುವುದಾಗಿದೆ.

ಮೆಗಾ - ಜೀವವೈವಿಧ್ಯ ತಾಣ!: ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಹರಡಿರುವ ಪಶ್ಚಿಮ ಘಟ್ಟಗಳನ್ನು ಹಿಂದಿನಿಂದಲೂ ವಿಶ್ವದ ಜಾಗತಿಕ ಮೆಗಾ-ಜೀವವೈವಿಧ್ಯ ತಾಣಗಳಲ್ಲಿ ಒಂದೆಂದು ಘೋಷಿಸಲಾಗಿದೆ. ಕೇವಲ ಪರಿಸರಾತ್ಮಕವಾಗಿ ಮಾತ್ರವಲ್ಲದೇ ದಕ್ಷಿಣ ಭಾರತದ ವಾತಾವರಣದ ಮೇಲೆ ಗಂಭೀರ ಪರಿಣಾಮ ಬೀರಬಲ್ಲ ಸಂಪರ್ಕ ಕೊಂಡಿಯಾಗಿಯೂ ಪಶ್ಚಿಮ ಘಟ್ಟಗಳು ಗುರುತಿಸಿಕೊಂಡಿವೆ. 40ಕೋಟಿಗೂ ಹೆಚ್ಚಿನ ಜನರ ಜೀವನಕೊಂಡಿಯಾಗಿ ಇಲ್ಲಿನ ಪ್ರಕೃತಿ ನೆಲೆಗೊಂಡಿದೆ. ಔಷಧೀಯ ಸಸ್ಯಗಳು, ವನ್ಯರಾಶಿ, ಮೇವು, ಖನಿಜಗಳು, ಅನೇಕ ನದಿಗಳ ಉಗಮ ಸ್ಥಾನವಾಗಿರುವ ಪಶ್ಚಿಮ ಘಟ್ಟಗಳ ಉಳಿವಿಗಾಗಿ ಬೆಂಗಳೂರಿನಲ್ಲಿ ಈ ಸಮ್ಮೇಳನ ನಡೆಯುತ್ತಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ವಾಲ್‌ಮಾರ್ಟ್ ಜತೆ ರಾಷ್ಟ್ರೀಯ ಜೀವನೋಪಾಯ ಮಿಷನ್ ಒಪ್ಪಂದ

'ಎಸ್‌ಎಚ್‌ಜಿ'ಗೆ ಇ–ಕಾಮರ್ಸ್ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸ್ವಸಹಾಯ ಗುಂಪುಗಳಿಗೆ (ಎಸ್‌ಎಚ್‌ಜಿ) ಇನ್ನು ಮುಂದೆ ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸುವ ಮತ್ತು ಮಾರಾಟ ಮಾಡುವ ಅವಕಾಶ ದೊರೆಯಲಿದೆ.

ಸ್ವಸಹಾಯ ಗುಂಪುಗಳ ಸಾಮರ್ಥ್ಯ ಹೆಚ್ಚಿಸಲು ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ರಾಷ್ಟ್ರೀಯ ಜೀವನೋಪಾಯ ಮಿಷನ್ (ಎನ್‌ಎಲ್‌ಎಂ), ಬಹುರಾಷ್ಟ್ರೀಯ ಕಂಪನಿ ವಾಲ್‌ಮಾರ್ಟ್ ಜತೆ ಒಪ್ಪಂದ ಮಾಡಿಕೊಂಡಿದೆ.

ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೇತೃತ್ವದಲ್ಲಿ ಎನ್‌ಎಲ್‌ಎಂ ನಿರ್ದೇಶಕಿ ಆರ್. ಸ್ನೇಹಲ್ ಮತ್ತು ಐ2ಐ ಫೌಂಡೇಶನ್‌ನ ಟ್ರಸ್ಟಿ ಪಾರುಲ್ ಸೋನಿ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದರು. ಫ್ಲಿಪ್‌ಕಾರ್ಟ್ ಮತ್ತು ವಾಲ್‌ಮಾರ್ಟ್ ಸಂಸ್ಥೆಯ ಮಾರುಕಟ್ಟೆ ಜತೆ ಇ-ಕಾಮರ್ಸ್ ಸಂಪರ್ಕವನ್ನು ಸಾಧಿಸಲು ಈ ಒಪ್ಪಂದ ಅವಕಾಶ ಕಲ್ಪಿಸಲಿದೆ.

ಒಪ್ಪಂದ ಮೂರು ವರ್ಷಗಳ ಅವಧಿ ಒಳಗೊಂಡಿದ್ದು, ವಾಲ್‌ಮಾರ್ಟ್ ವೃದ್ಧಿಯ ಅನುಷ್ಠಾನ ಪಾಲುದಾರ 'ಐಡಿಯಾಸ್ ಟು ಇಂಪ್ಯಾಕ್ಟ್ ಫೌಂಡೇಶನ್ ಮೂಲಕ ಸ್ವಸಹಾಯ ಗುಂಪುಗಳಿಗೆ ಉಚಿತ ಡಿಜಿಟಲ್ ಕಲಿಕೆ ತರಬೇತಿ, ವ್ಯಾಪಾರ ಪರಿಕರ ಮತ್ತು ಮಾರ್ಗದರ್ಶನ ನೀಡಲಿದೆ. ಸ್ವಸಹಾಯ ಗುಂಪುಗಳಿಗೆ ಡಿಜಿಟಲ್ ವ್ಯವಸ್ಥೆ, ಇ-ಕಾಮರ್ಸ್ ಮತ್ತು ಮಾರ್ಕೆಟಿಂಗ್ ಮತ್ತು ಇತರ ಸಾಮರ್ಥ್ಯಗಳಲ್ಲಿ ವಿಶೇಷ ತರಬೇತಿ ದೊರೆಯಲಿದೆ.



ರಾಷ್ಟ್ರೀಯ ಜೀವನೋಪಾಯ ಮಿಷನ್ ನಿರ್ದೇಶಕಿ ಆರ್. ಸ್ನೇಹಲ್ ಮತ್ತು ಐ2ಐ ಫೌಂಡೇಶನ್‌ನ ಟ್ರಸ್ಟಿ ಪಾರುಲ್ ಸೋನಿ ಒಪ್ಪಂದಕ್ಕೆ ಸಹಿ ಹಾಕಿದರು. ಸಚಿವ ಶರಣ ಪ್ರಕಾಶ ಪಾಟೀಲ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು

> **ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಶೇಷ ಸ್ವಸಹಾಯ ಗುಂಪುಗಳ ಉತ್ಪನ್ನಗಳ ಕೇಂದ್ರವನ್ನು ಸ್ಥಾಪಿಸಲಾಗುವುದು**
> **ಶಾಲಿನಿ ರಜನೀಶ್,**
> ಸರ್ಕಾರದ ಮುಖ್ಯ ಕಾರ್ಯದರ್ಶಿ

ಒಪ್ಪಂದದ ನಂತರ ಮಾತನಾಡಿದ ಸಚಿವ ಶರಣ ಪ್ರಕಾಶ ಪಾಟೀಲ, 'ಈ ಒಪ್ಪಂದದಿಂದ ಸ್ವಸಹಾಯ ಗುಂಪುಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಹೊಸ ಮಾರುಕಟ್ಟೆಗಳಿಗೆ ಅವಕಾಶ, ಆದಾಯ ಸಿಗಲಿದೆ' ಎಂದರು.

ವಾಲ್‌ಮಾರ್ಟ್ ಹಿರಿಯ ಉಪಾಧ್ಯಕ್ಷ ಜೇಸನ್ ಫ್ರೆಮ್‌ಸ್ಟಾಡ್ ಮಾತನಾಡಿ, 'ಒಪ್ಪಂದದ ಫಲವಾಗಿ ಸ್ವಸಹಾಯ ಗುಂಪುಗಳ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸಲು ಅವಕಾಶ ದೊರೆಯಲಿದೆ' ಎಂದರು.

ಕಾರ್ತಿಕ ಹುಣ್ಣಿಮೆ ದೀಪೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಜಿಎಸ್ ಬಡಾವಣೆ ಅರೇಹಳ್ಳಿ ಹನುಮಗಿರಿ ಸೇವಾ ಸಮಿತಿಯಿಂದ ಇದೇ 5ರಂದು ಸಂಜೆ 5 ಗಂಟೆಗೆ ಹನುಮಗಿರಿ ಬೆಟ್ಟದ ಮೇಲಿರುವ ಅರ್ಕೇಶ್ವರಸ್ವಾಮಿ, ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಎರಡನೇ ವರ್ಷದ ಕಾರ್ತಿಕ ಹುಣ್ಣಿಮೆ ದೀಪೋತ್ಸವ ನಡೆಯಲಿದೆ.

ತಿರುವಣ್ಣಾಮಲೈ ಮಾದರಿಯಲ್ಲಿ ಕಾರ್ತಿಕ ದೀಪೋತ್ಸವ ನಡೆಯಲಿದೆ. ತಿರುವಣ್ಣಾಮಲೈಯಲ್ಲಿ ವಿಶೇಷ ತಾಮ್ರದ ದೀಪ ಸಿದ್ಧಪಡಿಸಿ ಹನುಮಗಿರಿ ಬೆಟ್ಟಕ್ಕೆ ತರಲಾಗಿದೆ. ಸುಮಾರು 1 ಸಾವಿರ ಕೆ.ಜಿ ತುಪ್ಪ ಹಾಗೂ 1 ಸಾವಿರ ಮೀಟರ್ ಕೋರಾ ಬಟ್ಟೆಯನ್ನು ಬಳಸಲಾಗುತ್ತದೆ. 5.5 ಅಡಿ ಎತ್ತರವಿರುವ ತಾಮ್ರದ ದೀಪಸ್ತಂಭವನ್ನು ನಿರ್ಮಿಸಿ ಅಲಂಕರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಬ್ಬಿಗೆ ಎಂಆರ್‌ಪಿ ನಿಗದಿ ಮಾಡೋದು ಕೇಂದ್ರ: ಸಿ.ಎಂ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ): 'ಕಬ್ಬಿಗೆ ಗರಿಷ್ಠ ಚಿಲ್ಲರೆ ಮಾರಾಟ ದರ (ಎಂಆರ್‌ಪಿ) ನಿಗದಿ ಮಾಡಬೇಕಿರುವುದು ಕೇಂದ್ರ ಸರ್ಕಾರವೇ ಹೊರತು ರಾಜ್ಯ ಸರ್ಕಾರ ಅಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಬ್ಬಿನ ದರ ಹೆಚ್ಚಿಸುವಂತೆ ಕಬ್ಬು ಬೆಳೆಗಾರರು ಬೆಳಗಾವಿ, ಬಾಗಲಕೋಟೆಯಲ್ಲಿ ಪ್ರತಿಭಟಿಸುತ್ತಿರುವುದು ಗಮನಕ್ಕೆ ಬಂದಿದೆ' ಎಂದು ಹೇಳಿದರು.

'ಮಹಾರಾಷ್ಟ್ರದಲ್ಲಿ ಹೆಚ್ಚು ದರ ನೀಡುತ್ತಿದ್ದು, ಅದಕ್ಕೆ ಸಮಾನಾಂತರವಾಗಿ ದರ ನಿಗದಿ ಮಾಡಬೇಕೆಂದು ಕೋರಿದ್ದಾರೆ. ಈ ಸಂಬಂಧ ರೈತರೊಂದಿಗೆ ಚರ್ಚಿಸಲು ಸಚಿವರಾದ ಸತೀಶ ಜಾರಕಿಹೊಳಿ, ಶಿವಾನಂದ ಪಾಟೀಲ, ಎಂ.ಬಿ.ಪಾಟೀಲ ಜೊತೆ ಮಾತನಾಡಿದ್ದೇನೆ' ಎಂದರು.

'ಕೇಂದ್ರ ಸರ್ಕಾರಕ್ಕೆ ರಾಜ್ಯದಿಂದ ₹4.50 ಲಕ್ಷ ಕೋಟಿ ತೆರಿಗೆ ಕೊಡುತ್ತೇವೆ. ಆದರೆ, ಒಂದು ರೂಪಾಯಿಯಲ್ಲಿ ನಮಗೆ ಮರಳಿ ಬರುತ್ತಿರುವುದು ಕೇವಲ 14ರಿಂದ 15 ಪೈಸೆ ಅಷ್ಟೆ. 85 ಪೈಸೆ ತೆರಿಗೆ ದುಡ್ಡು ಅವರೇ ಇಟ್ಟುಕೊಳ್ಳುತ್ತಿದ್ದಾರೆ' ಎಂದರು.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: 2025-26ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪದವಿ ಕೋರ್ಸ್‌ಗಳಿಗೆ ಸೀಟು ಆಯ್ಕೆ ಮಾಡಿಕೊಂಡಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅರಿವು ರಿನ್ಯೂವಲ್ ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ನೀಡಲು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಆಸಕ್ತ ವಿದ್ಯಾರ್ಥಿಗಳು ಅರ್ಜಿಗಳನ್ನು ವೆಬ್‌ಸೈಟ್: www.kmdconline.karnataka.gov.in ಮೂಲಕ ಡಿ.3ರೊಳಗೆ ಸಲ್ಲಿಸಬೇಕು. ಇದಾದ ಬಳಿಕ ಅರ್ಜಿಯನ್ನು ಮೂಲ ದಾಖಲೆಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಡಿ.6ರೊಳಗೆ ನೀಡಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-23539786 ಅಥವಾ ಸಹಾಯವಾಣಿ 8277799990 ಸಂಪರ್ಕಿಸಬಹುದು.



ಸಿನಿಮಾ ನಟಿ ತಾರಾ ಅನೂರಾಧಾ ಅವರು ಅದ್ವೈತ್ ಹುಂಡೈ ಮಳಿಗೆಯಲ್ಲಿ ಹುಂಡೈ ಕಂಪನಿಯ 'ವೆನ್ಯು' ಮಾದರಿಯ ಹೊಸ ಆವೃತ್ತಿಯನ್ನು ಬಿಡುಗಡೆ ಮಾಡಿದರು. ಅದ್ವೈತ್ ಹುಂಡೈನ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ನಿರ್ದೇಶಕ ಎಲ್.ಎನ್. ಅಜಯ್ ಸಿಂಗ್ ಉಪಸ್ಥಿತರಿದ್ದರು


ಕ್ಯೂಎಸ್ ರ‍್ಯಾಂಕ್ ಐಐಎಸ್‌ಸಿಗೆ ಸ್ಥಾನ

ನವದೆಹಲಿ (ಪಿಟಿಐ): ಲಂಡನ್ ಮೂಲದ ಕ್ಯೂಎಸ್ ಮಂಗಳವಾರ ಬಿಡುಗಡೆ ಮಾಡಿರುವ ಏಷ್ಯಾದ 100 ಅಗ್ರ ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಯಲ್ಲಿ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸೇರಿ ಹಲವು ಸಂಸ್ಥೆಗಳು ಸ್ಥಾನ ಪಡೆದಿವೆ.

'ಕ್ಯೂಎಸ್ ವರ್ಲ್ಡ್ ಯುನಿವರ್ಸಿಟಿ ಏಷ್ಯಾ ರ‍್ಯಾಂಕಿಂಗ್‌ನ 100 ಅಗ್ರ ಸಂಸ್ಥೆಗಳಲ್ಲಿ ಭಾರತದ ಏಳು ಸಂಸ್ಥೆಗಳು ಸ್ಥಾನ ಪಡೆದಿವೆ. 200 ಅಗ್ರ ಸಂಸ್ಥೆಗಳ ಪಟ್ಟಿಯಲ್ಲಿ 20, 500 ಅಗ್ರ ಸಂಸ್ಥೆಗಳ ಪಟ್ಟಿಯಲ್ಲಿ 66 ಉನ್ನತ ಶಿಕ್ಷಣ ಸಂಸ್ಥೆಗಳು ಸ್ಥಾನ ಪಡೆದಿವೆ' ಎಂದು ಕ್ಯೂಎಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಐಐಟಿ-ದೆಹಲಿ, ಐಐಟಿ-ಮದ್ರಾಸ್, ಐಐಟಿ-ಬಾಂಬೆ, ಐಐಟಿ-ಕಾನ್ಪುರ ಹಾಗೂ ಐಐಟಿ-ಖರಗಪುರ 100 ಅಗ್ರ ಸಂಸ್ಥೆಗಳಲ್ಲಿ ಸ್ಥಾನ ಪಡೆದಿವೆ.

ಐಐಟಿ-ದೆಹಲಿ 59ನೇ ಸ್ಥಾನ ಪಡೆದಿದ್ದು, ಸತತ ಐದನೇ ವರ್ಷವೂ ಭಾರತದ ಅತ್ಯುತ್ತಮ ಇನ್‌ಸ್ಟಿಟ್ಯೂಟ್ ಎಂದು ಘೋಷಿಸಲಾಗಿದೆ.



ಕ್ಯಾಪ್ಚಾ: ಕಚ್ಚಬಹುದು ಹುಷಾರ್!

• ಪೃಥ್ವಿರಾಜ್

ಯಾವುದಾದರೂ ವೆಬ್‌ಸೈಟ್ ಲಾಗಿನ್ ಆಗಬೇಕೆಂದರೆ ಲಾಗಿನ್ ವಿವರಗಳನ್ನು ಕೊಟ್ಟರೆ ಸಾಲದು, ಮತ್ತೊಂದು ಪರೀಕ್ಷೆಯನ್ನೂ ಪಾಸ್ ಮಾಡಬೇಕು. ಈ ಪರೀಕ್ಷೆ ನಮಗೆಲ್ಲರಿಗೂ ಗೊತ್ತಿದೆ. ಅಂಕಿಗಳು, ಅಕ್ಷರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ತಿಳಿಯುವ ಕ್ಯಾಪ್ಚಾ.

ಈ ಕ್ಯಾಪ್ಚಾ ಕೋಡನ್ನು ವೆಬ್‌ಸೈಟ್‌ನಲ್ಲಿ ತಿಳಿಸಿದಂತೆ ನಮೂದಿಸಿದಾಗ ಮಾತ್ರ ಲಾಗಿನ್ ಆಗಬಹುದು. ಚಿತ್ರಗಳನ್ನು ಬ್ಲಾಕ್‌ಗಳಲ್ಲಿ ಗುರುತಿಸುವುದು, ಸರಳವಾದ ಗಣಿತದ ಲೆಕ್ಕಗಳನ್ನು ಬಿಡಿಸುವುದು ಮುಂತಾದ ಇತ್ಯಾದಿ ವಿಧಾನಗಳ ಮೂಲಕ 'ಕ್ಯಾಪ್ಚಾ ಕೋಡ್' ಅನ್ನು ನಮೂದಿಸಬಹುದು. ಇದೊಂದು ಸಾಮಾನ್ಯ ಸೆಕ್ಯುರಿಟಿ ವಿಧಾನ. ವೆಬ್‌ಸೈಟ್ ಬಳಸಲು ಉದ್ದೇಶಿಸಿರುವ ನೆಟ್ಟಿಗ ರೋಬೊನೊ, ಅಲ್ಲವೊ ಎಂಬುದನ್ನು ತಿಳಿಯಲು ಇದು ನೆರವಾಗುತ್ತದೆ. ಆದರೆ ಈಗ ಇದೇ ಸುರಕ್ಷತಾ ವಿಧಾನವನ್ನು ಗುರಾಣಿಯಾಗಿಸಿಕೊಂಡು ಸೈಬರ್ ಕಳ್ಳರು ದಾಳಿ ಮಾಡುತ್ತಿದ್ದಾರೆ. ಇದನ್ನು 'ಶಾಡೊ ಕ್ಯಾಪ್ಚಾ' ಎನ್ನಲಾಗುತ್ತಿದೆ. ಈ ಹೊಸ ಬಗೆಯ ಮಾಲ್‌ವೇರ್ ಮಾಹಿತಿ ಇಲ್ಲಿದೆ.

ನಾವು ನಿತ್ಯ ಬಳಸುವ ಮುಖ್ಯವಾದ ವೆಬ್-ಸೇವೆಗಳಾದ ಬ್ಯಾಂಕಿಂಗ್, ಆರೋಗ್ಯ, ವಿಮೆ, ಇಪಿಎಫ್, ಕಾನೂನು, ರಿಯಲ್ ಎಸ್ಟೇಟ್ ಸೇರಿದಂತೆ ಇನ್ನೂ ಹಲವು ಕ್ಷೇತ್ರಗಳನ್ನು ಗುರಿಯಾಗಿಸಿಕೊಂಡು ಶಾಡೊ ಕ್ಯಾಪ್ಚಾ ಮೂಲಕ ದಾಳಿ ಮಾಡುತ್ತಿದ್ದಾರೆ, ಸೈಬರ್ ಕಳ್ಳರು. ಒಂದು ವರ್ಷದಿಂದ ಈ ರೀತಿಯ ದಾಳಿಗಳ ಬಗ್ಗೆ ವರದಿಯಾಗುತ್ತಿದೆ. ಇಸ್ರೇಲ್ ನ್ಯಾಷನಲ್ ಡಿಜಿಟಲ್ ಏಜೆನ್ಸೀಟ್ಸ್ ವರದಿಯ ಮಾಹಿತಿಯಂತೆ. 100ಕ್ಕೂ ಅಧಿಕ ವರ್ಡ್‌ಪ್ರೆಸ್ ಸೈಟ್‌ಗಳನ್ನು ಬಳಸಿ ಸೈಬರ್ ಕಳ್ಳರು ಮಾಲ್‌ವೇರ್‌ಗಳನ್ನು ಕಳುಹಿಸುತ್ತಿದ್ದಾರೆ. ಅಮೆರಿಕದಲ್ಲಿ ಆರಂಭವಾದ ಈ ಹೊಸ ಬಗೆಯ ಸೈಬರ್ ವಂಚನೆ, ಬ್ರೆಜಿಲ್, ಆಸ್ಟ್ರೇಲಿಯಾ, ಇಂಗ್ಲೆಂಡ್, ಕೊಲಂಬಿಯಾ ದೇಶಗಳಿಗೂ ವ್ಯಾಪಿಸಿದೆ.

ಹೇಗೆ ವಂಚಿಸುತ್ತಾರೆ?

ನಿತ್ಯದ ಕೆಲಸಗಳಿಗಾಗಿ ನಾವು ಯಾವುದಾದರೂ ವೆಬ್‌ಸೈಟ್‌ಗೆ ಭೇಟಿ ನೀಡಲು ಹೋದಾಗ ಹೊಂಚು ಹಾಕಿರುವ ಕಳ್ಳರು, ತಾವು ತಯಾರಿಸಿ ಇಟ್ಟುಕೊಂಡಿರುವ ಮಾಲಿಷಿಯಸ್ ಕೋಡ್‌ಗಳನ್ನು ನುಸುಳಿಸುತ್ತಿದ್ದಾರೆ. ಯೋಜನಾಬದ್ಧವಾಗಿ ನಕಲಿ ಕ್ಯಾಪ್ಚಾ ಪೇಜ್‌ಗಳಲ್ಲಿ ಲಿಂಕ್ ಓಪನ್ ಆಗುವಂತೆ ಮಾಡುತ್ತಿದ್ದಾರೆ. ಇದಕ್ಕಾಗಿ ಬಗೆ ಬಗೆಯ ಸೋಷಿಯಲ್ ಎಂಜಿನಿಯರಿಂಗ್ ಕುತಂತ್ರಗಳನ್ನು ಬಳಸಿ ನೆಟ್ಟಿಗರನ್ನು ಮೋಸ ಮಾಡುತ್ತಿದ್ದಾರೆ. ನೀವು ರೋಬೊ ಅಲ್ಲ – ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಈ ಸ್ಟೆಪ್ಸ್ ಫಾಲೊ ಮಾಡಿ ಎಂದು ಸೂಚಿಸಿ, ಏಮಾರಿಸಿ ರಾನ್ಸಮ್‌ವೇರ್, ಇನ್ಫೊ-ಸ್ಟೀಲರ್ಸ್, ಕ್ರಿಪ್ಟೊ-ಮೈನರ್‌ಗಳನ್ನು ನಾವು ಬಳಸುತ್ತಿರುವ ಮೊಬೈಲ್‌ಫೋನ್, ಕಂಪ್ಯೂಟರ್, ಟ್ಯಾಬ್‌ಗಳಿಗೆ ಹೊಕ್ಕುವಂತೆ ಮಾಡುತ್ತಿದ್ದಾರೆ. ನಿಜವಾದ ಕ್ಯಾಪ್ಚಾಗಳು ತಿಳಿಯದಂತೆ, ಈ ನಕಲಿ ಪೇಜ್‌ಗಳು ನಮಗೆ ಕೆಲವೊಂದು ಕೆಲಸಗಳನ್ನು ಮಾಡುವಂತೆ ಸೂಚಿಸುತ್ತವೆ. ಉದಾಹರಣೆಗೆ... ವಿಂಡೋಸ್ ರನ್ (Win + R) ಡೈಲಾಗ್ ಬಾಕ್ಸ್ ತೆರೆಯುವಂತೆ ಹೇಳುವುದು, ನೀವು ವೆಬ್‌ಸೈಟ್‌ನಲ್ಲಿ ಕಾಪಿ ಮಾಡಿಕೊಂಡ ಕಮಾಂಡ್ ಅನ್ನು ಪೇಸ್ಟ್ ಮಾಡುವಂತೆ ಸೂಚಿಸುವುದು, ಆ ಕಮಾಂಡ್ ರನ್ ಮಾಡಲು ಎಂಟರ್ ಬಟನ್ ಒತ್ತುವಂತೆ ಸೂಚಿಸುವುದು – ಹೀಗೆ ವಿವಿಧ ಕೆಲಸಗಳನ್ನು ಸೂಚಿಸುತ್ತಾರೆ. ಈ ಸೂಚನೆಗಳನ್ನು ನಾವು ಪಾಲಿಸುವಷ್ಟರಲ್ಲಿ ಹ್ಯಾಕರ್ಸ್ ನಮ್ಮ ಡಿವೈಸ್‌ಗೆ ಮಾಲ್‌ವೇರ್ ಇನ್‌ಸ್ಟಾಲ್ ಮಾಡುತ್ತಾರೆ. ಇನ್ನುಮುಂದೆ ನೀವು ವರ್ಡ್‌ಪ್ರೆಸ್ ಸೈಟ್‌ಗಳನ್ನು ಆಕ್ಸೆಸ್ ಮಾಡುವುದಿದ್ದರೆ ಮುಂಚಿತವಾಗಿ ಅಪ್‌ಡೇಟ್ ಮಾಡಿಕೊಳ್ಳುವುದು ಒಳಿತು. ಹೊಸ ವರ್ಷನ್ ಸೆಕ್ಯೂರಿಟಿ ಅಪ್‌ಡೇಟ್ಸ್ ಅಗತ್ಯವಾಗಿ ಮಾಡಬೇಕು. ಮಲ್ಟಿ ಫ್ಯಾಕ್ಟರ್ ಅಥೆಂಟಿಕೇಷನ್ ಕೂಡ ನಿಮ್ಮ ಡಿವೈಸ್‌ಗೆ ಅಗತ್ಯ. ಅಗತ್ಯ ಎಂದೆನಿಸಿದರೆ ಬಾಟ್ ಶೀಲ್ಡ್ ಅಥವಾ ಕ್ಲೌಡ್‌ಫ್ಲೇರ್ ನಂತಹ ಪ್ರೊಟೆಕ್ಷನ್ ಸರ್ವೀಸ್‌ಗಳನ್ನು ಬಳಸಬೇಕು. ಮಾಲ್‌ವೇರ್ ಬೇರೆ ಡಿವೈಸ್‌ಗಳಿಗೆ ಹೊಕ್ಕದಂತೆ ನೆಟವರ್ಕ್ ಡಿವೈಡ್ ಮಾಡಬಹುದು. ಕ್ಯಾಪ್ಚಾ ಪೇಜ್‌ನಲ್ಲಿ ಯಾವುದಾದರೂ ಸಿಸ್ಟಮ್ ಕಮಾಂಡ್ ರನ್ ಮಾಡುವಂತೆ ಸೂಚನೆ ಸಿಕ್ಕರೆ ಕೂಡಲೇ ಎಚ್ಚರವಹಿಸಬೇಕು.

ರಕ್ಷಿಸಿಕೊಳ್ಳುವುದು ಹೇಗೆ?

ಕ್ಯಾಪ್ಚಾ ಪೇಜ್‌ಗಳಲ್ಲಿ Win + R ಪ್ರೆಸ್ ಮಾಡುವಂತೆ, ಕ್ಲಿಪ್‌ಬೋರ್ಡ್‌ನಲ್ಲಿ ಕಮಾಂಡರ್ ರನ್ ಮಾಡುವಂತೆ ಕೇಳಿದಾಗ ಕೂಡಲೇ ಆ ಪೇಜ್‌ನಿಂದ ಹೊರಬರಬೇಕು. ಅಸಲಿ ಕ್ಯಾಪ್ಚಾ ಪೇಜ್ ಎಂದಿಗೂ ಇಂತಹ ಕಮಾಂಡ್‌ಗಳನ್ನು ಕೇಳುವುದಿಲ್ಲ.

ಯಾವುದಾದರೂ ಕ್ಯಾಪ್ಚಾ ಪೂರ್ಣಗೊಳಿಸುವ ಮುನ್ನ ವೆಬ್‌ಸೈಟ್ ಡೊಮೈನ್ ಪರಿಶೀಲಿಸಬೇಕು. ಅದು ಅಸಲಿಯೊ, ನಕಲಿಯೊ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಹೊಸ ಪೇಜ್ ಲೋಡ್ ಆದರೂ ಕ್ಯಾಪ್ಚಾ ಸುಲಭವಾಗಿದ್ದರೂ ಎಚ್ಚರವಹಿಸಬೇಕು.

ನಿಮ್ಮ ಬ್ರೌಸರ್, ಆಪರೇಟಿಂಗ್ ಸಿಸ್ಟಂ, ಆ್ಯಂಟಿ ವೈರಸ್, ಫೈರ್‌ವಾಲ್‌ಗಳನ್ನು ಸದಾ ಅಪ್‌ಡೇಟ್ ಮಾಡಿಕೊಳ್ಳಬೇಕು. ವರ್ಡ್‌ಪ್ರೆಸ್ ಸೈಟ್‌ಗಳಿಗೆ ಸಂಬಂಧಿಸಿದಂತೆ ಪ್ಲಗ್-ಇನ್, ಥೀಮ್.. ಇತ್ಯಾದಿ ಟೂಲ್‌ಗಳನ್ನು ಅಪ್‌ಡೇಟ್ ಮಾಡಿಕೊಳ್ಳಬೇಕು. ಬಳಸಿದ ಪ್ಲಗ್-ಇನ್‌ಗಳನ್ನು ಕೂಡಲೇ ಡಿಸೇಬಲ್ ಅಥವಾ ಡಿಲೀಟ್ ಮಾಡಬೇಕು.

ಅಡ್ಮಿನ್ ಅಕೌಂಟ್‌ಗಳಿಗೆ ಮಲ್ಟಿ-ಫ್ಯಾಕ್ಟರ್ ಅಥೆಂಟಿಕೇಷನ್ ತಪ್ಪದೇ ಬಳಸಬೇಕು. ವಿಶೇಷ ಅಕ್ಷರಗಳು, ಅಂಕಿಗಳು, ಸಣ್ಣ–ದೊಡ್ಡ – ಎರಡೂ ಅಕ್ಷರಗಳಿಂದ ಕೂಡಿದ ಸುರಕ್ಷಿತವಾದ ಪಾಸ್‌ವರ್ಡ್ ಅನ್ನು ಬಳಸಬೇಕು.

ಕ್ಲಿಕ್‌ಫಿಕ್ಸ್, ಇತರೆ ಸೋಷಿಯಲ್ ಎಂಜಿನಿಯರಿಂಗ್ ಟ್ರಿಕ್‌ಗಳ ಬಗ್ಗೆ ತಿಳಿದುಕೊಳ್ಳಬೇಕು. ವಾಟ್ಸ್‌ಆ್ಯಪ್ ಸ್ಟೇಟಸ್ ಅಥವಾ ಬೇರೆ ಯಾವುದಾದರೂ ಮಾರ್ಗಗಳ ಮೂಲಕ ಈ ವಂಚನೆ ಬಗ್ಗೆ ಸಾಧ್ಯವಾದಷ್ಟು ಇತರರಿಗೂ ತಿಳಿಸಬೇಕು.

ರೆಕ್ಕೆರಹಿತ ವಿಂಡ್ ಟರ್ಬೈನ್

• ಆರ್.ಬಿ.ಗುರುಬಸವರಾಜ

ಫ್ರಾನ್ಸ್‌ನ ನಾರ್ಮಂಡಿಯಲ್ಲಿ ರೆಕ್ಕೆರಹಿತ ವಿಂಡ್ ಟರ್ಬೈನ್‌ಗಳು ತಲೆ ಎತ್ತುತ್ತಿವೆ. ಇದುವರೆಗೂ ರೆಕ್ಕೆಗಳಿರುವ ವಿಂಡ್ ಟರ್ಬೈನ್ ಪರಿಚಯವಿದ್ದ ನಮಗೆ ರೆಕ್ಕೆಗಳಿಲ್ಲದ ವಿಂಡ್ ಟರ್ಬೈನ್ ಹೊಸದು ಎನಿಸುತ್ತದೆ. ಇಲ್ಲಿ ಬಳಕೆಯಾದ ತಂತ್ರಜ್ಞಾನ ಹೊಸದು; ಆದರೆ ಅದರಲ್ಲಿನ ವಿಜ್ಞಾನದ ತತ್ವ ಹಳೆಯದು.


ಪ್ರಸ್ತುತ ನಾವು ಎಲ್ಲೆಡೆ ಕಾಣುವ ರೆಕ್ಕೆಸಹಿತ ಗಾಳಿಯಂತ್ರಗ ಳಲ್ಲಿ ಗಾಳಿಯ ಚಲನಶಕ್ತಿಯನ್ನು ಸೆರೆಹಿಡಿಯಲು ವಿಮಾನದ ರೆಕ್ಕೆಗಳಂತೆ ದೊಡ್ಡ ರೋಟರ್ ರೆಕ್ಕೆ(ಬ್ಲೇಡ್)ಗಳನ್ನು ಬಳಸಲಾಗುತ್ತದೆ. ಗಾಳಿ ಬೀಸಿದಂತೆ ರೆಕ್ಕೆಗಳು ತಿರುಗುತ್ತವೆ. ಗಾಳಿಯ ಚಲನಶಕ್ತಿಯನ್ನು ಯಾಂತ್ರಿಕ (ತಿರುಗುವಿಕೆ) ಶಕ್ತಿಯನ್ನಾಗಿ ಪರಿವರ್ತಿಸಲಾಗುತ್ತದೆ. ಈ ಯಾಂತ್ರಿಕಶಕ್ತಿಯು ಜನರೇಟರ್‌ಗೆ ಸಂಪರ್ಕಗೊಂಡಿರುವ ಶಾಫ್ಟ್ ಅನ್ನು ತಿರುಗಿಸುತ್ತದೆ. ಜನರೇಟರ್ ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ.

ಈ ಶಕ್ತಿ ಪರಿವರ್ತನೆಯು ಫ್ಯಾನ್‌ನ ಮೇಲ್ಭಾಗದಲ್ಲಿರುವ ನೇಸೆಲ್‌ನಲ್ಲಿ ಸಂಭವಿಸುತ್ತದೆ. ನಂತರ ಅಲ್ಲಿ ಉತ್ಪತ್ತಿಯಾದ ವಿದ್ಯುತ್‌ನ್ನು ಗ್ರಿಡ್‌ಗೆ ರವಾನಿಸಲಾಗುತ್ತದೆ. ತಿರುಗುವ ರೆಕ್ಕೆಗಳಿಲ್ಲದ ಪವನವಿದ್ಯುತ್ ಕಂಬಗಳೇ 'ರೆಕ್ಕೆರಹಿತ ಗಾಳಿಯಂತ್ರ'ಗಳಾಗಿವೆ. ಇವು ತಿರುಗುವ ರೆಕ್ಕೆಗಳಿರುವ ಪವನವಿದ್ಯುತ್ ಕಂಬಗಳಲ್ಲ; ಬದಲಿಗೆ ಎತ್ತರದ, ತೆಳ್ಳಗಿನ, ಸಿಲಿಂಡರಾಕಾರದ ಕಂಬಗಳಾಗಿದ್ದು, ತಂಗಾಳಿಯಲ್ಲಿ ದೀಪಸ್ತಂಭದಂತೆ ಗೋಚರಿಸುತ್ತವೆ. ಗಾಳಿ ಬೀಸಿದಾಗ ಈ ಕಂಬವು ಕಂಪಿಸುತ್ತದೆ. ಈ ಕಂಪನವು ಆಂತರಿಕ ಸುಳಿಗಳನ್ನು ರಚಿಸುತ್ತದೆ. ಹೀಗೆ ಇಡೀ ಕಂಬವು ಕಂಪಿಸುವ ಮೂಲಕ ಆಂದೋಲನಗೊಳ್ಳುತ್ತದೆ. ಈ ಆಂದೋಲಕ ಚಲನೆಯನ್ನು ಕಂಬದ ತಳದಲ್ಲಿರುವ ಆಲ್ಟರ್ನೇಟರ್ ಮೂಲಕ ಯಾಂತ್ರಿಕ ಶಕ್ತಿಯನ್ನಾಗಿ ಬದಲಿಸಲಾಗುತ್ತದೆ. ನಂತರ ಯಾಂತ್ರಿಕ ಶಕ್ತಿಯು ವಿದ್ಯುತ್ ಆಗಿ ಪರಿವರ್ತಿತವಾಗುತ್ತದೆ.

ಕ್ವಾಂಟಮ್ ಜಗತ್ತಿಗೆ ಹೊಸ ದಿಕ್ಕು ತೋರಿಸಿದ ವಿಜ್ಞಾನಿ

• ಸುಧೀರ ಎಚ್.ಎಸ್.

ನೊಬೆಲ್ ವಿಜ್ಞಾನಿಗಳು 4



ಈ ವರ್ಷದ (2025) ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಮೂವರು ವಿಜ್ಞಾನಿಗಳು ಹಂಚಿಕೊಂಡಿದ್ದಾರೆ. ಅವರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿಯ ಪ್ರಾಧ್ಯಾಪಕ ಎಮೆರಿಟಸ್ ಪ್ರೊ. ಜಾನ್ ಕ್ಲಾರ್ಕ್ ಕೂಡ ಒಬ್ಬರು. ಇವರ ವಿಶಿಷ್ಟ ಸಂಶೋಧನೆಯು ಕ್ವಾಂಟಮ್ ಭೌತಶಾಸ್ತ್ರದ ಗಡಿಗಳನ್ನು ವಿಸ್ತರಿಸಿದ್ದು, ಭವಿಷ್ಯದ ತಂತ್ರಜ್ಞಾನಕ್ಕೆ ಹೊಸ ದಿಕ್ಕನ್ನು ನೀಡಿದೆ. 'ವಿದ್ಯುತ್ ಸರ್ಕ್ಯೂಟ್ ನಲ್ಲಿ ಮ್ಯಾಕ್ರೋಸ್ಕೋಪಿಕ್ ಕ್ವಾಂಟಮ್ ಮೆಕ್ಯಾನಿಕಲ್ ಟನೆಲಿಂಗ್ ಮತ್ತು ಶಕ್ತಿಯ ಕ್ವಾಂಟೈಸೇಶನ್ ಅನ್ನು ಕಂಡುಹಿಡಿದಿದ್ದಕ್ಕಾಗಿ' ಅವರಿಗೆ ಈ ಪ್ರತಿಷ್ಠಿತ ಗೌರವ ಲಭಿಸಿದೆ ಎಂದು ನೊಬೆಲ್ ಪ್ರಶಸ್ತಿ ನೀಡಿದ ಸಮಿತಿ ತಿಳಿಸಿದೆ.

ಕೇಂಬ್ರಿಜ್‌ನಿಂದ ಬರ್ಕ್ಲಿವರೆಗೆ

ಇಂಗ್ಲೆಂಡ್‌ನ ಕೇಂಬ್ರಿಜ್‌ನಲ್ಲಿ 1942ರ ಫೆಬ್ರುವರಿ 10ರಂದು ಜನಿಸಿದ ಇವರು, ಬ್ರಿಟಿಷ್ ಮೂಲದ ಅಮೆರಿಕನ್ ಭೌತ ಶಾಸ್ತ್ರಜ್ಞರು. ಪ್ರೊ. ಕ್ಲಾರ್ಕ್ ಅವರು 1964ರಲ್ಲಿ ಭೌತಶಾಸ್ತ್ರದಲ್ಲಿ ಪದವಿ ಮತ್ತು 1968ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದರು. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದ ಸಮಯದಲ್ಲಿ ಅವರು ಸೂಕ್ಷ್ಮ ವೋಲ್ಟ್‌ಮೀಟರ್ 'SLUG' ಅನ್ನು ಅಭಿವೃದ್ಧಿಪಡಿಸುವ ಮೂಲಕ ತಮ್ಮ ಸಂಶೋಧನಪಯಣವನ್ನು ಪ್ರಾರಂಭಿಸಿದರು. ನಂತರ 1969ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿ ಸೇರಿಕೊಂಡ ಅವರು ತಮ್ಮ ಸಂಶೋಧನಯಾತ್ರೆಯನ್ನು ಮುಂದುವರಿಸಿದರು. 2010ರವರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಪ್ರೊಫೆಸರ್ ಎಮೆರಿಟಸ್ ಆಗಿ ತಮ್ಮ ಸಂಶೋಧನೆಯನ್ನು ನಡೆಸುತ್ತಿದ್ದಾರೆ.

ಪ್ರೊ. ಕ್ಲಾರ್ಕ್ ಅವರ ಸಂಶೋಧನೆಯ ಮುಖ್ಯ ಭಾಗವೆಂದರೆ ಸೂಪರ್‌ಕಂಡಕ್ಟಿಂಗ್ ಕ್ವಾಂಟಮ್ ಇಂಟರ್‌ಫೆರೆನ್ಸ್ ಡಿವೈಸಸ್ (SQUIDs) ಎಂಬ ಸೂಕ್ಷ್ಮ ಉಪಕರಣಗಳ ಅಭಿವೃದ್ಧಿ ಮತ್ತು ಅವುಗಳ ಅನ್ವಯಗಳು. 'SQUID'ಗಳು ಸಾಮಾನ್ಯ ಕಾಂತೀಯ ಮಾಪಕಗಳಿಗಿಂತ ಲಕ್ಷಗಟ್ಟಲೆ ಪಟ್ಟು ಹೆಚ್ಚು ಸೂಕ್ಷ್ಮವಾಗಿವೆ. ಇವು ಸೂಪರ್ ಕಂಡಕ್ಟಿಂಗ್ ಲೂಪ್‌ಗಳು ಮತ್ತು ಜೋಸೆಫ್‌ಸನ್ ಜಂಕ್ಷನ್‌ಗಳನ್ನು ಒಳಗೊಂಡಿದ್ದು, ಕಾಂತೀಯ ಹರಿವಿನಲ್ಲಿನ ಅತ್ಯಂತ ಸಣ್ಣ ಬದಲಾವಣೆಗಳನ್ನು ಸಹ ಪತ್ತೆಹಚ್ಚಬಲ್ಲವು. ಈ ಅಸಾಧಾರಣ ಸೂಕ್ಷ್ಮತೆಯು ವೈದ್ಯಕೀಯ ಇಮೇಜಿಂಗ್, ಭೂಭೌತಶಾಸ್ತ್ರ ಮತ್ತು ಮೂಲಭೂತ ಭೌತಶಾಸ್ತ್ರ ಸಂಶೋಧನೆಯಂತಹ ಕ್ಷೇತ್ರಗಳಲ್ಲಿ ಅವುಗಳ ಬಳಕೆಗೆ ನಿರ್ಣಾಯಕವಾಗಿದೆ.


ಕ್ವಾಂಟಮ್ ಕ್ರಾಂತಿಗೆ ಕೊಡುಗೆ

ಸಾಮಾನ್ಯವಾಗಿ ನಾವು ಅತಿಸೂಕ್ಷ್ಮ ಪರಮಾಣುಗಳು ಮತ್ತು ಉಪಪರಮಾಣು ಕಣಗಳ ಜಗತ್ತಿನಲ್ಲಿ ಮಾತ್ರ ಕ್ವಾಂಟಮ್ ಪರಿಣಾಮಗಳನ್ನು ಕಾಣುತ್ತೇವೆ. ಅವರ ಅತ್ಯಂತ ಮಹತ್ವದ ಸಾಧನೆಗಳಲ್ಲಿ ಒಂದೆಂದರೆ, 1984-85ಲ್ಲಿ ತಮ್ಮ ಪಿಎಚ್‌.ಡಿ. ವಿದ್ಯಾರ್ಥಿ ಜಾನ್ ಎಂ. ಮಾರ್ಟಿನಿಸ್ ಮತ್ತು ಸಹಾಯಕ ಸಂಶೋಧಕ ಮೈಕೆಲ್ ಡೆವೊರೆಟ್ ಅವರೊಂದಿಗೆ ಅವರು ಈ ಸಾಂಪ್ರದಾಯಿಕ ಪರಿಕಲ್ಪನೆಯನ್ನು ಸಂಪೂರ್ಣವಾಗಿ ಬದಲಾಯಿಸಿದರು. ನಮ್ಮ ಕಣ್ಣಿಗೆ ಕಾಣುವ ಅಥವಾ ಸ್ಪರ್ಶಿಸಬಹುದಾದ ದೊಡ್ಡ ವಿದ್ಯುತ್ ಸರ್ಕ್ಯೂಟ್‌ಗಳಲ್ಲೂ ಕ್ವಾಂಟಮ್ ನಿಯಮಗಳು ಅನ್ವಯವಾಗುತ್ತವೆ ಎಂಬುದನ್ನು ಇವರು ನಡೆಸಿದ ಅದ್ಭುತ ಪ್ರಯೋಗಗಳ ಮೂಲಕ ಸಾಬೀತುಪಡಿಸಿದರು.

ಪ್ರೊ. ಕ್ಲಾರ್ಕ್ ಮತ್ತು ಅವರ ತಂಡವು, ಕಡಿಮೆ ತಾಪಮಾನದಲ್ಲಿ, ಒಂದು ಮ್ಯಾಕ್ರೋಸ್ಕೋಪಿಕ್ ಎಲೆಕ್ಟ್ರಾನಿಕ್ ಸ್ಥಿತಿಯು ಶೂನ್ಯ ವೋಲ್ಟೇಜ್‌ನಲ್ಲಿ ಕ್ವಾಂಟಮ್ ಟನೆಲಿಂಗ್‌ಗೆ ಒಳಗಾಗುತ್ತದೆ ಎಂದು ಸಾಬೀತುಪಡಿಸಿತು. ಈ ಆವಿಷ್ಕಾರವು 'ಸರ್ಕ್ಯೂಟ್ ಕ್ವಾಂಟಮ್ ಎಲೆಕ್ಟ್ರೋಡೈನಾಮಿಕ್ಸ್' ಎಂಬ ಹೊಸ ಕ್ಷೇತ್ರಕ್ಕೆ ಅಡಿಪಾಯ ಹಾಕಿತು, ಇದು ಇಂದು ಸೂಪರ್ ಕಂಡಕ್ಟಿಂಗ್ ಕ್ವಾಂಟಮ್ ಕಂಪ್ಯೂಟರ್‌ಗಳ ಅಭಿವೃದ್ಧಿಗೆ ಮೂಲಭೂತವಾಗಿದೆ. ಕ್ವಾಂಟಮ್ ಕಂಪ್ಯೂಟರ್‌ಗಳು ಭವಿಷ್ಯದಲ್ಲಿ ಪ್ರಸ್ತುತ ಕಂಪ್ಯೂಟರ್‌ಗಳು ಪರಿಹರಿಸಲಾಗದ ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸಲು ಸಹಾಯ ಮಾಡುತ್ತವೆ. ಇದು ಕ್ಲಾಸಿಕಲ್ ಭೌತಶಾಸ್ತ್ರ ಮತ್ತು ಕ್ವಾಂಟಮ್ ಭೌತಶಾಸ್ತ್ರದ ನಡುವಿನ ಕಂದಕವನ್ನು ಕಡಿಮೆ ಮಾಡಿತು. ಕ್ವಾಂಟಮ್ ಪರಿಣಾಮಗಳು ಅತಿಸೂಕ್ಷ್ಮ ಜಗತ್ತಿಗೆ ಮಾತ್ರ ಸೀಮಿತವಲ್ಲ ಎಂದು ತೋರಿಸಿತು. ಅವರ ಈ ಕಾರ್ಯವನ್ನು 'ಸೂಪರ್‌ಕಂಡಕ್ಟಿಂಗ್ ಎಲೆಕ್ಟ್ರಾನಿಕ್ಸ್‌ನ ಗಾಡ್‌ಫಾದರ್' ಎಂದು ಪ್ರೊ. ಸ್ಟೀವನ್ ಗಿರ್ವಿನ್ ಬಣ್ಣಿಸಿದ್ದಾರೆ.

ಪ್ರಶಸ್ತಿಗಳ ಸರಮಾಲೆ

ನೊಬೆಲ್ ಪ್ರಶಸ್ತಿಯು ಅವರ ಸುದೀರ್ಘ ಸಂಶೋಧನಕಾರ್ಯಕ್ಕೆ ದೊರಕಿದ ಅತ್ಯುನ್ನತ ಕಿರೀಟ. ಕಡಿಮೆ ತಾಪಮಾನದ ಭೌತಶಾಸ್ತ್ರದಲ್ಲಿನ ಅವರ ಮಹತ್ವದ ಸಂಶೋಧನೆಗಳಿಗಾಗಿ 1987ರಲ್ಲಿ ಫ್ರಿಟ್ಜ್ ಲಂಡನ್ ಪ್ರಶಸ್ತಿ ಮತ್ತು 1999ರಲ್ಲಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್‌ನ ಕಾಮ್‌ಸ್ಟಾಕ್ ಪ್ರಶಸ್ತಿ, 2004ರಲ್ಲಿ ರಾಯಲ್ ಸೊಸೈಟಿಯ ಹ್ಯೂಸ್ ಮೆಡಲ್ ಮತ್ತು 2021ರಲ್ಲಿ ಮಿಸಿಯಸ್ ಕ್ವಾಂಟಮ್ ಪ್ರಶಸ್ತಿ ಸೇರಿದಂತೆ ಹಲವು ಪ್ರತಿಷ್ಠಿತ ಗೌರವಗಳನ್ನು ಪಡೆದಿದ್ದಾರೆ. ಇವರು ರಾಯಲ್ ಸೊಸೈಟಿ ಆಫ್ ಲಂಡನ್, ಅಮೆರಿಕನ್ ಫಿಸಿಕಲ್ ಸೊಸೈಟಿ ಮತ್ತು ಅಮೆರಿಕನ್ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್‌ನಂತಹ ಪ್ರಮುಖ ವೈಜ್ಞಾನಿಕ ಸಂಸ್ಥೆಗಳ ಫೆಲೋ ಆಗಿದ್ದಾರೆ.



ಜಾನ್ ಕ್ಲಾರ್ಕ್

ಪ್ರೊ. ಜಾನ್ ಕ್ಲಾರ್ಕ್ ಅವರ ನಿರಂತರ ಅಧ್ಯಯನ ಮತ್ತು ಶ್ರಮವು ಆಧುನಿಕ ವಿಜ್ಞಾನಕ್ಕೆ ಅಮೂಲ್ಯ ಕೊಡುಗೆ ನೀಡಿದ್ದು, ಕ್ವಾಂಟಮ್ ಯುಗದ ಕನಸನ್ನು ನನಸಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಅವರ ಈ ನೊಬೆಲ್ ಪ್ರಶಸ್ತಿ ವಿಜ್ಞಾನ ಜಗತ್ತಿಗೆ ಮಾತ್ರವಲ್ಲದೆ, ಇಡೀ ಮಾನವಕುಲಕ್ಕೆ ಸ್ಫೂರ್ತಿಯ ಚಿಲುಮೆಯಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ವಿದ್ಯುಚ್ಛಕ್ತಿ

30) ಒಂದು ವಿದ್ಯುತ್ ದೀಪದ ರೋಧ 100Ω, ಒಂದು ಟೋಸ್ಟರ್‌ನ ರೋಧ 50Ω, ಹಾಗೂ ನೀರಿನ ಫಿಲ್ಟರ್‌ನ ರೋಧ 500Ω ಇವುಗಳನ್ನು 220 V ಆಕರಕ್ಕೆ ಸಮಾಂತರವಾಗಿ ಜೋಡಿಸಲಾಗಿದೆ. ಈ ಮೂರು ಉಪಕರಣಗಳು ಬಳಸುವಷ್ಟೇ ವಿದ್ಯುತ್ ಪ್ರವಾಹವನ್ನು ಬಳಸುವ ಒಂದು ಇಸ್ತ್ರಿ ಪಟ್ಟಿಗೆಯನ್ನು ಅದೇ ಆಕರಕ್ಕೆ ಜೋಡಿಸಲಾಗಿದೆ. ಈ ಇಸ್ತ್ರಿ ಪಟ್ಟಿಗೆಯ ರೋಧ ಮತ್ತು ಅದರ ಮೂಲಕ ಪ್ರವಹಿಸುವ ವಿದ್ಯುತ್ ಪ್ರಮಾಣವೆಷ್ಟು?

ಉತ್ತರ:– ವಿದ್ಯುತ್ ದೀಪದ ರೋಧ $R_1 = 100\Omega$

ಟೋಸ್ಟರ್‌ನ ರೋಧ $R_2 = 50\Omega$,

ನೀರಿನ ಫಿಲ್ಟರ್‌ನ ರೋಧ $R_3 = 500\Omega$

ವಿಭವಾಂತರ = **220 V**

$$\frac{1}{R} = \frac{1}{R_1} + \frac{1}{R_2} + \frac{1}{R_3}$$

$$= \frac{1}{100} + \frac{1}{50} + \frac{1}{500}$$

ಓಮ್‌ನ ನಿಯಮದಂತೆ

$$V = IR$$

$$I = \frac{V}{R}$$

$$I = \frac{220}{500x16} = \frac{220x16}{500}$$

$$= 7.04A$$

ಮೂರು ಉಪಕರಣಗಳಿಂದ 7.04 **A** ವಿದ್ಯುತ್ ದೊರೆಯುತ್ತದೆ. ಈ ಮೂರು ಉಪಕರಣಗಳು ಬಳಸುವಷ್ಟೇ ವಿದ್ಯುತ್ ಪ್ರವಾಹವನ್ನು ಬಳಸುವ ಒಂದು ಇಸ್ತ್ರೀ ಪೆಟ್ಟಿಗೆಯನ್ನು ಅದೇ ಆಕರಕ್ಕೆ ಜೋಡಿಸಲಾಗಿದೆ.

220 V = 7.04 **A**

ಓಮ್‌ನ ನಿಯಮದಂತೆ

$$V = IR$$

$$R = \frac{V}{I}$$

$$I = \frac{220}{7.04} = 31.25$$

$$= 31.5\ \Omega$$

ಇಸ್ತ್ರೀ ಪೆಟ್ಟಿಗೆಯ ರೋಧ = 31.25 **Ω**

ಇದರಲ್ಲಿ ಪ್ರವಹಿಸುವ ವಿದ್ಯುತ್= 7.04 **A**

31) ವಿದ್ಯುತ್ ಉಪಕರಣಗಳನ್ನು ಸರಣಿ ಕ್ರಮದಲ್ಲಿ ಜೋಡಿಸುವ ಸ್ಥಾನದಲ್ಲಿ ಬದಲು ಸಮಾಂತರವಾಗಿ ಜೋಡಿಸುವುದರಿಂದ ಆಗುವ ಪ್ರಯೋಜನೆಗಳೇನು ?

ಉತ್ತರ:– ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ ಸಮಾಂತರ ಮಂಡಳದಲ್ಲಿನ ಒಟ್ಟು ರೋಧವು ಕಡಿಮೆಯಾಗುತ್ತದೆ, ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ವಿದ್ಯುತ್ ಪ್ರವಾಹದ ಅಗತ್ಯವಿರುವ ಸಂದರ್ಭಗಳಲ್ಲಿ ಇದು ಸಹಾಯಕವಾಗಿರುತ್ತದೆ.

32) ತಾಪನ ಘಟಕಗಳು ಹೊಳೆಯುವಂತೆ ವಿದ್ಯುತ್ ಹೀಟರ್‌ನ ಸುರುಳಿಯು ಏಕೆ ಹೊಳೆಯುವುದಿಲ್ಲ?

ಉತ್ತರ:– ತಾಪನ ಘಟಕಗಳು ರೋಧಕಗಳಾಗಿವೆ, ಜೌಲ್‌ನ ಉಷ್ಣೋತ್ಪಾದನಾ ನಿಯಮದ ಪ್ರಕಾರ ತಾಪ ಘಟಕವು ಉತ್ಪತ್ತಿ ಮಾಡುವ ಉಷ್ಣವು ಅದರ ರೋಧಕ್ಕೆ ಅನುಪಾತದಲ್ಲಿರುತ್ತದೆ.

ವಿದ್ಯುತ್ ಹೀಟರ್‌ನ ರೋಧವು ಹೆಚ್ಚಾಗಿರುತ್ತದೆ. ತಾಪನ ಘಟಕದ ಮೂಲಕ ವಿದ್ಯುತ್ ಹರಿದಾಗ ಬಿಸಿ ಹೆಚ್ಚಾಗಿ ಕೆಂಪಗೆ ಹೊಳೆಯಲು ಪ್ರಾರಂಭಿಸುತ್ತದೆ. ಆದರೆ ವಿದ್ಯುತ್ ಹೀಟರ್‌ನ ಸುರಳಿಯ ರೋಧವು ಕಡಿಮೆ ಇರುವುದರಿಂದ ಅದರ ಮೂಲಕ ವಿದ್ಯುತ್ ಹರಿದಾಗ ಕೆಂಪಗೆ ಹೊಳೆಯುವುದಿಲ್ಲ.

33) ಓಮ್‌ನ ನಿಯಮವನ್ನು ಅನ್ವಯಿಸಿದಾಗ ವಾಹಕದ ರೋಧವು ಅವಲಂಬಿಸಿರುವ ಅಂಶಗಳು ಯಾವುವು?

ಉತ್ತರ:– ಓಮ್‌ನ ನಿಯಮವನ್ನು ಅನ್ವಯಿಸಿದಾಗ ವಾಹಕದ ರೋಧವು (1) ವಾಹಕದ ಉದ್ದ (2), ವಾಹಕದ ಅಡ್ಡಕೊಯ್ತ (3), ವಸ್ತುವಿನ ಪ್ರಾಕೃತಿಕ ಗುಣ ಇವುಗಳ ಮೇಲೆ ಅವಲಂಬಿಸಿದೆ. ನಿಖರವಾದ ಮಾಪನಗಳ ಪ್ರಕಾರ, ಯಾವುದೇ ಏಕರೂಪ ಲೋಹೀಯ ವಾಹಕದ ರೋಧವು ಅದರ ಉದ್ದಕ್ಕೆ (l) ನೇರ ಅನುಪಾತದಲ್ಲಿರುತ್ತದೆ ಮತ್ತು ಅದರ ಅಡ್ಡಕೊಯ್ತಕ್ಕೆ (A) ವಿಲೋಮಾನುಪಾತದಲ್ಲಿರುತ್ತದೆ.

34) ಜೌಲ್‌ನ ಉಷ್ಣೋತ್ಪಾದನಾ ನಿಯಮವನ್ನು ಆಧರಿಸಿ ಪರಿಚಯಿಸಿದ ಕೆಲವು ಸಾಧನಗಳ ಹೆಸರನ್ನು ಹೆಸರಿಸಿ

ಉತ್ತರ:– ವಿದ್ಯುತ್ ಇಸ್ತ್ರಿ ಪಟ್ಟಿಗೆ, ವಿದ್ಯುತ್ ಹೀಟರ್, ವಿದ್ಯುತ್ ಕಿಟಲ್, ವಿದ್ಯುತ್ ಒಲೆ ಇತ್ಯಾದಿ.

35) ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ

1. ರೋಧ **R** ಹೊಂದಿರುವ ಒಂದು ತಂತಿಯನ್ನು ಐದು ಸಮಾನ ಭಾಗಗಳಾಗಿ ಕತ್ತರಿಸಲಾಗಿದೆ, ನಂತರ ಈ ಭಾಗಗಳನ್ನು ಸಮಾನಾಂತರವಾಗಿ ಸಂಪರ್ಕಿಸಲಾಗುತ್ತದೆ. ಈ ಸಂಯೋಜನೆಯ ರೋಧವು **R′** ಆದರೆ, **R/R′** ನ ಅನುಪಾತವು ____________

(a) 1/25 (b) 1/5
(c) 5 (d) 25

ಉತ್ತರ:–ಡಿ

2. ಈ ಕೆಳಗಿನ ಯಾವ ಪದಗಳು ಮಂಡಲದಲ್ಲಿ ವಿದ್ಯುತ್ ಸಾಮರ್ಥ್ಯವನ್ನು ಪ್ರತಿನಿಧಿಸುವುದಿಲ್ಲ ?

(a) I^2R (b) IR^2
(c) VI (d) V2 /R

3. ಒಂದು ವಿದ್ಯುತ್ ಬಲ್ಬ್‌ನ್ನು **220V** ಮತ್ತು **100W** ಎಂದು ನಮೂದಿಸಲಾಗಿದೆ, ಈ ಬಲ್ಬ್ **110V** ನಲ್ಲಿ ಕಾರ್ಯನಿರ್ವಹಿಸಿದರೆ ಅದರಲ್ಲಿ ಬಳಕೆಯಾದ ಸಾಮರ್ಥ್ಯ ಎಷ್ಟು ?

(a) 100 W (b) 75 W
(c) 50 W (d) 25 W

4. ಸಮಾನವಾದ ಉದ್ದ ಮತ್ತು ವ್ಯಾಸವುಳ್ಳ ಒಂದೇ ರೀತಿಯ ಎರಡು ವಸ್ತುಗಳನ್ನು ಮೊದಲು ಸರಣಿಕ್ರಮದಲ್ಲಿ ನಂತರ ಸಮಾಂತರ ಕ್ರಮದಲ್ಲಿ ಒಂದೇ ವಿಭವಾಂತರಕ್ಕೆ ಅಡ್ಡಲಾಗಿ ಸಂಪರ್ಕಿಸಲಾಗಿದೆ. ಸರಣಿ ಕ್ರಮದಲ್ಲಿ ಮತ್ತು ಸಮಾಂತರ ಕ್ರಮದಲ್ಲಿ ಉತ್ಪತ್ತಿಯಾದ ಶಾಖದ ಅನುಪಾತ

(a) 1:2 (b) 2:1
(c) 1:4 (d) 4:1

ಉತ್ತರ:– 1)ಡಿ 2)ಬಿ 3)ಡಿ 4)ಸಿ

(ಮುಂದುವರಿಯುವುದು)

CHEMISTRY

Coordination Compound

23. Give the oxidation state, d orbital occupation and coordination number of the central metal ion in the following complexes:

(i) $K_3[Co(C_2O_4)_3]$ **(ii) cis-$[CrCl_2(en)_2]Cl$**
(iii) $(NH_4)_2[CoF_4]$ ***(iv) $[Mn(H_2O)_6]SO_4$***

Ans:

(iv) $[Mn(H_2O)_6]SO_4$

Central metal ion: Mn.

Coordination number = 6.

We know,

The oxidation state is : $x + 0 = 2$

$x = +2$

The d orbital occupation: $t_{2g}^3\ e_g^2$.

24. Write down the IUPAC name for each of the following complexes and indicate the oxidation state, electronic configuration and coordination number. Also, give the stereochemistry and magnetic moment of the complex:

(i) $K[Cr(H_2O)_2(C_2O_4)_2].3H_2O$
(ii) $[Co(NH_3)_5Cl]Cl_2$
(iii) $[CrCl_3(py)_3]$
(iv) $Cs[FeCl_4]$
(v) $K_4[Mn(CN)_6]$

Ans:

(i) IUPAC name = Potassium diaquadioxalatochromate (III) trihydrate.

Coordination number = 6


The oxidation state of chromium: $x + 0 + 2(-2) = -1$

$x = 3$

Electronic configuration: $3d^3 = t_{2g}^3$

Shape: Octahedral

Stereochemistry:



Magnetic moment, $\mu = n(n+2)$

[n = unpaired electrons]

$= 3(3+2)$

$= 15$

$\approx 4BM$

(ii) IUPAC name = Pentaamminechloridocobalt(III) chloride

Coordination number = 6


The oxidation state of Co: $x + 0 - 1 = +2$

$x = 3$

Electronic configuration: $3d^6 = t_{2g}^6$

Shape: Octahedral

Stereochemistry:



n = 0.

Thus, Magnetic moment = 0

(iii) IUPAC name = Trichloridotripyridinechromium (III)

Coordination number = 6

The oxidation state of Cr:


$x - 3 + 0 = 0$

$x = 3$

Electronic configuration: $3d^3 = t_{2g}^3$

Shape: Octahedral

Stereochemistry:



n = 3

Magnetic moment, $\mu = n(n+2)$

$= 3(3+2)$

$= 15$

$\approx 4BM$

(iv) IUPAC name = Caesiumtetrachloroferrate (III)

Coordination number = 4

The oxidation state of Fe: $x - 4 = -1$

$x = 3$

Electronic configuration: $d^6 = e_g^2\ t_{2g}^3$

Shape: Tetrahedral

Stereochemistry:- optically inactive

n = 5

Magnetic moment, $\mu = n(n+2)$

$= 5(5+2)$

$= 35$

≈ 6 BM

(v) IUPAC name = Potassium hexacyanomanganate(II)

Coordination number = 6

The oxidation state of Mn: $x - 6 = -4$

$x = +2$

Electronic configuration: $3d^5 = t_{2g}^5$

Shape: Octahedral

Stereochemistry: optically inactive n = 1

Magnetic moment, $\mu = n(n+2)$

$= 1(1+2)$

$= 3$

$= 1.732$ BM

(Contd......)

ಚಿಟಿಕೆ ಸುದ್ದಿ

‘ವಿಜಯೇಂದ್ರಗೆ ಬೆಂಗಳೂರಿನ ಮೇಲೆ ಹಿಡಿತವಿಲ್ಲ’

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪಕ್ಷದ ವತಿಯಿಂದ ರಚಿಸಿರುವ ಉಸ್ತುವಾರಿ ಸಮಿತಿಗೆ ತಮ್ಮನ್ನು ಪರಿಗಣಿಸದೇ ಇರುವ ಬಗ್ಗೆ ಬಿಜೆಪಿ ಶಾಸಕ ಎಸ್.ಆರ್. ವಿಶ್ವನಾಥ್ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿ, ‘ನನ್ನನ್ನು ಎಲ್ಲೇ ಬಿಟ್ಟರೂ ಸಂಘಟನೆ ಮಾಡುವ ಶಕ್ತಿ ಇದೆ. ಬೆಂಗಳೂರು ಗೆದ್ದರೆ ಇಡೀ ರಾಜ್ಯ ಗೆದ್ದಂತೆಯೇ ಸರಿ’ ಎಂದರು.

‘ಜಿಬಿಎ ಉಸ್ತುವಾರಿ ಸಮಿತಿ ರಚನೆ ಮಾಡುವಾಗ ನನ್ನನ್ನು ಪರಿಗಣಿಸದೇ ನನ್ನನ್ನು ಯಲಹಂಕಕ್ಕೆ ಸೀಮಿತ ಮಾಡಿದ್ದಾರೆ. 47 ವರ್ಷಗಳಿಂದ ಪಕ್ಷದಲ್ಲಿ ದುಡಿದಿದ್ದೇನೆ. ನಂದೀಶ್ ರೆಡ್ಡಿ ಕೊಟ್ಟ ಪಟ್ಟಿಗೆ ಸಹಿ ಮಾಡಿದ್ದಾರಂತೆ. ವಿಜಯೇಂದ್ರ ಅವರಿಗೆ ಬೆಂಗಳೂರಿನ ಮೇಲೆ ಹಿಡಿತ ಇಲ್ಲ’ ಎಂದರು.

‘ಪಕ್ಷದಲ್ಲಿ ಸೋತವರಿಗೆ ಹುದ್ದೆಯನ್ನು ಕೊಟ್ಟು ಹಿರಿಯರಿಗೆ ಮುಜುಗರ ಉಂಟು ಮಾಡಿದ್ದಾರೆ. ಚುನಾವಣೆಯಲ್ಲಿ ಸೋತರೆ ಉಸ್ತುವಾರಿಗಳನ್ನೇ ಹೊಣೆ ಮಾಡಿ ನಮ್ಮ ತಲೆಗೆ ಕಟ್ಟಬೇಡಿ. ನಾನು ನನ್ನ ಕ್ಷೇತ್ರವನ್ನು ನೋಡಿಕೊಂಡು ಇರುತ್ತೇನೆ’ ಎಂದು ಹೇಳಿದರು.

ಆರೋಗ್ಯ ಸಂಜೀವಿನಿ ಘೋಷಣಾ ಅವಧಿ ವಿಸ್ತರಣೆ

ಬೆಂಗಳೂರು: ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ವ್ಯಾಪ್ತಿಗೆ ಒಳಪಡಲು ಅಥವಾ ಒಳಪಡದೇ ಇರಲು ಲಿಖಿತ ಘೋಷಣೆ ಸಲ್ಲಿಸುವ ಅವಧಿಯನ್ನು ನ.25ರವರೆಗೆ ವಿಸ್ತರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಸರ್ಕಾರಿ ನೌಕರರು ಅವರ ಕುಟುಂಬದ ಅವಲಂಬಿತರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಆರೋಗ್ಯ ಸಂಜೀವಿನಿ ಯೋಜನೆ ಅ.1ರಿಂದ ಆರಂಭವಾಗಿದ್ದು, ಅ.18ರ ಒಳಗೆ ಮೇಲಧಿಕಾರಿಗಳ ಮೂಲಕ ಲಿಖಿತ ಆಕ್ಷೇಪ ಸಲ್ಲಿಸಲು ಅವಕಾಶ ನೀಡಲಾಗಿತ್ತು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯದಲ್ಲಿ ಬಹುತೇಕ ನೌಕರರು ಭಾಗವಹಿಸಿದ್ದ ಕಾರಣ ಯೋಜನೆ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಅವಕಾಶ ಆಗಿರಲಿಲ್ಲ. ಹಾಗಾಗಿ, ಲಿಖಿತ ಘೋಷಣೆ ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಬಂದರು ಯೋಜನೆ ಕೈಬಿಡಿ: ಮೇಧಾ

ಹೊನ್ನಾವರ: ಸುಳ್ಳು ಪ್ರಕರಣ ದಾಖಲಿಸಿ ಮೀನುಗಾರರ ಮೇಲೆ ದೌರ್ಜನ್ಯ ಆರೋಪ



‘ಹೊನ್ನಾವರ ಬಂದರು ಯೋಜನೆ’ ವಾಸ್ತವ ಶೋಧನಾ ವರದಿಯನ್ನು ಮೇಧಾ ಪಾಟ್ಕರ್ ಬಿಡುಗಡೆ ಮಾಡಿದರು. ರಾಜೇಶ್, ನಿಹಾನ ಹಾಗೂ ಮೊಹಮದ್ ಕೋಯಾ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊನ್ನಾವರ ಬಂದರು ಯೋಜನೆಯನ್ನು ಕರ್ನಾಟಕ ಸರ್ಕಾರ ಸಂಪೂರ್ಣ ಕೈಬಿಟ್ಟು, ಅಲ್ಲಿನ ಜನರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು’ ಎಂದು ನರ್ಮದಾ ಬಚಾವೊ ಆಂದೋಲನದ ಸಂಸ್ಥಾಪಕ ಸದಸ್ಯೆ ಮೇಧಾ ಪಾಟ್ಕರ್ ಒತ್ತಾಯಿಸಿದರು.

ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು), ಫ್ರೈಡೇಸ್ ಫಾರ್ ಫ್ಯೂಚರ್ ಕರ್ನಾಟಕ (ಎಫ್‌ಎಫ್‌ಎಫ್–ಕೆ) ಮತ್ತು ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್– ಕರ್ನಾಟಕ (ಪಿಯುಸಿಎಲ್–ಕೆ) ಜಂಟಿಯಾಗಿ ಸಿದ್ಧಪಡಿಸಿರುವ ‘ಹೊನ್ನಾವರದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಸತ್ಯಶೋಧನಾ ವರದಿ’ಯನ್ನು ಮಂಗಳವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ನೂರಾರು ವರ್ಷಗಳಿಂದ ಮೀನುಗಾರಿಕೆಯಲ್ಲಿರುವ ಮಹಿಳೆಯರು, ವೃದ್ಧರನ್ನೂ ಲೆಕ್ಕಿಸದೆ ಅವರನ್ನು ಅವರ ಜಾಗದಿಂದಲೇ ತೆರವು ಮಾಡಿಸಲಾಗುತ್ತಿದೆ. ಪೊಲೀಸರ ಮೂಲಕ ಸುಳ್ಳು ಮೊಕದ್ದಮೆಗಳನ್ನು ದಾಖಲಿಸಿ ದೌರ್ಜನ್ಯ ಎಸಗಲಾಗುತ್ತಿದೆ. ಮಾನವ ಹಕ್ಕುಗಳನ್ನು ಇಲ್ಲಿ ಉಲ್ಲಂಘಿಸಲಾಗುತ್ತಿದೆ’ ಎಂದರು.

‘ಹೊನ್ನಾವರದ ಸಮುದ್ರ ತೀರದಲ್ಲಿ ಪುರುಷರು ತಡರಾತ್ರಿ ತರುವ ಮೀನುಗಳನ್ನು, ಒಣಗಿಸುವ ಮೀನುಗಾರ ಮಹಿಳೆಯರು ಅವುಗಳನ್ನು ಮಾರಾಟ ಮಾಡುತ್ತಾರೆ. ಮಾಲಿನ್ಯ ರಹಿತವಾದ ಶರಾವತಿಯ ದಡದಲ್ಲಿ ಈ ಪ್ರಕ್ರಿಯೆ ನಡೆಯುವುದರಿಂದ ಇಲ್ಲಿನ ಒಣ ಮೀನುಗಳಿಗೆ ಭಾರಿ ಬೇಡಿಕೆ ಇದೆ. ಇಂತಹ ಪ್ರದೇಶದಲ್ಲಿನ ಜನರ ಮನೆ ಹಾಗೂ ಮೀನು ಒಣಗಿಸುವ ಜಾಗದಲ್ಲೂ ದಬ್ಬಾಳಿಕೆಯಿಂದ ರಸ್ತೆ ಮಾಡಲಾಗುತ್ತಿದೆ’ ಎಂದು ಹೇಳಿದರು.

‘ಶರಾವತಿ ನದಿ ಸಮುದ್ರಕ್ಕೆ ಸೇರುವ ಮಧ್ಯಭಾಗದಲ್ಲಿ ಬಂದರು ನಿರ್ಮಿಸಲಾಗುತ್ತಿದೆ. ಇದರಿಂದ ಜೀವವೈವಿಧ್ಯಕ್ಕೆ ಧಕ್ಕೆಯಾಗುತ್ತದೆ. ಪರಿಸರದ ಮೇಲಿನ ದುಷ್ಪರಿಣಾಮದ (ಇಐಎ) ವರದಿಯನ್ನೇ ತಪ್ಪಾಗಿ ನೀಡಲಾಗುತ್ತಿದೆ. ಹೊನ್ನಾವರ ಕಡಲ ತೀರದಲ್ಲಿ ವಿಷ್ಣುವಿನ ಅವತಾರವೆಂದೇ ಭಾವಿಸುವ ಆಮೆಗಳು ಮೊಟ್ಟೆ ಇಡುತ್ತವೆ. ಅವು ಜೆಲ್ಲಿ ಮೀನುಗಳನ್ನು ತಿಂದು ಇತರೆ ಮೀನುಗಳನ್ನು ಕಾಪಾಡುತ್ತವೆ. ಇಐಎ ವರದಿಯಲ್ಲಿ ಈ ಪ್ರದೇಶದಲ್ಲಿ ಆಮೆಗಳು ಇಲ್ಲ ಎಂದು ಹೇಳಲಾಗಿದೆ. ಆಮೆಗಳು ಇಲ್ಲದ ಸಮಯದಲ್ಲಿ ಪರಿಶೀಲನೆ ನಡೆಸಿ ವರದಿ ನೀಡಿದ್ದಾರೆ. ಹೀಗೆ, ಹೊನ್ನಾವರ ಬಂದರಿಗೆ ಎಲ್ಲ ರೀತಿಯ ಅನುಮತಿಗಳನ್ನು ನೀಡುವಾಗ ಸುಳ್ಳು ಮಾಹಿತಿ ದಾಖಲಿಸಲಾಗಿದೆ’ ಎಂದು ದೂರಿದರು.

ಹೊನ್ನಾವರ ಮೀನುಗಾರರ ಸಂಘದ ಅಧ್ಯಕ್ಷ ರಾಜೇಶ್, ಮೀನುಗಾರರಾದ ನಿಹಾನ, ಮೊಹಮದ್ ಕೋಯಾ ಅವರು ಅಲ್ಲಿನ ನಡೆಯುತ್ತಿರುವ ದೌರ್ಜನ್ಯಗಳನ್ನು ವಿವರಿಸಿದರು.

‘ಡಿಕೆಶಿ, ಮಂಕಾಳ ವೈದ್ಯ ವಾಗ್ದಾನ ಏನಾಯಿತು?’

‘ವಿಧಾನಸಭೆ ಚುನಾವಣೆಗೆ ಮುನ್ನ ಹೊನ್ನಾವರ ಬಂದರು ಯೋಜನೆ ಪ್ರದೇಶಕ್ಕೆ ಭೇಟಿ ನೀಡಿದ್ದ ಡಿ.ಕೆ. ಶಿವಕುಮಾರ್ ಹಾಗೂ ಮಂಕಾಳ ವೈದ್ಯ ಅವರು, ಮೀನುಗಾರರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗಲು ಬಿಡುವುದಿಲ್ಲ ಎಂದು ಭರವಸೆ ಕೊಟ್ಟಿದ್ದರು. ಉಪ ಮುಖ್ಯಮಂತ್ರಿ ಮತ್ತು ಮೀನುಗಾರಿಕೆ ಸಚಿವರಾದ ಮೇಲೆ ಅವರಿಬ್ಬರೂ ಸಂಕಷ್ಟದಲ್ಲಿರುವ ಮೀನುಗಾರರನ್ನು ಮರೆತುಹೋಗಿದ್ದಾರೆ’ ಎಂದು ಮೇಧಾ ಪಾಟ್ಕರ್ ಟೀಕಿಸಿದರು.

‘ಮೀನುಗಾರರಿಗೆ ಉಂಟಾಗುತ್ತಿರುವ ಸಂಕಷ್ಟದ ಬಗ್ಗೆ ಚುನಾವಣೆ ಸಂದರ್ಭದಲ್ಲಿ ಶಿವಕುಮಾರ್ ಹಾಗೂ ಮಂಕಾಳ ವೈದ್ಯ ಅವರು ಬಂದರು ಯೋಜನೆ ಇಲ್ಲಿ ಅಗತ್ಯವಿಲ್ಲ. ನಿಮ್ಮ ಮನೆಗಳನ್ನು, ನಿಮ್ಮನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ ಎಂದಿದ್ದರು. ಈಗ ಅದನ್ನೆಲ್ಲ ಮರೆತಿದ್ದಾರೆ’ ಎಂದರು.

‘ಮೀನುಗಾರಿಕೆ ಸಚಿವರಾಗಿರುವ ಮಂಕಾಳ ವೈದ್ಯ ಅವರನ್ನು ನಾನು ಭೇಟಿ ಮಾಡಿದ್ದೆ. ಆ ಬಂದರು ಯೋಜನೆ 2010– 2012ರಲ್ಲಿ ಆಗಿದ್ದು, ಈಗೇನೂ ಮಾಡಲು ಸಾಧ್ಯವಿಲ್ಲ ಎಂದರು. ಪರಿಹಾರ ಕೊಡಲು ಸಾಧ್ಯವಿಲ್ಲ ಎಂದ ಮೇಲೆ, ಮೀನುಗಾರರ ಮತ ಪಡೆಯುವಾಗ ಏಕೆ ಭರವಸೆ ನೀಡಿದ್ದೀರಿ ಎಂದು ಪ್ರಶ್ನಿಸಿದೆ. ಅದಕ್ಕೆ ಅವರಿಂದ ಉತ್ತರ ಬರಲಿಲ್ಲ’ ಎಂದು ಹೇಳಿದರು.

‘ಸಿದ್ದರಾಮಯ್ಯ ಭರವಸೆ’

‘ಹೊನ್ನಾವರದಲ್ಲಿ ಬಂದರು ನಿರ್ಮಿಸಲು ಪರಿಸರಕ್ಕೆ ಸಂಬಂಧಿಸಿದ ಯಾವುದೇ ಅನುಮತಿ ಪಡೆದಿಲ್ಲ. ಆದ್ದರಿಂದ ಯೋಜನೆಯನ್ನು ಸಂಪೂರ್ಣವಾಗಿ ರದ್ದುಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ ಮನವಿ ಮಾಡಿಕೊಂಡಿದ್ದೇವೆ. ವರದಿಯನ್ನು ಪರಿಶೀಲಿಸಿ, ಸೂಕ್ತ ಕ್ರಮಕೈಗೊಳ್ಳುತ್ತೇವೆ ಎಂದು ಅವರು ಭರವಸೆ ನೀಡಿದರು’ ಎಂದು ಮೇಧಾ ಪಾಟ್ಕರ್ ಹೇಳಿದರು.

‘ದೇವನಹಳ್ಳಿಯಲ್ಲಿ 700 ಎಕರೆ ಭೂಮಿಯನ್ನು ಸ್ವಾಧೀನದಿಂದ ಕೈಬಿಟ್ಟಿರುವುದಕ್ಕೆ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಿದೆ. ಅವರಿಗೆ ರೈತರ ಸಂಕಷ್ಟದ ಅರಿವಿದೆ. ಮೀನುಗಾರರೂ ರೈತರೇ ಆಗಿದ್ದಾರೆ. ಹೀಗಾಗಿ, ಅವರ ಸಂಕಷ್ಟವನ್ನೂ ಪರಿಹರಿಸುವ ಭರವಸೆ ನನಗಿದೆ’ ಎಂದರು.

ವಿದ್ಯಾರ್ಥಿಗಳಿಗೆ ಪ್ರಜಾವಾಣಿ ರಸಪ್ರಶ್ನೆ ಚಾಂಪಿಯನ್‌ಶಿಪ್

ORCHIDS The International School Presents ಪ್ರಜಾವಾಣಿ QUIZ CHAMPIONSHIP

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿನ ಜ್ಞಾನದ ಮಟ್ಟವನ್ನು ಪರೀಕ್ಷಿಸಿ, ಅವರಲ್ಲಿನ ಪ್ರತಿಭೆಗೆ ವೇದಿಕೆ ಕಲ್ಪಿಸುವ ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ ಮತ್ತೆ ಬಂದಿದ್ದು, ಈ ಸ್ಪರ್ಧೆಯ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಈ ಚಾಂಪಿಯನ್‌ಶಿಪ್‌ನಲ್ಲಿ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಸ್ಪರ್ಧೆಯು ಆರು ವಲಯಗಳಲ್ಲಿ ಮೊದಲ ಹಂತದಲ್ಲಿ ನಡೆಯಲಿದೆ. ಮೈಸೂರು, ಹುಬ್ಬಳ್ಳಿ, ಬಾಗಲಕೋಟೆ, ಬೀದರ್, ದಾವಣಗೆರೆ ಮತ್ತು ಬೆಂಗಳೂರು ವಲಯಗಳಲ್ಲಿ ಗೆಲುವು ಸಾಧಿಸಿದವರು ರಾಜ್ಯಮಟ್ಟದ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ವಲಯಗಳಲ್ಲಿ ವಿಜೇತರಾದ ಎಲ್ಲರಿಗೂ ಒಂದು ದಿನದ ಆವಿಷ್ಕಾರ ಕಾರ್ಯಾಗಾರವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರದಲ್ಲಿ ಸಮೃದ್ಧ ಕಲಿಕೆಯ ಅನುಭವ ಪಡೆಯಬಹುದು. ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ ಹೊರಹೊಮ್ಮಲು ಈ ಆವಿಷ್ಕಾರ ಕಾರ್ಯಾಗಾರವು ಹೊಸ ವೇದಿಕೆಯನ್ನು ಕಲ್ಪಿಸಲಿದೆ.

ಪ್ರಕ್ರಿಯೆ ಹೇಗೆ?: ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು.

ನೋಂದಾಯಿತ ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ವಲಯದಲ್ಲಿ 6 ಅಗ್ರ ತಂಡಗಳು ವಲಯ ಮಟ್ಟದ ಅಂತಿಮ ಹಂತಕ್ಕೆ ತಲುಪುತ್ತವೆ. ಆರು ವಲಯಗಳ ವಿಜೇತರು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯುತ್ತಾರೆ. ಅಂತಿಮ ಹಂತದ ಎಲ್ಲ ಸ್ಪರ್ಧಿಗಳಿಗೆ ಆವಿಷ್ಕಾರ ಕಾರ್ಯಾಗಾರ ನಡೆಸಲಾಗುತ್ತದೆ. ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿದೆ.

ನೋಂದಣಿ ಉಚಿತವಾಗಿದ್ದು, ಆಸಕ್ತರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ಗೆ ನೋಂದಾಯಿಸಿಕೊಳ್ಳಬಹುದು.

ಸಂಪರ್ಕಕ್ಕೆ: 7338018541 (ಕಚೇರಿ ಅವಧಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಲಭ್ಯ)

ನೋಂದಣಿಗೆ ಸ್ಕ್ಯಾನ್ ಮಾಡಿ

ಇ–ಸ್ವತ್ತು ಸಮರ್ಪಕವಾಗಿ ಜಾರಿಗೊಳಿಸಿ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜಿ.ಪಂ ಸಿಇಒಗಳಿಗೆ ಸಚಿವರ ಸೂಚನೆ
- ಜಿಲ್ಲಾ ಮಟ್ಟದಲ್ಲಿ ವಿಶೇಷ ತರಬೇತಿ ಆಯೋಜಿಸಿ

ಬೆಂಗಳೂರು: ‘ಗ್ರಾಮೀಣ ಪ್ರದೇಶಗಳ ಸುಮಾರು ಒಂದು ಕೋಟಿ ಆಸ್ತಿಗಳನ್ನು ‘ಇ-ಸ್ವತ್ತು’ ತೆಕ್ಕೆಗೆ ತರುವ ಮೂಲಕ ಮನೆ ಹಾಗೂ ನಿವೇಶನಗಳನ್ನು ಸಕ್ರಮಗೊಳಿಸುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು’ ಎಂದು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಒ) ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

‘ಇ-ಸ್ವತ್ತು’ ಅನುಷ್ಠಾನ ಮತ್ತು ಇತರ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ಮಂಗಳವಾರ ನಡೆಸಿದ ಅವರು, ‘ಈ ಕುರಿತ ನಿಯಮಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನನ ಮಾಡಿಸಲು ಜಿಲ್ಲಾ ಮಟ್ಟದಲ್ಲಿ ವಿಶೇಷ ತರಬೇತಿ ಆಯೋಜಿಸಬೇಕು’ ಎಂದು ಸಲಹೆ ನೀಡಿದರು.

‘ಲಕ್ಷಾಂತರ ಜನರು ಈ ಯೋಜನೆಯ ಲಾಭ ಪಡೆಯಲು ಕಾಯುತ್ತಿದ್ದಾರೆ. ಸಾರ್ವಜನಿಕರಿಗೆ ಸುಲಲಿತವಾಗಿ ಹಾಗೂ ಪಾರದರ್ಶಕವಾಗಿ ಇ–ಸ್ವತ್ತು ಪ್ರಯೋಜನ ದೊರೆಯುವಂತೆ ಸಿಬ್ಬಂದಿಯನ್ನು ಸಜ್ಜು ಮಾಡಬೇಕು. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ನೆರವು ಪಡೆದು ಈ ಆಂದೋಲನವನ್ನು ಯಶಸ್ವಿಗೊಳಿಸಬೇಕು’ ಎಂದು ಸೂಚನೆ ನೀಡಿದರು.

ಕೆಲವು ಜಿಲ್ಲೆಗಳಲ್ಲಿ ಆಸ್ತಿತೆರಿಗೆ ಸಂಗ್ರಹ ಕುಂಠಿತವಾಗಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಪ್ರಿಯಾಂಕ್, ‘ತೆರಿಗೆ ವಸೂಲಾತಿಗೆ ಆದ್ಯತೆ ನೀಡಲು ಗ್ರಾಮ ಪಂಚಾಯತಿ ಸಿಬ್ಬಂದಿಗೆ ಸೂಚನೆ ನೀಡಲು ಹಾಗೂ ಸಭೆ, ವಿಮರ್ಶೆ, ಸ್ಥಳ ಪರೀಕ್ಷೆ ಮೂಲಕ ಗಮನಹರಿಸಲು ತಾಲ್ಲೂಕು ಪಂಚಾಯತಿ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು’ ಎಂದರು.

‘ಸಾರ್ವಜನಿಕರ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ಪರಿಹಾರಕ್ಕೆ ಕ್ರಮ ತೆಗೆದುಕೊಳ್ಳಬೇಕು. ಕೆಳ ಹಂತದ ಅಧಿಕಾರಿಗಳಿಗೆ ಕಳುಹಿಸಿದ ದೂರುಗಳ ಸ್ಥಿತಿಗತಿಗಳ ವಿವರಗಳನ್ನು ಪಡೆದು, ಸಮಸ್ಯೆ ಬಗೆಹರಿದ ನಂತರ ದೂರುದಾರರಿಗೆ ಉತ್ತರ ನೀಡಬೇಕು’ ಎಂದು ಸಲಹೆ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲಾ, ಇಲಾಖೆ ಆಯುಕ್ತೆ ಅರುಂಧತಿ ಚಂದ್ರಶೇಖರ್ ಮತ್ತು ಅಧಿಕಾರಿಗಳು ಇದ್ದರು.

‘ಯಾತ್ರಾಸ್ಥಳಗಳ ಅಭಿವೃದ್ಧಿಗೆ ಅನುದಾನ’

‘ಪ್ರವಾಸಿ ತಾಣಗಳು ಹಾಗೂ ಯಾತ್ರಾ ಸ್ಥಳಗಳ ಸಮೀಪ ಲಭ್ಯವಿರುವ ಗ್ರಾಮ ಪಂಚಾಯತಿ ಆಸ್ತಿಗಳಲ್ಲಿ ಸಂಪನ್ಮೂಲ ಹೆಚ್ಚಿಸುವ ಯೋಜನೆಗಳನ್ನು ರೂಪಿಸಿದರೆ ಸರ್ಕಾರ ಅನುದಾನ ನೀಡಲಿದೆ’ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

‘ಗ್ರಾಮ ಪಂಚಾಯತಿಗಳ ಸಂಪನ್ಮೂಲವನ್ನು ವೃದ್ಧಿಸುವ ಮೂಲಕ ಸ್ಥಳೀಯ ಸರ್ಕಾರಗಳ ಆರ್ಥಿಕ ಸ್ಥಿತಿ ಬಲಪಡಿಸಲು ‘ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ’ (ಲೀಪ್) ಜಾರಿಗೆ ತರಲಾಗಿದೆ. ಆದರೆ ಗ್ರಾ.ಪಂ. ಮಟ್ಟದಲ್ಲಿ ಲಭ್ಯವಿರುವ ಆಸ್ತಿಗಳನ್ನು ಪತ್ತೆ ಮಾಡಿ, ಅಲ್ಲಿ ಪಂಚಾಯತಿಗಳಿಗೆ ಶಾಶ್ವತ ಆದಾಯ ತಂದು ಕೊಡುವ ಕಟ್ಟಡಗಳನ್ನು ನಿರ್ಮಾಣ ಮಾಡಬೇಕು’ ಎಂದರು.

ಲಂಚ ಪ್ರಕರಣ: ಇನ್‌ಸ್ಪೆಕ್ಟರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯ ಸಾವಿನ ಕುರಿತು ಪ್ರಕರಣ ದಾಖಲಿಸಲು ಹಾಗೂ ಮರಣೋತ್ತರ ಪರೀಕ್ಷೆ ಮಾಡಿಸಲು ಲಂಚ ಪಡೆದಿದ್ದ ಆರೋಪ ದಡಿ ಬೆಳ್ಳಂದೂರು ಠಾಣೆ ಇನ್‌ಸ್ಪೆಕ್ಟರ್ ರಮೇಶ್ ರೊಟ್ಟಿ ಅವರನ್ನು ಅಮಾನತುಗೊಳಿಸಿ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಠಾಣೆಯ ಪಿಎಸ್‌ಐ ಸಂತೋಷ್ ಮತ್ತು ಕಾನ್‌ಸ್ಟೆಬಲ್ ಗೋರಕ್‌ನಾಥ್ ಅವರನ್ನು ಈ ಹಿಂದೆ ಅಮಾನತು ಮಾಡಲಾಗಿತ್ತು.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ ನಿವೃತ್ತ ಸಿಎಫ್‌ಒ ಶಿವಕುಮಾರ್ ಅವರ ಪುತ್ರಿ ಅಕ್ಷಯಾ(34) ಸೆ.18ರಂದು ಅನಾರೋಗ್ಯದಿಂದ ಮೃತಪಟ್ಟಿದ್ದರು. ಈ ವಿಚಾರ ತಿಳಿದು ತಂದೆ–ತಾಯಿ ಮುಂಬೈನಿಂದ ನಗರಕ್ಕೆ ಬಂದಿದ್ದರು. ಮೃತಪಟ್ಟ ಪುತ್ರಿಯ ಮೃತದೇಹ ಸಾಗಿಸಲು ಹಾಗೂ ಮರಣೋತ್ತರ ಪರೀಕ್ಷೆ ನಡೆಸಲು ಪಟ್ಟ ಸಂಕಷ್ಟ ಹಾಗೂ ಆಂಬುಲೆನ್ಸ್ ಚಾಲಕ, ಪೊಲೀಸರು, ಸ್ಮಶಾನದ ಸಿಬ್ಬಂದಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳಿಂದ ಅನುಭವಿಸಿದ ನೋವು ಹಾಗೂ ಸಿಬ್ಬಂದಿ ಹಣಕ್ಕೆ ಬೇಡಿಕೆಯಿಟ್ಟ ಬಗೆಯನ್ನು ಕೆ.ಶಿವಕುಮಾರ್ ಅವರು ‘ಲಿಂಕ್ಡ್ ಇನ್’ನಲ್ಲಿ ಎಳೆಎಳೆಯಾಗಿ ತೆರೆದಿಟ್ಟಿದ್ದರು.

ಮುಸ್ಲಿಂ ಉದ್ಯಮಿಯಿಂದ ದೇಗುಲ ಜೀರ್ಣೋದ್ಧಾರ

'ಬಸವನ ಗುಡಿ'ಗೆ ಸೈಯದ್ ಸಾದತ್ ಸಖಾಫ್ ₹2ಕೋಟಿ ದೇಣಿಗೆ

• ಓದೇಶ ಸಕಲೇಶಪುರ

ಚನ್ನಪಟ್ಟಣ (ರಾಮನಗರ): ಸ್ಥಳೀಯ ಮುಸ್ಲಿಂ ಉದ್ಯಮಿಯೊಬ್ಬರು ಇಲ್ಲಿನ ಮಂಗಳವಾರಪೇಟೆಯಲ್ಲಿ ಸುಮಾರು ₹2 ಕೋಟಿ ವೆಚ್ಚದಲ್ಲಿ ಹಿಂದೂ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದಾರೆ.

ಶಿಥಿಲಾವಸ್ಥೆಗೆ ತಲುಪಿದ್ದ ಹಳೆಯ ದೇವಸ್ಥಾನದ ಜಾಗದಲ್ಲಿ ತಲೆ ಎತ್ತಿರುವ, ಕಲ್ಲಿನಿಂದ ನಿರ್ಮಿಸಿರುವ ಈ ಭವ್ಯ ಬಸವೇಶ್ವರ ದೇವಸ್ಥಾನವು ಕರ್ನಾಟಕ ರಾಜ್ಯೋತ್ಸವ ದಿನದಂದು ಲೋಕಾರ್ಪಣೆಗೊಂಡಿದೆ.

ಎಸ್.ಕೆ.ಗ್ರೂಪ್ಸ್ ಮಾಲೀಕರಾದ ಸಾಹುಕಾರ್ ಎಸ್.ಕೆ. ಸೈಯದ್ ಸಾದತ್ ಉಲ್ಲಾ ಸಖಾಫ್ ಅವರು ದೇವಸ್ಥಾನ ನಿರ್ಮಿಸಿ ಸಾಮರಸ್ಯದ ಸಂದೇಶ ಸಾರಿದ್ದಾರೆ.

ಸ್ಥಳೀಯ ಬಸವೇಶ್ವರ ವಿನಾಯಕ ಯುವಕರ ಬಳಗದ ನೇತೃತ್ವದಲ್ಲಿ ನಡೆದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು, ಸಾಧು, ಸಂತರು, ಜನಪ್ರತಿನಿಧಿಗಳು ಭಾಗಿಯಾಗಿದ್ದರು.

ತಮಿಳುನಾಡಿನ ಕಲ್ಲು ಬಳಕೆ: ದೇವಾಲಯಕ್ಕೆ ಅಗತ್ಯವಿರುವ ಕಲ್ಲುಗಳನ್ನು ತಮಿಳುನಾಡಿನ ಮಹಾಬಲೇಶ್ವರದಿಂದ ತರಿಸಲಾಗಿದೆ. ನುರಿತ ಶಿಲ್ಪಿಗಳನ್ನು ಕರೆಯಿಸಿ ಕಲ್ಲುಗಳನ್ನು ಕೆತ್ತಿಸಲಾಗಿದೆ.

ದೇವಾಲಯದ ಮೂರ್ತಿ ಪ್ರತಿಷ್ಠಾಪನೆ ಮತ್ತು ಬ್ರಹ್ಮ ಕಲಶೋತ್ಸವ ಪ್ರತಿಷ್ಠಾಪನೆ ಕಾರ್ಯದಲ್ಲಿ ಸಖಾಫ್ ಕೂಡ ಭಾಗಿಯಾಗಿದ್ದರು.



ಮಂಗಳವಾರಪೇಟೆಯಲ್ಲಿಯಲ್ಲಿ ಉದ್ಯಮಿ ಸಾಹುಕಾರ್ ಎಸ್.ಕೆ. ಸಯ್ಯದ್ ಸಾದತ್‌ಉಲ್ಲಾ ಸಖಾಫ್ ಅವರು ನಿರ್ಮಿಸಿರುವ ಬಸವೇಶ್ವರ ಸ್ವಾಮಿ ದೇವಾಲಯ

'ಬಸವನ ಗುಡಿ' ಎಂದೇ ಪ್ರಸಿದ್ಧಿಯಾಗಿರುವ ಮಂಗಳವಾರಪೇಟೆಯ ಬಸವೇಶ್ವರ ದೇವಾಲಯ ಪಟ್ಟಣದ ಪ್ರಮುಖ ಸ್ಥಳವಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಮೆರವಣಿಗೆ, ಪ್ರತಿಭಟನಾ ಮೆರವಣಿಗೆ, ರಾಜಕೀಯ ಪಕ್ಷಗಳ ರ‍್ಯಾಲಿಗಳು ಈ ದೇವಾಲಯದ ಆವರಣದಿಂದಲೇ ಆರಂಭವಾಗುತ್ತವೆ.

ಸನ್ಮಾನ: ದೇವಾಲಯದ ಜೀರ್ಣೋದ್ಧಾರ ಕುರಿತ ಸ್ಥಳೀಯರ ಒತ್ತಾಸೆಗೆ ಸಯ್ಯದ್ ಅವರು ಕೈ ಜೋಡಿಸಿದ್ದಾರೆ. ಅಗತ್ಯವಿದ್ದ ಸುಮಾರು ₹2 ಕೋಟಿ ಮೊತ್ತವನ್ನು ಭರಿಸಿದ್ದಾರೆ. ದೇವಾಲಯ ಲೋಕಾರ್ಪಣೆ ದಿನ ಸ್ಥಳೀಯರು ಸಯ್ಯದ್ ಅವರಿಗೆ ಕಿರೀಟ ತೊಡಿಸಿ ಸನ್ಮಾನಿಸಿದರು.

ಸಾಮರಸ್ಯದ ಪ್ರತೀಕ

ಬೀಡಿ ಉದ್ಯಮ ಸೇರಿ ವಿವಿಧ ಉದ್ಯಮ ಹೊಂದಿರುವ ಸಯ್ಯದ್ ಅವರು ದಾನಿಯಾಗಿ ಹೆಸರಾದವರು. 2010ರಲ್ಲಿ ತಾಲ್ಲೂಕಿನ ಎಸ್.ಎಂ. ಹಳ್ಳಿ ಗ್ರಾಮದಲ್ಲಿದ್ದ ದರ್ಗಾದ ಜೊತೆಗೆ ಶಿಥಿಲಾವಸ್ಥೆಯಲ್ಲಿದ್ದ ವೀರಭದ್ರೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡಿದ್ದರು ಎಂದು ಸ್ಥಳೀಯರು ನೆನೆದರು.

'ಜಾತಿ ಮತ್ತು ಧರ್ಮಕ್ಕಿಂತ ಪ್ರೀತಿ, ಮಾನವೀಯತೆ ಮತ್ತು ಸೌಹಾರ್ದ ಮುಖ್ಯ. ಸಖಾಫ್ ಅವರು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುವ ಮೂಲಕ ಅಂತಹ ಸಾಮರಸ್ಯ ಬೆಸೆಯುವ ಕೆಲಸ ಮಾಡಿದ್ದಾರೆ. ನಾವೆಲ್ಲರೂ ಆಭಾರಿಗಳಾಗಿರುತ್ತೇವೆ' ಎಂದು ಸ್ಥಳೀಯ ನಿವಾಸಿ ಬೋರಯ್ಯ ಹೇಳುತ್ತಾರೆ.



ಬಸವೇಶ್ವರ ದೇವಾಲಯನ್ನು ನಾನು ನಿರ್ಮಿಸಬೇಕು ಎಂಬುದು ಆ ಶಿವನ ಇಚ್ಛೆಯಾಗಿತ್ತು. ಇದರಲ್ಲಿ ನನ್ನದೇನೂ ಇಲ್ಲ. ಎಲ್ಲರೂ ಪ್ರೀತಿಯಿಂದ ಸೋದರರಾಗಿ ಬಾಳಬೇಕು. ಜಾತಿ, ಧರ್ಮಕ್ಕಿಂತ ಪ್ರೀತಿ ದೊಡ್ಡದು

ಎಸ್.ಕೆ. ಸಯ್ಯದ್ ಸಾದತ್‌ಉಲ್ಲಾ ಸಖಾಫ್, ಉದ್ಯಮಿ

ಸುದ್ದಿ 2 ನಿಮಿಷ

ಶಕ್ತಿ ಟ್ರಸ್ಟ್: ₹1 ಕೋಟಿ ಸ್ಕಾಲರ್‌ಷಿಪ್ ಘೋಷಣೆ

ಮಂಗಳೂರು: ಇಲ್ಲಿಯ ಶಕ್ತಿ ಪದವಿಪೂರ್ವ ಕಾಲೇಜು 2026-27ನೇ ಸಾಲಿನಲ್ಲಿ ಪ್ರಥಮ ಪಿಯುಸಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗಾಗಿ 'ಶಕ್ತಿ ಪ್ರತಿಭಾ' ಸ್ಕಾಲರ್‌ಷಿಪ್ ಪರೀಕ್ಷೆಯನ್ನು ನ.9, 16, 23 ಹಾಗೂ 30ರಂದು ಆಯೋಜಿಸಿದೆ.

ರಾಜ್ಯದ ಯಾವುದೇ ಭಾಗದ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶವಿದೆ. ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಯಲ್ಲಿ (ಬೋರ್ಡ್, ಸಿಬಿಎಸ್‌ಇ, ಐಸಿಎಸ್‌ಇ) ವ್ಯಾಸಂಗ ಮಾಡುತ್ತಿರಬೇಕು. 9 ಮತ್ತು 10ನೇ ತರಗತಿಯ ಗಣಿತ ಮತ್ತು ವಿಜ್ಞಾನ ವಿಷಯದ ಬಗ್ಗೆ ಪರೀಕ್ಷೆ ನಡೆಸಲಾಗುತ್ತದೆ.

ಸ್ಕಾಲರ್‌ಷಿಪ್ ಪರೀಕ್ಷೆ ಮತ್ತು ಪರೀಕ್ಷಾ ಮಂಡಳಿ ಪರೀಕ್ಷೆಯಲ್ಲಿ ಗಣಿತ, ವಿಜ್ಞಾನ ವಿಷಯದಲ್ಲಿ ಹೆಚ್ಚು ಅಂಕ ಪಡೆದವರಿಗೆ ವಿಜ್ಞಾನ, ವಾಣಿಜ್ಯ ವಿಭಾಗದಲ್ಲಿ ಉಚಿತ ಶಿಕ್ಷಣ ಪಡೆಯಲು ಅವಕಾಶ ಇದೆ. ಶಕ್ತಿ ಪಿಯು ಕಾಲೇಜಿಗೆ ಪ್ರವೇಶ ಪಡೆಯುವ 150 ವಿದ್ಯಾರ್ಥಿಗಳಿಗೆ ಒಟ್ಟು ₹1 ಕೋಟಿ ಮೊತ್ತದ ಸ್ಕಾಲರ್‌ಷಿಪ್ ನೀಡಲಾಗುವುದು. ಮಾಹಿತಿಗೆ ವೆಬ್‌ಸೈಟ್ shakthi.edu.in ಅಥವಾ ಮೊ. 9686000046 ಸಂಪರ್ಕಿಸಬಹುದು ಎಂದು ಶಿಕ್ಷಣ ಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ್ ಕೆ ತಿಳಿಸಿದ್ದಾರೆ.

SHAKTHI Education Trust

ನಕಲಿ ವೆಬ್‌ಸೈಟ್: ಕೊಲ್ಲೂರು ದೇವಸ್ಥಾನದ ಅಧಿಕಾರಿ ದೂರು

ಕುಂದಾಪುರ (ಉಡುಪಿ): ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಾಲಯಗಳ ವಸತಿ ಗೃಹಗಳಲ್ಲಿ ಕೊಠಡಿ ಕಾಯ್ದಿರಿಸಲು ಇರುವ ಕರ್ನಾಟಕ ದೇವಾಲಯಗಳ ವಸತಿಯ ವೆಬ್‌ಸೈಟ್ ವಿಳಾಸ ಹೋಲುವಂತೆ ನಕಲಿ ವೆಬ್‌ಸೈಟ್ ರೂಪಿಸಿ ಭಕ್ತರಿಗೆ ವಂಚಿಸಲಾಗುತ್ತಿದೆ ಎಂದು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಶೆಟ್ಟಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ನಕಲಿ ವೆಬ್‌ಸೈಟ್ ಮೂಲಕ ಭಕ್ತರಿಗೆ ಲಲಿತಾಂಬಿಕಾ ಅತಿಥಿಗೃಹದ ಕೊಠಡಿಯನ್ನು ಕಾಯ್ದಿರಿಸಿ, ವಾಟ್ಸ್‌ಆ್ಯಪ್, ಫೋನ್ ಪೇ ಕ್ಯೂ ಆರ್ ಕೋಡ್ ಅನ್ನು ನೀಡಿ ಹಣ ಪಡೆದು, ನಕಲಿ ರಶೀದಿ ನೀಡಿ ವಂಚಿಸಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವಸತಿ ಗೃಹದಲ್ಲಿ ಕೊಠಡಿ ಕಾಯ್ದಿರಿಸಿ, ರಶೀದಿಯೊಂದಿಗೆ ಭಕ್ತರು ದೇಗುಲಕ್ಕೆ ಬಂದಾಗ ವಂಚನೆ ಕುರಿತು ತಿಳಿದುಬಂದಿದೆ. ನಕಲಿ ವೆಬ್‌ಸೈಟ್ ಜಾಲ ಪತ್ತೆಹಚ್ಚಿ ಕ್ರಮ ಕೈಗೊಳ್ಳಬೇಕು ಎಂದು ಕೋರಲಾಗಿದೆ. ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವಾಲಯಗಳ ವಸತಿಗೃಹಗಳಲ್ಲಿ ಕೊಠಡಿ ಕಾಯ್ದಿರಿಸುವ ವೆಬ್‌ಸೈಟ್‌ನ ಅಧಿಕೃತ ವಿಳಾಸ: http:// karnatakatemplesaccommodation.com ಆಗಿದೆ ಎಂದು ಉಲ್ಲೇಖಿಸಿದ್ದಾರೆ.

ಪೋಕ್ಸೊ: ಮುಖ್ಯ ಶಿಕ್ಷಕನ ಬಂಧನ

ಸಂಡೂರು: 'ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ತಾಲ್ಲೂಕಿನ ಗ್ರಾಮವೊಂದರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಜಂಬಣ್ಣ (58) ಎಂಬುವನನ್ನು ಪೋಕ್ಸೊ ಕಾಯ್ದೆಯಡಿ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕುರುಬರ ಸೇರ್ಪಡೆಗೆ ವಿರೋಧವಿಲ್ಲ'

ಎಸ್‌.ಟಿ.ಗೆ ಹೆಚ್ಚುವರಿ ಮೀಸಲಾತಿ ತರಲಿ – ಮಾಜಿ ಸಂಸದ ಉಗ್ರಪ್ಪ ಹೇಳಿಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರಿಸಲು ನನ್ನ ವಿರೋಧವಿಲ್ಲ. ಆದರೆ, ಹೆಚ್ಚುವರಿ ಮೀಸಲಾತಿಯನ್ನೂ ಜತೆಗೆ ತಂದರೆ ಹಂಚಿಕೊಂಡು ಬದುಕಬಹುದು' ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಹೇಳಿದರು.

ಮಂಗಳವಾರ ನಡೆದ ಸಮಾಲೋಚನಾ ಸಭೆಯಲ್ಲಿ ಅವರು, 'ನಮ್ಮ ತಟ್ಟೆಗೆ ಕೈ ಹಾಕದಂತೆ ಸ್ಪಷ್ಟವಾಗಿ ತಿಳಿಸಿದ್ದೇವೆ. ಸಿ.ಎಂ ಅವರಿಗೂ ಮನವರಿಕೆ ಆಗಿದೆ. ಕುರುಬ ಸಮುದಾಯವನ್ನು ಸೇರಿಸುವ ಇಚ್ಛೆಯಿದ್ದರೆ, ಮೀಸಲು ಪ್ರಮಾಣ ಹೆಚ್ಚಿಸಲಿ' ಎಂದರು.



ಉಗ್ರಪ್ಪ

'ಕುರುಬ ಸಮುದಾಯ ಎಸ್‌ಟಿಗೆ ಒಳಪಡುವುದೇ ಅಥವಾ ಇಲ್ಲವೇ ಎಂದು ಮೊದಲು ಕುಲಶಾಸ್ತ್ರೀಯ ಅಧ್ಯಯನ ಆಗಬೇಕು. ಗೊಲ್ಲ, ಬೆಸ್ತ ಸಮುದಾಯಗಳಲ್ಲೂ ಇದೇ ರೀತಿಯ ಅಧ್ಯಯನ ಆಗಬೇಕು. ಅದರ ಹೊರತಾಗಿ ಈಗಿನ ಸ್ಥಿತಿಯಲ್ಲೇ ಎಸ್‌ಟಿಗೆ ಸೇರಿಸುವ ಪ್ರಯತ್ನ ಒಳ್ಳೆಯದಲ್ಲ. ಕುಲಶಾಸ್ತ್ರೀಯ ಅಧ್ಯಯನ ನಡೆದು ಎಲ್ಲ ಅರ್ಹರನ್ನೂ ಎಸ್‌ಟಿಗೆ ಸೇರಿಸಬಹುದು, ಆದರೆ ಅದೇ ಪ್ರಕಾರ ಮೀಸಲಾತಿ ಪ್ರಮಾಣವನ್ನೂ ಹೆಚ್ಚಿಸಬೇಕು' ಎಂದರು.

ಇದನ್ನು ವಿರೋಧಿಸಿದ ವಾಲ್ಮೀಕಿ ನಾಯಕ ಸಮಾಜದ ಕಾರ್ಯದರ್ಶಿ ದೇವರಮನೆ ಶ್ರೀನಿವಾಸ್, 'ಎಸ್‌ಟಿ ಮೀಸಲಾತಿ ಪಾಲನ್ನು ಹೆಚ್ಚಿಸಿ ಕುರುಬ ಸಮುದಾಯದವರನ್ನು ಎಸ್‌ಟಿಗೆ ಸೇರಿಸಿದರೆ, ನಮ್ಮ ಸಮಾಜಕ್ಕೆ ರಾಜಕೀಯವಾಗಿ ಅನ್ಯಾಯ ಆಗುತ್ತದೆ. ಈ ಪ್ರಸ್ತಾವ ಒಪ್ಪಿಕೊಳ್ಳಲಾಗದು. ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವುದು ಮಾತ್ರ ಬೇಡ' ಎಂದರು. ಸಮಾಜದ ಅಧ್ಯಕ್ಷ ಗೋಸಲ ಭರಮಪ್ಪ ಇದ್ದರು.

ಆಳಂದ ಪುರಸಭೆ ಅಧ್ಯಕ್ಷನ ಸದಸ್ಯತ್ವ ರದ್ದು

ಪ್ರಜಾವಾಣಿ ವಾರ್ತೆ

ಆಳಂದ (ಕಲಬುರಗಿ ಜಿಲ್ಲೆ): ಪುರಸಭೆ ಅಧ್ಯಕ್ಷ ಫಿರ್ದೋಸ್ ಆರಿಫ್ ಅನ್ಸಾರಿ ಅವರ ಸದಸ್ಯತ್ವ ರದ್ದುಗೊಳಿಸಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಆದೇಶಿಸಿದ್ದಾರೆ. ಅನ್ಸಾರಿ ಆಳಂದದ ವಾರ್ಡ್ ನಂ.13ರ ಸದಸ್ಯರಾಗಿ ಆಯ್ಕೆಯಾಗಿದ್ದರು.

'ಪುರಸಭೆಯ ಸಭೆಗಳಿಗೆ ಸತತ ಗೈರು ಹಾಜರಾಗಿ ಪೌರಸಭೆಗಳ ಅಧಿನಿಯಮ 1964ರ ಕಲಂ 16(2)(ಸಿ) ಉಲ್ಲಂಘಿಸಿದ್ದು, ಸದಸ್ಯತ್ವ ರದ್ದಾಗಿದೆ' ಎಂದು ಡಿ.ಸಿ ತಿಳಿಸಿದ್ದಾರೆ.



ಫಿರ್ದೋಸ್

ಆಳಂದ ಪಟ್ಟಣದಲ್ಲಿ ಶಿವರಾತ್ರಿ ವೇಳೆ ನಡೆದಿದ್ದ ಗಲಭೆ ಸೇರಿ ಹಲವು ಪ್ರಕರಣಗಳು ಫಿರ್ದೋಸ್ ಮೇಲಿವೆ. ಒಮ್ಮೆ ಜಿಲ್ಲೆಯಿಂದ ಗಡಿಪಾರು ಆಗಿದ್ದರು. ಜೈಲು ಶಿಕ್ಷೆ ಅನುಭವಿಸಿದ್ದರು. ಸತತ ಐದು ಸಭೆಗಳಿಗೆ ಗೈರು ಹಾಜರಾಗಿದ್ದರು ಎನ್ನಲಾಗಿದೆ.

ರಹಮತ್ ತರೀಕೆರೆಗೆ ಮಲೆಯೂರು ಗುರುಸ್ವಾಮಿ ಪ್ರಶಸ್ತಿ

ಮೈಸೂರು: ಇಲ್ಲಿನ ಪ್ರೊ. ಮಲೆಯೂರು ಗುರುಸ್ವಾಮಿ ಪ್ರತಿಷ್ಠಾನ ನೀಡುವ 2025ನೇ ಸಾಲಿನ ಪ್ರೊ.ಮಲೆಯೂರು ಗುರುಸ್ವಾಮಿ ಪ್ರಶಸ್ತಿಗೆ ಲೇಖಕ ರಹಮತ್ ತರೀಕೆರೆ ಆಯ್ಕೆಯಾಗಿದ್ದಾರೆ.



ರಹಮತ್ ತರೀಕೆರೆ

ಸಾಹಿತ್ಯ, ಸಾಮಾಜಿಕ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ. ನ.9ರಂದು ಇಲ್ಲಿನ ಜೆ.ಎಸ್.ಎಸ್ ಆಸ್ಪತ್ರೆ ಆವರಣದ ರಾಜೇಂದ್ರ ಭವನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನ ಪ್ರಕಟಣೆ ತಿಳಿಸಿದೆ.

ಹೃದಯಾಘಾತ ದಂಪತಿ ಸಾವು



ಶಶಿಧರ, ಸರೋಜಾ

ಬೀಳಗಿ (ಬಾಗಲಕೋಟೆ ಜಿಲ್ಲೆ): ಇಲ್ಲಿನ ಕಿಲ್ಲಾ ಓಣಿ ನಿವಾಸಿಗಳಾಗಿದ್ದ ದಂಪತಿ ಸೋಮವಾರ ತಡರಾತ್ರಿ ಅರ್ಧ ಗಂಟೆ ಅಂತರದಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

'ಶಶಿಧರ ಪತ್ತಾರ (40) ರಾತ್ರಿ 1.45ಕ್ಕೆ ಮೃತಪಟ್ಟರು. ನೊಂದ ಪತ್ನಿ ಸರೋಜಾ ಪತ್ತಾರ (35) ರಾತ್ರಿ 2.15ಕ್ಕೆ ಮೃತರಾದರು. ದಂಪತಿಗೆ ಇಬ್ಬರು ಪುತ್ರರಿದ್ದಾರೆ. ಮಂಗಳವಾರ ಅಂತ್ಯಕ್ರಿಯೆ ನೆರವೇರಿತು' ಎಂದು ಸ್ಥಳೀಯರು ತಿಳಿಸಿದರು.

ಕೆಂಭಾವಿ ಪಥಸಂಚಲನ ಸಂಪನ್ನ

ಕೆಂಭಾವಿ (ಯಾದಗಿರಿ ಜಿಲ್ಲೆ): ಪೊಲೀಸರ ಬಿಗಿ ಭದ್ರತೆಯಲ್ಲಿ ಪಟ್ಟಣದಲ್ಲಿ ಮಂಗಳವಾರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಪಥಸಂಚಲನ ಶಾಂತಿಯುತವಾಗಿ ಜರುಗಿತು.

ಆರ್‌ಎಸ್‌ಎಸ್ ಪಥಸಂಚಲನದ ದಿನವೇ ತಮಗೂ ಅವಕಾಶ ಕೊಡಿ ಎಂದು ದಸಂಸ (ಸ್ವಾಭಿಮಾನಿ ಪ್ರೊ. ಬಿ.ಕೃಷ್ಣಪ್ಪ ಬಣ), ದಲಿತ ಸಂಘರ್ಷ ಸಮಿತಿ ಅರ್ಜಿ ಸಲ್ಲಿಸಿದ್ದರಿಂದ ಗೊಂದಲ ಏರ್ಪಟ್ಟಿತ್ತು.

ಅನುಮತಿ ಇಲ್ಲದೆ ಪಥಸಂಚಲನೆ ಮಾಡದಂತೆ ಪೊಲೀಸರು ದಲಿತ ಸಂಘಟನೆಗಳಿಗೆ ತಾಕೀತು ಮಾಡಿದ್ದರು. ಮುಂಜಾಗ್ರತೆಯಾಗಿ 300ಕ್ಕೂ ಹೆಚ್ಚು ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು.

ಆರೋಪಿ ಆತ್ಮಹತ್ಯೆಗೆ ಯತ್ನ: ಪೊಲೀಸರಿಗೆ ಗಾಯ

ಸೋಮವಾರಪೇಟೆ (ಕೊಡಗು ಜಿಲ್ಲೆ): ಜಾಮೀನು ರಹಿತ ಬಂಧನ ವಾರಂಟ್ ನೀಡಲು ಮನೆಗೆ ಬಂದಿದ್ದ ಪೊಲೀಸರ ಎದುರೇ ಆರೋಪಿ ಸಂಜಯ್‌ಕುಮಾರ್ (32) ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು, ರಕ್ಷಿಸಲು ಮುಂದಾದ ಕಾನ್‌ಸ್ಟೆಬಲ್‌ಗಳಾದ ಮಲ್ಲೇಶ್ ಮತ್ತು ತಾಜನ್ ಅವರಿಗೂ ಗಾಯಗಳಾಗಿವೆ.

'ಗಾಂಧಿನಗರ ನಿವಾಸಿಯಾದ ಆರೋಪಿ ವಿರುದ್ಧ ಹಲವು ಪ್ರಕರಣಗಳಿವೆ. ಬಂಧನದ ವಾರಂಟ್ ನೀಡಲು ಪೊಲೀಸರು ಬಂದಾಗ ಘಟನೆ ನಡೆಯಿತು. ಮೂವರನ್ನೂ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಈತನ ವಿರುದ್ಧ ವಿವಿಧ ಜಿಲ್ಲೆಗಳ ಠಾಣೆಗಳಲ್ಲೂ ಪ್ರಕರಣ ದಾಖಲಾಗಿವೆ. ಮರ ಕತ್ತರಿಸುವ ಯಂತ್ರಕ್ಕಾಗಿ ಬಾಟಲಲ್ಲಿ ತುಂಬಿಸಿಡಲಾಗಿದ್ದ ಪೆಟ್ರೋಲ್ ಅನ್ನು ಆತ ತನ್ನ ಮೈಮೇಲೆ ಸುರಿದುಕೊಂಡ ಎಂದು ಅವರು ಹೇಳಿದ್ದಾರೆ.

ಸಂಡೂರಿನಲ್ಲಿ ಕೌಶಲ ವಿ.ವಿ ಸ್ಥಾಪನೆ

ಒಂದನೇ ಪುಟದಿಂದ...

2032ರ ವೇಳೆಗೆ ಸುಮಾರು 30 ಲಕ್ಷ ಯುವಜನರಿಗೆ ಕೌಶಲ ತರಬೇತಿ ನೀಡಲಾಗುವುದು. ಐಟಿಐಗಳಲ್ಲಿ ಮಹಿಳೆಯರ ಪ್ರವೇಶವನ್ನು ಶೇಕಡ 33ಕ್ಕೆ ಹೆಚ್ಚಿಸುವ ಹಾಗೂ ಅಂತರರಾಷ್ಟ್ರೀಯ ವಲಸೆ ಕೇಂದ್ರ ಮೂಲಕ ಜಾಗತಿಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಮೂರು ದಿನಗಳ ಶೃಂಗಸಭೆಯಲ್ಲಿ ವಿವಿಧ ಕ್ಷೇತ್ರದ ತಜ್ಞರು ತಮ್ಮ ಅನುಭವ ಹಂಚಿಕೊಳ್ಳಲು ಮುಕ್ತ ಅವಕಾಶ ನೀಡಲಾಗಿದೆ. ಪ್ರತಿ ವರ್ಷ ಲಕ್ಷಾಂತರ ವಿದ್ಯಾರ್ಥಿಗಳು ಪದವಿ ಪಡೆದು ಹೊರ ಬರುತ್ತಿದ್ದು, ಉದ್ಯೋಗ ಹುಡುಕುವುದಕ್ಕಿಂತ ಸೃಷ್ಟಿ ಮಾಡುವತ್ತ ಗಮನ ಹರಿಸಿದ್ದೇವೆ' ಎಂದರು.

ನೀಲನಕ್ಷೆ ಬಿಡುಗಡೆ: 2025–2032 ಹಾಗೂ ಕರ್ನಾಟಕ ವರ್ಕ್‌ಫೋರ್ಸ್ ಬ್ಲೂಪ್ರಿಂಟ್–2030 ಬಿಡುಗಡೆ ಮಾಡಲಾಯಿತು.

ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಡಾ.ಶರಣಪ್ರಕಾಶ್ ಪಾಟೀಲ, ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ, ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಮಾರಿಷಸ್‌ನ ಕೈಗಾರಿಕಾ ಸಚಿವ ಮುಹಮ್ಮದ್ ರೆಜಾ ಖಾಸ್ಸಂ ಉತೀಮ್, ಭಾರತ ಮತ್ತು ಏಷ್ಯಾ ಪೆಸಿಫಿಕ್‌ನ ವ್ಯವಸ್ಥಾಪಕ ನಿರ್ದೇಶಕ ಅಶುತೋಷ್ ಗುಪ್ತ, ಸಂಸದ ರಾಧಾಕೃಷ್ಣ ದೊಡ್ಡಮನಿ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಶಿವಕಾಂತಮ್ಮ ನಾಯಕ ಪಾಲ್ಗೊಂಡಿದ್ದರು.

'ಆಹಾರ ಸುರಕ್ಷತೆಗೆ ಮಾನದಂಡ ರೂಪಿಸಿ'

ಒಂದನೇ ಪುಟದಿಂದ...

'ಮನುಷ್ಯರ ಆರೋಗ್ಯಕ್ಕೆ ಎದುರಾಗುವ ಅಪಾಯಗಳ ಬಗ್ಗೆ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ-2006ರ ನಿಯಮಗಳ ಅಡಿಯಲ್ಲಿ ಸಣ್ಣ, ಮಧ್ಯಮ ಮತ್ತು ಬೃಹತ್ ರೆಸ್ಟೋರೆಂಟ್‌ಗಳಿಗೆ ತ್ರಿಪಕ್ಷೀಯ ಮಾರ್ಗಸೂಚಿಯೊಂದನ್ನು ರೂಪಿಸಬೇಕು' ಎಂದೂ ನ್ಯಾಯಪೀಠ ಇದೇ ವೇಳೆ ಕೇಂದ್ರ ಸರ್ಕಾರಕ್ಕೆ ಖಡಕ್ ತಾಕೀತು ಮಾಡಿದೆ.

'ಅರ್ಜಿದಾರರು ಆಕ್ಷೇಪಿಸಿರುವ ನಿಬಂಧನೆಗಳನ್ನು ಅಸಾಂವಿಧಾನಿಕ ಎಂದು ನಿರ್ಣಯಿಸಿ ಅವುಗಳನ್ನು ರದ್ದುಗೊಳಿಸಲು ಯಾವುದೇ ಕಾರಣಗಳಿಲ್ಲ' ಎಂದು ಸ್ಪಷ್ಟಪಡಿಸಿದೆ.

ಏನಿದು ಅರ್ಜಿ?: 'ಆಹಾರ ಸುರಕ್ಷತೆ ದೃಷ್ಟಿಯಿಂದ ನಿಯಮಗಳನ್ನು ರೂಪಿಸಿ, ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಬೇಕು' ಎಂದು ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೆ ನಿರ್ದೇಶನ ನೀಡಿತ್ತು. ಈ ಸಂಬಂಧ ಆಹಾರ ಸುರಕ್ಷಾ ಆಯುಕ್ತರು 2012ರ ಮಾರ್ಚ್ 13ರಂದು ಅಧಿಸೂಚನೆ ಹೊರಡಿಸಿದ್ದರು.

'ಈ ಅಧಿಸೂಚನೆಯನ್ನು ರದ್ದುಪಡಿಸಬೇಕು' ಎಂದು ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. 'ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಂತ್ರಣ, (ಪ್ಯಾಕೇಜಿಂಗ್ ಮತ್ತು ಲೇಬಲಿಂಗ್) ನಿಯಮಗಳು-2011, ಆಹಾರ ಸುರಕ್ಷತೆ ಮತ್ತು ಮಾನದಂಡಗಳು, ಆಹಾರ ಉತ್ಪನ್ನಗಳ ಮಾನದಂಡಗಳು ಮತ್ತು ಆಹಾರ ಸೇರ್ಪಡೆಗಳ ನಿಯಮಗಳು-2011 ಮತ್ತು ಆಹಾರ ಸುರಕ್ಷತೆ ಮತ್ತು ಪ್ರಮಾಣಿತ ಕಾಯ್ದೆ-2006ರ 50 ರಿಂದ 65 ರವರೆಗಿನ ಕಲಂಗಳು ಅಸಾಂವಿಧಾನಿಕ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

'ಮಾನದಂಡಗಳನ್ನು ಅನ್ವಯಿಸಲು ನಮಗೆ ಸಾಧ್ಯವಿಲ್ಲ' ಎಂದು ಅರ್ಜಿದಾರರಾದ ಹೋಟೆಲ್ ಸಂಘಗಳು ಪ್ರತಿಪಾದಿಸಿದ್ದವು.

ಮಾಜಿ ಸಚಿವ ಮೇಟಿ ನಿಧನ

ಒಂದನೇ ಪುಟದಿಂದ...

'ನಂತರ ಅವರ ಹುಟ್ಟೂರು, ತಿಮ್ಮಾಪುರದಲ್ಲಿ ಮಧ್ಯಾಹ್ನ 2ರವರೆಗೂ ದರ್ಶನಕ್ಕೆ ಇಡಲಾಗುವುದು. ಬಳಿಕ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ' ಎಂದು ತಿಳಿಸಿವೆ.

ಮೇಟಿ ಅವರು, ಎಂಟನೇ ತರಗತಿಯವರೆಗೆ ಓದಿದ್ದರು. ಐದು ಬಾರಿ ಶಾಸಕರು ಮತ್ತು ಒಮ್ಮೆ ಸಂಸದರಾಗಿದ್ದ ಅವರು, ಸಚಿವರೂ ಆಗಿದ್ದರು. 1989ರಲ್ಲಿ ಗುಳೇದಗುಡ್ಡ ಕ್ಷೇತ್ರದಿಂದ ಜನತಾ ಪಕ್ಷದಿಂದ ಸ್ಪರ್ಧಿಸಿ ಮೊದಲ ಬಾರಿಗೆ ಶಾಸಕರಾದರು. 1994ರಲ್ಲಿ ಜನತಾದಳದಿಂದ ಸ್ಪರ್ಧಿಸಿ, ಶಾಸಕರಾದರು. ಎಚ್.ಡಿ.ದೇವೇಗೌಡರ ಸಚಿವ ಸಂಪುಟದಲ್ಲಿ ಅರಣ್ಯ ಖಾತೆ ಸಚಿವರಾದರು.

1996ರಲ್ಲಿ ಲೋಕಸಭಾ ಚುನಾವಣೆಗೆ ಸಚಿವರಾಗಿ ಇದ್ದುಕೊಂಡೇ ಬಾಗಲಕೋಟೆ ಕ್ಷೇತ್ರದಿಂದ ಸ್ಪರ್ಧಿಸಿ, ವಿಜೇತರಾದರು. 1998ರಲ್ಲಿ ಬಾಗಲಕೋಟೆ ಲೋಕಸಭೆ ಕ್ಷೇತ್ರದಿಂದ ಸೋತರು. 1999ರಲ್ಲಿ ಗುಳೇದಗುಡ್ಡ ಕ್ಷೇತ್ರದಿಂದ ಸ್ಪರ್ಧಿಸಿ, ಸೋಲುಂಡರು. 2004ರಲ್ಲಿ ಅದೇ ಕ್ಷೇತ್ರದಿಂದ ಜಯಗಳಿಸಿದ್ದರು.

2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಆಗಿದ್ದರಿಂದ ಗುಳೇದಗುಡ್ಡ ಕ್ಷೇತ್ರ ಬಾಗಲಕೋಟೆ ಮತ್ತು ಬಾದಾಮಿ ವಿಧಾನಸಭಾ ಕ್ಷೇತ್ರಗಳಲ್ಲಿ ವಿಲೀನ ವಾಯಿತು. ಸಿದ್ದರಾಮಯ್ಯ ಅವರೊಂದಿಗೆ ಕಾಂಗ್ರೆಸ್ ಸೇರ್ಪಡೆಯಾದ ಅವರು, 2008ರಲ್ಲಿ ಬಾಗಲಕೋಟೆ ಕ್ಷೇತ್ರದಿಂದ ಸ್ಪರ್ಧಿಸಿ, ಸೋತರು.

2013ರಲ್ಲಿ ಬಾಗಲಕೋಟೆ ಕ್ಷೇತ್ರದಿಂದ ಜಯಗಳಿಸಿದ್ದು, 2016ರಲ್ಲಿ ಅಬಕಾರಿ ಸಚಿವರಾದರು. ಸಿ.ಡಿ ಪ್ರಕರಣದಲ್ಲಿ ಆರೋಪ ಬಂದಿದ್ದರಿಂದ ರಾಜೀನಾಮೆ ನೀಡಿದ್ದರು. 2018ರಲ್ಲಿ ಸೋತರೆ, 2023ರಲ್ಲಿ ಮತ್ತೆ ಶಾಸಕರಾದರು. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿದ್ದರು.

ಸಂಕ್ಷಿಪ್ತ ಸುದ್ದಿ


ಸುಪ್ರೀಂ ಕೋರ್ಟ್‌ಗೆ ಪವಿತ್ರಾಗೌಡ ಅರ್ಜಿ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ರದ್ದು ಮಾಡಿರುವ ಆದೇಶವನ್ನು ಮರುಪರಿಶೀಲಿಸಬೇಕು ಎಂದು ಆರೋಪಿ ಪವಿತ್ರಾ ಗೌಡ ಅವರು ಸುಪ್ರೀಂ ಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದಾರೆ.

ಕೊಲೆ ಪ್ರಕರಣದಲ್ಲಿ ನಟ ದರ್ಶನ್, ಪವಿತ್ರಾ ಗೌಡ ಹಾಗೂ ಇತರ ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಆಗಸ್ಟ್ 14ರಂದು ರದ್ದುಗೊಳಿಸಿತ್ತು. ಮರು ಪರಿಶೀಲನಾ ಅರ್ಜಿಯು ನ್ಯಾಯಮೂರ್ತಿ ಜೆ.ಬಿ.ಪಾರ್ದೀವಾಲಾ ಪೀಠದಲ್ಲಿ ಗುರುವಾರ ವಿಚಾರಣೆಗೆ ಬರಲಿದೆ.

'ಲೋಕಾ' ಬಲೆಗೆ ಜೆ.ಇ

ಚಿಕ್ಕಮಗಳೂರು: ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ₹40 ಸಾವಿರ ಲಂಚ ಪಡೆಯುತ್ತಿದ್ದ ಮೆಸ್ಕಾಂ ಕಿರಿಯ ಎಂಜಿನಿಯರ್ ಮಲ್ಲಿಕಾರ್ಜುನಸ್ವಾಮಿ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.



ಮಲ್ಲಿಕಾರ್ಜುನ ಸ್ವಾಮಿ


ಸಿವಿಲ್ ಕಾಮಗಾರಿಯ ಬಾಕಿ ಬಿಲ್ ₹10 ಲಕ್ಷ ಪಾವತಿಸಲು ₹40 ಸಾವಿರ ಬೇಡಿಕೆ ಇಟ್ಟಿದ್ದರು. ಕಾಮಗಾರಿ ಪೂರ್ಣಗೊಂಡು ವರ್ಷ ಕಳೆದಿದ್ದರೂ ಬಿಲ್ ಪಾವತಿಸಲು ಸತಾಯಿಸಿದ್ದರು ಎಂದು ಗುತ್ತಿಗೆದಾರರೊಬ್ಬರು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ದಾಖಲೆ ಇಲ್ಲದ ₹50 ಲಕ್ಷ ವಶ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮುಂಬೈನಿಂದ ಪಟ್ಟಣಕ್ಕೆ ಬಂದ ಖಾಸಗಿ ಬಸ್‌ನಲ್ಲಿ ದಾಖಲೆ ಇಲ್ಲದೆ ತರುತ್ತಿದ್ದ ₹50 ಲಕ್ಷ ನಗದನ್ನು ಭಟ್ಕಳ ಶಹರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಬಸ್‌ನಲ್ಲಿ ಪಾರ್ಸೆಲ್ ರೂಪದಲ್ಲಿ ಬಂದಿದ್ದ ಸೂಟ್‌ಕೇಸ್‌ನಲ್ಲಿ ₹ 500 ಮುಖಬೆಲೆಯ ನಗದು, 401 ಗ್ರಾಂ ತೂಕದ 32 ಚಿನ್ನದ ಬಳೆಗಳು ಇದ್ದವು. ಚಿನ್ನದ ಬಳೆಗಳಿಗೆ ದಾಖಲೆ ಇದ್ದು, ಹಣಕ್ಕೆ ದಾಖಲೆ ಇಲ್ಲದ ಕಾರಣಕ್ಕೆ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹವಾಲಾ ದಂಧೆ ಶಂಕೆ ಇದೆ. ಹಣದ ಯಾರಿಗೆ ಸೇರಿದ್ದು ಎಂಬುದು ಪತ್ತೆಯಾಗಿಲ್ಲ' ಎಂದು ಹೇಳಿದ್ದಾರೆ.



ಭಟ್ಕಳ ಪೊಲೀಸರು ವಶಪಡಿಸಿಕೊಂಡಿರುವ ಹಣ ಹಾಗೂ ಚಿನ್ನಾಭರಣ

'ರಾಜ್ಯೋತ್ಸವ ಪ್ರಶಸ್ತಿ ಮೊತ್ತ ಸೇವಾ ಸಂಸ್ಥೆಗಳಿಗೆ ದೇಣಿಗೆ'

ಮಂಗಳೂರು: ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯ ₹5 ಲಕ್ಷ ಮೊತ್ತವನ್ನು ಐದು ಮಾನವೀಯ ಸೇವಾ ಸಂಸ್ಥೆಗಳಿಗೆ ನೀಡುವುದಾಗಿ ಪ್ರಶಸ್ತಿ ಪುರಸ್ಕೃತ ಅನಿವಾಸಿ ಉದ್ಯಮಿ ಝುಕರಿಯಾ ಜೋಕಟ್ಟೆ ತಿಳಿಸಿದ್ದಾರೆ.



ಝುಕರಿಯಾ ಜೋಕಟ್ಟೆ

ಮಂಗಳೂರಿನ ಸಾನಿಧ್ಯ ಭಿನ್ನ ಸಾಮರ್ಥ್ಯದ ಮಕ್ಕಳ ವಸತಿ ಶಾಲೆ, ಸ್ನೇಹದೀಪ ಎಚ್‌ಐವಿ ಪೀಡಿತ ಮಕ್ಕಳ ಆಶ್ರಮ, ಸ್ನೇಹಾಲಯ ವ್ಯಸನ ವಿಮೋಚನಾ ಕೇಂದ್ರ, ಎಂ.ಫ್ರೆಂಡ್ಸ್ ಚಾರಿಟಬಲ್ ಟ್ರಸ್ಟ್, ಹಿದಾಯ ಕಾಲೊನಿಯ ಅಂಗವಿಕಲ ಮಕ್ಕಳ ಕೇಂದ್ರಕ್ಕೆ ತಲಾ ₹1 ಲಕ್ಷ ನೀಡಲಾಗುವುದು. ಅಭಿಮಾನಿ ಬಳಗ ಏರ್ಪಡಿಸಿರುವ ಪೌರಸನ್ಮಾನದ ವೇಳೆ ಈ ಮೊತ್ತ ವಿತರಿಸಲಾಗುವುದು ಎಂದು ಹೇಳಿದ್ದಾರೆ.

ಅಂಬೇಡ್ಕರ್ ಮೂರ್ತಿ ಭಗ್ನ ಆರೋಪಿ ಬಂಧನ

ಚಾಮರಾಜನಗರ: ತಾಲ್ಲೂಕಿನ ಜ್ಯೋತಿಗೌಡನಪುರದಲ್ಲಿ ಈಚೆಗೆ ಅಂಬೇಡ್ಕರ್ ಹಾಗೂ ಬುದ್ಧನ ಮೂರ್ತಿಗಳನ್ನು ಭಗ್ನಗೊಳಿಸಿ ಫ್ಲೆಕ್ಸ್ ಹಾಗೂ ಭಾವಚಿತ್ರಗಳಿಗೆ ಹಾನಿ ಮಾಡಿದ್ದ ಆರೋಪಿ ಮಂಜುನಾಥ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರತೀಕಾರಕ್ಕೆ ಕೃತ್ಯ: 'ಹಿಂದೆ, ಗ್ರಾಮದ ಪರಿಶಿಷ್ಟ ಜಾತಿಯ ಮಹಿಳೆಗೆ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ಮುಖಂಡರು ಆರೋಪಿಗೆ ₹ 60 ಸಾವಿರ ದಂಡ ವಿಧಿಸಿದ್ದರು. ಅದಕ್ಕೆ ಪ್ರತೀಕಾರವಾಗಿ ಮದ್ಯದ ಮತ್ತಿನಲ್ಲಿ ಕೃತ್ಯ ಎಸಗಿದ್ದು ತನಿಖೆ ವೇಳೆ ದೃಢಪಟ್ಟಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ. ಕವಿತಾ ತಿಳಿಸಿದ್ದಾರೆ.

ಸಿಗದ ಪರಿಹಾರ: ಜಿಲ್ಲಾಧಿಕಾರಿ ಕಚೇರಿ ಬಳಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ರೈತ ಯತ್ನ

ಮಂಡ್ಯ: ಭೂಸ್ವಾಧೀನ ಪ್ರಕರಣದಲ್ಲಿ ವರ್ಷಗಳಿಂದ ಪರಿಹಾರ ದೊರಕಿಲ್ಲ ಎಂದು ಕೆ.ಆರ್.ಪೇಟೆ ತಾಲ್ಲೂಕು ಮೂಡನಹಳ್ಳಿ ಗ್ರಾಮದ ರೈತ ಮಂಜೇಗೌಡ ಎಂ.ಡಿ. (55) ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಮೀಪ ಪೆಟ್ರೋಲ್ ಸುರಿದುಕೊಂಡು, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದರು.

ಜಿಲ್ಲಾಧಿಕಾರಿ ಕಚೇರಿ ಎದುರಿನ ಕಾವೇರಿ ಉದ್ಯಾನದಲ್ಲಿ ಮಂಗಳವಾರ ಬೆಳಿಗ್ಗೆ ರೈತ ಬೆಂಕಿ ಹಚ್ಚಿಕೊಂಡಿದ್ದು, ಸ್ಥಳೀಯರು ಕೂಡಲೇ ನೀರು ಎರಚಿ ಅವರನ್ನು ರಕ್ಷಿಸಿ, ನಗರದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲು ನೆರವಾದರು. ದೇಹವು ಶೇ 60ರಷ್ಟು ಸುಟ್ಟಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

'ಗ್ರಾಮದಲ್ಲಿದ್ದ ಮಂಜೇಗೌಡರ ಕುಟುಂಬದ ಎರಡು ಎಕರೆ ಜಮೀನನ್ನು ಕೆಲ ವರ್ಷಗಳ ಹಿಂದೆ ಸರ್ಕಾರ ಸ್ವಾಧೀನ ಪಡೆದಿದ್ದು, 49 ನಿವೇಶನಗಳನ್ನು ಮಾಡಿ ಬಡವರಿಗೆ ಹಂಚಿಕೆ ಮಾಡಿತ್ತು. ಪ್ರತಿಯಾಗಿ ಪರಿಹಾರ ಅಥವಾ ಪರ್ಯಾಯ ಜಮೀನು ನೀಡಿಲ್ಲ. ಹಲವು ಬಾರಿ ಜಿಲ್ಲಾಧಿಕಾರಿ ಹಾಗೂ ತಾಲ್ಲೂಕು ಕಚೇರಿಗೆ ಮನವಿ ಕೊಟ್ಟರೂ ಪ್ರಯೋಜನವಾಗಿಲ್ಲ' ಎಂಬ ಆರೋಪ ಕೇಳಿಬಂದಿದೆ.



ಮಂಜೇಗೌಡ

ಸೋಮವಾರ ಜಿಲ್ಲಾಧಿಕಾರಿ ಕಚೇರಿಗೆ ಮತ್ತೊಮ್ಮೆ ಮನವಿ ಸಲ್ಲಿಸಲು ಬಂದಿದ್ದ ಮಂಜೇಗೌಡ ರಾತ್ರಿ ಉದ್ಯಾನದಲ್ಲೇ ಮಲಗಿದ್ದರು. ಮಂಗಳವಾರ ಬೆಳಿಗ್ಗೆ ಬೆಂಕಿ ಹಚ್ಚಿಕೊಂಡರು. ಮೊದಲು, 'ವಿದ್ಯುತ್ ಶಾಕ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿದೆ' ಎಂದಿದ್ದ ಅವರು ನಂತರ, 'ನಾನೇ ಬೆಂಕಿ ಹಚ್ಚಿಕೊಂಡೆ' ಎಂದು ತಿಳಿಸಿದರು. ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದರು.

ಚಿಟಿಕೆ ಸುದ್ದಿ

ದೇಶದ ಆರನೇ ಕಲುಷಿತ ನಗರ ದೆಹಲಿ: ವರದಿ



ನವದೆಹಲಿ (ಪಿಟಿಐ): ಅಕ್ಟೋಬರ್‌ನಲ್ಲಿ ಗಾಳಿಯು ಅತಿ ಹೆಚ್ಚು ಕಲುಷಿತಗೊಂಡ ದೇಶದ 10 ನಗರಗಳ ಪಟ್ಟಿಯಲ್ಲಿ ದೆಹಲಿ ಆರನೇ ಸ್ಥಾನ ಪಡೆದಿದ್ದು, ಗಾಜಿಯಾಬಾದ್ ಮತ್ತು ನೊಯಿಡಾ ನಂತರದ ಸ್ಥಾನದಲ್ಲಿವೆ ಎಂದು ಅಧ್ಯಯನವೊಂದು ತಿಳಿಸಿದೆ.

ಶಕ್ತಿ ಮತ್ತು ಶುದ್ಧ ಗಾಳಿಯ ಸಂಶೋಧನಾ ಕೇಂದ್ರ (ಸಿಆರ್‌ಇಎ) ಮಂಗಳವಾರ ಬಿಡುಗಡೆ ಮಾಡಿದ ಅಕ್ಟೋಬರ್ ತಿಂಗಳ ವಾಯು ಗುಣಮಟ್ಟದ ವರದಿಯ ಪ್ರಕಾರ, ಹರಿಯಾಣದ ಧಾರುಹೆಡಾ ನಗರವು ಅಕ್ಟೋಬರ್‌ನಲ್ಲಿ ವಾಯು ಮಾಲಿನ್ಯದಲ್ಲಿ ಮೊದಲ ಸ್ಥಾನದಲ್ಲಿತ್ತು. ಅಲ್ಲಿ ಪ್ರತಿ ಘನ ಮೀಟರ್ ಗಾಳಿಯಲ್ಲಿ 123 ಮೈಕ್ರೋಗ್ರಾಂನಷ್ಟು ಮಾಲಿನ್ಯಕಾರಕ ಕಣಗಳು ಪತ್ತೆಯಾಗಿದ್ದವು.

ದೇಶದಾದ್ಯಂತ ಗಾಳಿಯ ಗುಣಮಟ್ಟದಲ್ಲಿ ತೀವ್ರ ಕುಸಿತ ಕಂಡುಬಂದಿದ್ದು, ಇಂಡೋ–ಗಂಗಾ ಬಯಲು (ಐಜಿಪಿ), ವಿಶೇಷವಾಗಿ ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ (ಎನ್‌ಆರ್‌ಸಿ) ಪರಿಸ್ಥಿತಿ ತೀವ್ರ ಹದಗೆಟ್ಟಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಚುರಾಚಾಂದಪುರ: ನಾಲ್ವರು ಉಗ್ರರ ಹತ್ಯೆ

ಇಂಫಾಲ್/ಚುರಾಚಾಂದಪುರ (ಪಿಟಿಐ): ಭದ್ರತಾ ಪಡೆಗಳು ಮಂಗಳವಾರ ಬೆಳಿಗ್ಗೆ ಇಲ್ಲಿ ನಡೆಸಿದ ಎನ್‌ಕೌಂಟರ್‌ನಲ್ಲಿ ನಿಷೇಧಿತ ಸಂಘಟನೆಗೆ ಸೇರಿದ ನಾಲ್ಕು ಮಂದಿ ಉಗ್ರರು ಹತ್ಯೆಯಾಗಿದ್ದಾರೆ.

ನಿಷೇಧಿತ 'ಯುನೈಟೆಡ್ ಕುಕಿ ನ್ಯಾಷನಲ್ ಆರ್ಮಿಗೆ (ಯುಕೆಎನ್‌ಎ) ಸೇರಿದ ಶಸ್ತ್ರಸಜ್ಜಿತ ಕಾರ್ಯಕರ್ತರು ಅಡಗಿರುವ ಕುರಿತು ಖಚಿತ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ಬೆಳಿಗ್ಗೆ 5.30ರ ಸುಮಾರಿಗೆ ಜಿಲ್ಲೆಯ ಹೆಂಗ್ಲೆಪ್ ಉಪ ವಿಭಾಗದ ಖಾನ್ಪಿ ಗ್ರಾಮದಲ್ಲಿ ಕಾರ್ಯಾಚರಣೆ ಆರಂಭಿಸಿದವು. ಈ ವೇಳೆ ಎರಡು ಕಡೆಗಳ ನಡುವೆ ಭಾರಿ ಗುಂಡಿನ ಚಕಮಕಿ ನಡೆಯಿತು. ಹಲವು ಸುತ್ತಿನ ಗುಂಡಿನ ದಾಳಿ ಬಳಿಕ ನಾಲ್ಕು ಮಂದಿ ಉಗ್ರರು ಹತರಾಗಿದ್ದು, ಉಳಿದವರು ಸ್ಥಳದಿಂದ ಪರಾರಿಯಾದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪೋಕ್ಸೊ' ದುರ್ಬಳಕೆ: 'ಸುಪ್ರೀಂ' ಕಳವಳ

ನವದೆಹಲಿ (ಪಿಟಿಐ): ವೈವಾಹಿಕ ಕಲಹ ಮತ್ತು ಹದಿಹರೆಯದವರ ನಡುವಿನ ಸಹಮತದ ಸಂಬಂಧಗಳ ಪ್ರಕರಣಗಳಲ್ಲಿ 'ಪೋಕ್ಸೊ' ಕಾಯ್ದೆ ದುರುಪಯೋಗ ಆಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕಳವಳ ವ್ಯಕ್ತಪಡಿಸಿದೆ.

ಈ ಸಂಬಂಧ ಕಾನೂನು ನಿಬಂಧನೆಗಳ ಕುರಿತು ಬಾಲಕರು ಮತ್ತು ಪುರುಷರಿಗೆ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹದೇವನ್ ಅವರ ಪೀಠ ಒತ್ತಿ ಹೇಳಿದೆ.

'ದೇಶದಲ್ಲಿ ಬಾಲಕಿಯರು ಮತ್ತು ಮಹಿಳೆಯರಿಗೆ ಸುರಕ್ಷಿತ ವಾತಾವರಣ ಮೂಡಿಸಲು 'ಪೋಕ್ಸೊ' ಕಾಯ್ದೆ ಬಗ್ಗೆ ಜನರಲ್ಲಿ ಸಂವೇದನಾಶೀಲತೆ ಬೆಳೆಯುವಂತೆ ಮಾಡಬೇಕಿದೆ. ಅದಕ್ಕೆ ಅಗತ್ಯ ನಿರ್ದೇಶನಗಳನ್ನು ನೀಡಬೇಕು' ಎಂದು ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ಪೀಠ ನಡೆಸಿತು.

ಮೊದಲ ಹಂತ; ಪ್ರಚಾರಕ್ಕೆ ತೆರೆ

ಬಿಹಾರ ವಿಧಾನಸಭಾ ಚುನಾವಣೆ: ಕೊನೆಯ ದಿನ ಅಬ್ಬರದ ಪ್ರಚಾರ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 121 ಕ್ಷೇತ್ರಗಳಲ್ಲಿ ಬಹಿರಂಗ ಪ್ರಚಾರ ಮಂಗಳವಾರ ಸಂಜೆ ಕೊನೆಗೊಂಡಿತು.

ಆಡಳಿತಾರೂಢ ಎನ್‌ಡಿಎ ಮತ್ತು ವಿರೋಧ ಪಕ್ಷಗಳ 'ಇಂಡಿಯಾ' ಕೂಟದ ನಾಯಕರು ಕೊನೆಯ ದಿನ ಮತದಾರರನ್ನು ಸೆಳೆಯಲು ಬಿರುಸಿನ ಪ್ರಚಾರ ನಡೆಸಿದರು. ಮೊದಲ ಹಂತದ ಮತದಾನ ಗುರುವಾರ ನಡೆಯಲಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮೂರು ಪ್ರಚಾರ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದರೆ, ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಐದು ಕಡೆ ಸಾರ್ವಜನಿಕ ಸಭೆಗಳನ್ನು ನಡೆಸಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ರೋಡ್ ಶೋನಲ್ಲಿ ಪಾಲ್ಗೊಂಡರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮೂರು ಪ್ರಚಾರ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದ ಬಿಜೆಪಿಯ ಮಹಿಳಾ ಕಾರ್ಯಕರ್ತರೊಂದಿಗೆ ವರ್ಚುವಲ್ ಆಗಿ ಸಂವಾದ ನಡೆಸಿದರು. ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಹಲವು ರ್‍ಯಾಲಿಗಳಲ್ಲಿ ಪಾಲ್ಗೊಂಡು ಮತದಾರರನ್ನು ಸೆಳೆಯಲು ಅಂತಿಮ ಹಂತದ ಕಸರತ್ತು ನಡೆಸಿದರು.

> ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ವಿರುದ್ಧ ಒಂದೇ ಒಂದು ಭ್ರಷ್ಟಾಚಾರ ಪ್ರಕರಣವಿಲ್ಲ. ಎನ್‌ಡಿಎಯಿಂದ ಮಾತ್ರ ಬಿಹಾರದ ಅಭಿವೃದ್ಧಿ ಸಾಧ್ಯವಾಗಲಿದೆ
> **ರಾಜನಾಥ ಸಿಂಗ್,** ರಕ್ಷಣಾ ಸಚಿವ

> ಬಿಹಾರದ ಎನ್‌ಡಿಎ ಸರ್ಕಾರವು ಮಹಿಳೆಯರನ್ನು ಭಯದ ನೆರಳಿನಿಂದ ಹೊರಬರುವಂತೆ ಮಾಡಿದೆಯಲ್ಲದೆ, ಅವರ ಸಬಲೀಕರಣಕ್ಕೆ ಹಾದಿ ಕಲ್ಪಿಸಿಕೊಟ್ಟಿದೆ
> **ಸ್ಮೃತಿ ಇರಾನಿ,** ಬಿಜೆಪಿ ನಾಯಕಿ

ಕೊನೆಯ ದಿನದಂದು ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ನಾಯಕರಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ಕೇಂದ್ರದ ಮಾಜಿ ಸಚಿವೆ ಸ್ಮೃತಿ ಇರಾನಿ ಸೇರಿದ್ದಾರೆ.

243 ಸದಸ್ಯ ಬಲದ ವಿಧಾನಸಭೆಯ ಉಳಿದ 122 ಸ್ಥಾನಗಳಿಗೆ ನವೆಂಬರ್ 11ರಂದು ಮತದಾನ ನಡೆಯಲಿದ್ದು, ನವೆಂಬರ್ 14ರಂದು ಫಲಿತಾಂಶ ಹೊರಬೀಳಲಿದೆ.



ಚುನಾವಣಾ ಕರ್ತವ್ಯಕ್ಕೆ ನಿಯೋಜಗೊಂಡಿರುವ ಸಿಬ್ಬಂದಿ ಪಟ್ನಾದ ಮಸ್ಟರಿಂಗ್ ಕೇಂದ್ರದಿಂದ ಅಗತ್ಯ ಸಾಮಗ್ರಿಗಳೊಂದಿಗೆ ಮಂಗಳವಾರ ಮತಗಟ್ಟೆಯತ್ತ ತೆರಳಿದರು –ಪಿಟಿಐ ಚಿತ್ರ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

> ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಎಲ್ಲಾ ರೈತರಿಗೆ ಎಂಎಸ್‌ಪಿ ಮೇಲೆ ಹೆಚ್ಚುವರಿಯಾಗಿ ಪ್ರತಿ ಕ್ವಿಂಟಲ್ ಭತ್ತಕ್ಕೆ ₹300 ಮತ್ತು ಗೋಧಿಗೆ ₹400 ನೀಡಲಾಗುವುದು
> **ತೇಜಸ್ವಿ ಯಾದವ್,** ಆರ್‌ಜೆಡಿ ನಾಯಕ

'ಸರ್ವತೋಮುಖ ಅಭಿವೃದ್ಧಿ'

ದರ್ಭಂಗಾ: ಎನ್‌ಡಿಎ ಸರ್ಕಾರ ಮತ್ತೆ ಅಧಿಕಾರಕ್ಕೇರಿದರೆ ಬಿಹಾರದ ಸರ್ವತೋಮುಖ ಅಭಿವೃದ್ಧಿಗೆ ಕೆಲಸ ಮಾಡಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದರು.

'ಆರ್‌ಜೆಡಿಯ 15 ವರ್ಷಗಳ ಆಳ್ವಿಕೆಯಲ್ಲಿ ಬಿಹಾರವನ್ನು ಧ್ವಂಸಗೊಳಿಸಿದ 'ಜಂಗಲ್‌ರಾಜ್' ಮರುಕಳಿಸುವುದನ್ನು ತಡೆಯಲು 'ಕಮಲ'ದ ಚಿಹ್ನೆಯ ಬಟನ್ ಒತ್ತಿ' ಎಂದು ದರ್ಭಂಗಾ ಮತ್ತು ಮೋತಿಹಾರಿಯಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು ಮನವಿ ಮಾಡಿದರು.

'ಮತದಾನ ದಿನವಾದ ನವೆಂಬರ್ 6ರಂದು ನೀವು ತಪ್ಪು ಮಾಡಿದರೆ ಬಿಹಾರದಲ್ಲಿ ಕೊಲೆ, ಲೂಟಿ, ಅಪಹರಣ ಮತ್ತು ಸುಲಿಗೆ ಪ್ರಕರಣಗಳು ಮತ್ತೆ ಸಾಮಾನ್ಯವಾಗಿ ಬಿಡುತ್ತವೆ' ಎಂದು ಹೇಳಿದರು.

'ಎನ್‌ಡಿಎ ಅಧಿಕಾರಕ್ಕೆ ಬಂದರೆ ಕೋಸೀ ನದಿ ನೀರನ್ನು ನೀರಾವರಿಗೆ ಬಳಸಿ ಪ್ರವಾಹ ತಡೆಗಟ್ಟುವ ಯೋಜನೆಗೆ ₹26 ಸಾವಿರ ಕೋಟಿ ಖರ್ಚು ಮಾಡಲಾಗುವುದು' ಎಂದರು.

'ರೀಲ್ಸ್' ಚಟ ಹತ್ತಿಸಿದ ಮೋದಿ

ಔರಂಗಾಬಾದ್: ಶಿಕ್ಷಣ, ಆರೋಗ್ಯ ಮತ್ತು ನಿರುದ್ಯೋಗ ಸಮಸ್ಯೆಗಳ ಬಗ್ಗೆ ಯುವಜನರು ಮಾತನಾಡಬಾರದು ಎಂಬ ಕಾರಣದಿಂದ ಅವರಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ರೀಲ್ಸ್ ಮಾಡುವ ಚಟವನ್ನು ಪ್ರಧಾನಿ ನರೇಂದ್ರ ಮೋದಿ ಹತ್ತಿಸಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕಿಸಿದರು.

ಔರಂಗಾಬಾದ್ ಜಿಲ್ಲೆಯಲ್ಲಿ ಮಂಗಳವಾರ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ನೀವು (ಯುವಜನರು) ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ರೀಲ್ಸ್ ಮಾಡುವುದರಲ್ಲಿ ನಿರತರಾಗಬೇಕು ಎಂದು ಪ್ರಧಾನಿ ಬಯಸುತ್ತಾರೆ. ಶಿಕ್ಷಣ, ಆರೋಗ್ಯ ಹಾಗೂ ನಿರುದ್ಯೋಗ ಸಮಸ್ಯೆಗಳ ಬಗ್ಗೆ ನೀವು ಮಾತನಾಡಬಾರದು. ಈ ವಿಚಾರದಲ್ಲಿ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಬಾರದು ಎಂಬುದು ಇದರ ಉದ್ದೇಶ' ಎಂದು ಹೇಳಿದರು.

'ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಬಿಹಾರದಲ್ಲಿ ಮತ ಕಳ್ಳತನದಲ್ಲಿ ತೊಡಗಿದ್ದಾರೆ. ಏಕೆಂದರೆ, ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಗೆಲ್ಲುವುದಿಲ್ಲ ಎಂಬುದು ಅವರಿಗೆ ಖಚಿತವಾಗಿದೆ' ಎಂದರು.

ಪ್ರಚಾರಕ್ಕೆ ಈವರೆಗೆ ಕರೆದಿಲ್ಲ: ಸಿ.ಎಂ

ಮೈಸೂರು: 'ಬಿಹಾರ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಹೈಕಮಾಂಡ್ ಇಲ್ಲಿಯವರೆಗೂ ಕರೆದಿಲ್ಲ. ಕರೆದರೆ ಹೋಗುವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಹೇಳಿದರು.



ಸಿದ್ದರಾಮಯ್ಯ

'ಬಿಜೆಪಿ ಆಡಳಿತದ ಭ್ರಷ್ಟಾಚಾರದಿಂದ ಅಲ್ಲಿ ಆಡಳಿತ ವಿರೋಧಿ ಅಲೆ ಇದೆ. ನಿತೀಶ್ ಕುಮಾರ್ ಬಗ್ಗೆ ಜನರಿಗೆ ಬೇಸರವಿದೆ. ವಿರೋಧ ಪಕ್ಷಗಳ ಮಹಾಮೈತ್ರಿಕೂಟವು ಜಯ ಸಾಧಿಸಲಿದೆ' ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

'ನಿತೀಶ್ ಅವರಿಗೆ ಯಾವುದೇ ಸಿದ್ಧಾಂತವಿಲ್ಲ. ಅಧಿಕಾರಕ್ಕಾಗಿ ಪಕ್ಷಗಳನ್ನೂ ಬದಲಾಯಿಸಿದ್ದಾರೆ. ಜನರು ಇಂಡಿಯಾ ಒಕ್ಕೂಟಕ್ಕೆ ಮತ ಚಲಾಯಿಸಲಿದ್ದಾರೆ. ನಿತೀಶ್ ನಮ್ಮ ಗ್ಯಾರಂಟಿಗಳನ್ನೇ ಚುನಾವಣೆಗಾಗಿ ಘೋಷಿಸಿದ್ದಾರೆ. ಅವರನ್ನು ಜನ ಕೈ ಹಿಡಿಯುವುದಿಲ್ಲ. ಕರ್ನಾಟಕದಲ್ಲಿ ಬಿಹಾರದ ಮತದಾರರು ಇದ್ದು, ಅವರಿಗೂ ನಮ್ಮ ಒಕ್ಕೂಟಕ್ಕೆ ಮತ ಹಾಕಿ ಎಂದು ಕೇಳುತ್ತೇವೆ' ಎಂದು ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆ ಆರಂಭ

ನವದೆಹಲಿ/ಕೋಲ್ಕತ್ತ (ಪಿಟಿಐ): ಮೂರು ಕೇಂದ್ರಾಡಳಿತ ಪ್ರದೇಶ ಮತ್ತು 9 ರಾಜ್ಯಗಳಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವನ್ನು ಚುನಾವಣಾ ಆಯೋಗವು ಮಂಗಳವಾರ ಆರಂಭಿಸಿದೆ.

ಮತಗಟ್ಟೆ ಹಂತದ ಅಧಿಕಾರಿಗಳು ಮನೆ ಮನೆಗೆ ತೆರಳಿ ಸ್ವಯಂ ಮಾಹಿತಿಗಳನ್ನು ತುಂಬುವ ನಮೂನೆಗಳನ್ನು ವಿತರಿಸಿದರು.

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವು ಎಸ್‌ಐಆರ್‌ಗೆ ತೀವ್ರ ವಿರೋಧ ವ್ಯಕ್ತಪಡಿಸಿದೆ. 'ಎಸ್‌ಐಆರ್ ಅಂದರೆ ಮತ್ತೇನೂ ಅಲ್ಲ, ಅದು 'ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ)' ಇದ್ದಂತೆ' ಎಂದಿರುವ ತಮಿಳುನಾಡು ಸರ್ಕಾರ, ಇದರ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಎಸ್‌ಐಆರ್ ಕುರಿತು ನಿರ್ಧಾರ ಕೈಗೊಳ್ಳಲು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಬುಧವಾರ ಆನ್‌ಲೈನ್ ಮೂಲಕ ಸರ್ವ ಪಕ್ಷ ಸಭೆ ಕರೆದಿದ್ದಾರೆ.

ವ್ಯಕ್ತಿ ಆತ್ಮಹತ್ಯೆ: 'ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಪ್ರಕ್ರಿಯೆ ಆರಂಭಗೊಂಡ ಕಾರಣ, ದಾಖಲೆಗಳಲ್ಲಿ ಇರುವ ತನ್ನ ಹೆಸರಿನ ಕಾಗುಣಿತದಲ್ಲಿ ತಪ್ಪುಗಳಿವೆ ಎಂದು ಹೆದರಿ ಹೌರಾ ಜಿಲ್ಲೆಯ ಜಾಹಿರ್ ಮಲ್ (30) ಎಂಬುವರು ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಎಸ್‌ಐಆರ್ ಭಯ: ವಾರದಲ್ಲಿ ಏಳು ಸಾವು'

'ಎಸ್‌ಐಆರ್ ಭಯದಿಂದ ರಾಜ್ಯದಲ್ಲಿ ಕಳೆದ ಒಂದು ವಾರದಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಎಸ್‌ಐಆರ್ ಕುರಿತ ಭಯ ಮತ್ತು ದಿಗಿಲು, ಜನರ ಪ್ರಾಣ ತೆಗೆಯುತ್ತಿದೆ. ಕೇಂದ್ರ ಸರ್ಕಾರವು ಜವಾಬ್ದಾರಿಯಿಂದ ನಡೆದುಕೊಳ್ಳಲಿಲ್ಲ ಎಂದಾದರೆ, ನಮ್ಮ ಪಕ್ಷವು ಈ ಯುದ್ಧವನ್ನು ದೆಹಲಿ ಅಂಗಳಕ್ಕೆ ಕೊಂಡೊಯ್ಯುತ್ತದೆ' ಎಂದು ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಮಂಗಳವಾರ ಎಚ್ಚರಿಕೆ ನೀಡಿದರು.

> 2002ರಲ್ಲಿ ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಯು ಎರಡು ವರ್ಷದವರೆಗೆ ನಡೆದಿತ್ತು. ಈ ಬಾರಿ ಒಂದೇ ತಿಂಗಳಿಗೆ ಇದನ್ನು ಮುಗಿಸಿಬಿಡುವ ಆತುರ ಆಯೋಗಕ್ಕೆ ಏಕೆ?
> **ಮಮತಾ ಬ್ಯಾನರ್ಜಿ**
> ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಎಸ್‌ಐಆರ್ ಪ್ರಕ್ರಿಯೆ ಆರಂಭಿಸಿರುವುದನ್ನು ವಿರೋಧಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಕೋಲ್ಕತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಮಮತಾ, 'ಎಸ್‌ಐಆರ್ ಕಾರಣದಿಂದ ರಾಜ್ಯದಲ್ಲಿ ಒಬ್ಬ ಮತದಾರ ಕೂಡ ಮತದಾರರ ಪಟ್ಟಿಯಿಂದ ಹೊರಗುಳಿದರೆ, ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಉರುಳುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ' ಎಂದರು.

ಶಬರಿಮಲೆ: ಪೂಜೆ ಬುಕ್ಕಿಂಗ್ ಶುರು

ತಿರುವನಂತಪುರ (ಪಿಟಿಐ): ಶಬರಿಮಲೆಗೆ ಬರುವ ಭಕ್ತರು ಬುಧವಾರದಿಂದ ಪೂಜಾ ಸೇವೆಯನ್ನು ಆನ್‌ಲೈನ್ ಮೂಲಕ ಮುಂಗಡವಾಗಿ ಕಾಯ್ದಿರಿಸಬಹುದುಎಂದು ತಿರುವಾಂಕೂರು ದೇವಸ್ವಂ ಮಂಡಳಿ(ಟಿಡಿಬಿ) ಮಂಗಳವಾರ ತಿಳಿಸಿದೆ.

ವಸತಿ ವ್ಯವಸ್ಥೆಗೆ 'ಸನ್ನಿಧಾನಂ' ಕಟ್ಟಡದಲ್ಲಿನ ಕೊಠಡಿಗಳನ್ನೂ ಮುಂಗಡವಾಗಿ ಕಾಯ್ದಿರಿಸಬಹುದು. ಟಿಡಿಬಿ ವೆಬ್ ಸೈಟ್ (www.onlinetdb.com) ಮೂಲಕ ಬುಕ್ ಮಾಡಲು ಅವಕಾಶ ಕಲ್ಪಿಸಲಾಗಿದೆ' ಎಂದು ಟಿಡಿಬಿ ಪ್ರಕಟಣೆ ತಿಳಿಸಿದೆ. ಎರಡು ತಿಂಗಳ ಅವಧಿಯ 'ಮಂಡಲಂ–ಮಕರವಿಳಕ್ಕು' ದರ್ಶನವು ನ.17ರಿಂದ ಆರಂಭಗೊಳ್ಳಲಿದೆ.

ಆನ್‌ಲೈನ್ ಗೇಮ್ಸ್: ಪ್ರತಿಕ್ರಿಯೆಗೆ ಸೂಚನೆ



ನವದೆಹಲಿ (ಪಿಟಿಐ): 'ಆನ್‌ಲೈನ್ ಮನಿ ಗೇಮ್ಸ್'ಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ನಿಷೇಧಿಸುವ ಆನ್‌ಲೈನ್ ಗೇಮಿಂಗ್ ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತು ಸಮಗ್ರ ಉತ್ತರ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಮಂಗಳವಾರ ಸೂಚಿಸಿದೆ.

ಈ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಮತ್ತು ಕೆ.ವಿ.ವಿಶ್ವನಾಥನ್ ಅವರ ಪೀಠವು, 'ಕೇಂದ್ರ ಸರ್ಕಾರ ಈಗಾಗಲೇ ಉತ್ತರ ನೀಡಿದೆ. ಆದರೆ, ಈ ಸಂಬಂಧ ಸಮಗ್ರ ಪ್ರತಿಕ್ರಿಯೆಯನ್ನು ಬಯಸುತ್ತೇವೆ' ಎಂದು ಹೇಳಿತು.

ಅರ್ಜಿದಾರರ ಪರ ಹಾಜರಾಗುವ ವಕೀಲರಿಗೆ ಉತ್ತರದ ಪ್ರತಿಯನ್ನು ಮುಂಚಿತವಾಗಿ ಒದಗಿಸುವಂತೆ ತಿಳಿಸಿದ ಪೀಠವು, ಅದಕ್ಕೇನಾದರೂ ಪ್ರತ್ಯುತ್ತರ ಸಲ್ಲಿಸುವುದಿದ್ದರೆ ಆದಷ್ಟು ಬೇಗ ಸಲ್ಲಿಸಿ ಎಂದು ಅರ್ಜಿದಾರರಿಗೆ ತಿಳಿಸಿತು. ಈ ಕುರಿತ ವಿಚಾರಣೆಯನ್ನು ಪೀಠ ಇದೇ 26ಕ್ಕೆ ನಿಗದಿಪಡಿಸಿತು.

'ಆನ್‌ಲೈನ್ ಗೇಮಿಂಗ್‌ನ ಪ್ರಚಾರ ಮತ್ತು ನಿಯಂತ್ರಣ ಕಾಯ್ದೆ–2025' ಹಣ ಹೂಡಿ ಆಡುವ 'ಆನ್‌ಲೈನ್ ಗೇಮಿಂಗ್' ಅನ್ನು ನಿಷೇಧಿಸುವ ಕೇಂದ್ರದ ಮೊದಲ ಶಾಸನವಾಗಿದೆ. ಇದು ಫ್ಯಾಂಟಸಿ ಕ್ರೀಡೆಗಳು ಮತ್ತು ಬಾಜಿ ಕಟ್ಟುವ ಇ–ಕ್ರೀಡೆಗಳನ್ನು ನಿಷೇಧಿಸುತ್ತದೆ. ಕೇಂದ್ರದ ಈ ಕಾಯ್ದೆಯನ್ನು ಪ್ರಶ್ನಿಸಿ ದೆಹಲಿ, ಕರ್ನಾಟಕ ಮತ್ತು ಮಧ್ಯ ಪ್ರದೇಶಗಳ ಹೈಕೋರ್ಟ್‌ಗಳಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ.

ಈ ಮೂರೂ ಹೈಕೋರ್ಟ್‌ಗಳಲ್ಲಿ ಬಾಕಿ ಇರುವ ಈ ಕುರಿತ ಅರ್ಜಿಗಳನ್ನು ಕೇಂದ್ರ ಸರ್ಕಾರದ ಮನವಿ ಮೇರೆಗೆ ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಲಾಗಿದೆ.

ಸಾಮೂಹಿಕ ಅತ್ಯಾಚಾರ ಆರೋಪಿಗಳ ಬಂಧನ

ಕೊಯಮತ್ತೂರು (ತಮಿಳುನಾಡು) (ಪಿಟಿಐ): ಕಾಲೇಜು ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದ ಮೂವರು ಆರೋಪಿಗಳ ವಿರುದ್ಧ ತಮಿಳುನಾಡು ಪೊಲೀಸರು ಗುಂಡಿನ ದಾಳಿ ನಡೆಸಿ, ಬಂಧಿಸಿದ್ದಾರೆ.

'ಸೋಮವಾರ ರಾತ್ರಿ ವೇಳೆ ಆರೋಪಿಗಳ ಶೋಧ ನಡೆಸುತ್ತಿದ್ದ ವೇಳೆ ವಿರುಧುನಗರದ ಸತೀಶ್ (30), ಆತನ ಸಹೋದರ ಕಾರ್ತಿ (21), ಮದುರೈ ಜಿಲ್ಲೆಯ ಈತನ ಸಂಬಂಧಿ ಗುಣ (20) ಪೊಲೀಸರ ಮೇಲೆ ಹಲ್ಲೆ ನಡೆಸಿದರು. ತಕ್ಷಣವೇ ಅವರ ಕಾಲಿಗೆ ಗುಂಡು ಹೊಡೆದು ಬಂಧಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಎ.ಸರವಣ ಸುಂದರ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

'ಯುವತಿ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯವೂ ಅಮಾನವೀಯವಾದುದು. ಇಂತಹ ಘೋರ ಅಪರಾಧಗಳನ್ನು ಖಂಡಿಸಲು ಪದಗಳೇ ಸಾಕಾಗುವುದಿಲ್ಲ. ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಅನುಕೂಲವಾಗುವಂತೆ, ತಿಂಗಳ ಒಳಗಾಗಿ ಆರೋಪಪಟ್ಟಿ ಸಲ್ಲಿಸಬೇಕು' ಎಂದು ಮುಖ್ಯಮಂತ್ರಿ ಸ್ಟಾಲಿನ್ ಅವರು 'ಎಕ್ಸ್'ನಲ್ಲಿ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕ್ಷಿಪ್ರ ಕಾರ್ಯಾಚರಣೆ: 'ಪ್ರಕರಣ ನಡೆದ ತಕ್ಷಣ ಕಾರ್ಯಾಚರಣೆ ನಡೆಸಿದ ತನಿಖಾಧಿಕಾರಿಗಳು 300ಕ್ಕೂ ಅಧಿಕ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಗಳ ಪರಿಶೀಲನೆ ಹಾಗೂ ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಶೋಧ ಕಾರ್ಯಾಚರಣೆ ಆರಂಭಿಸಿದ್ದರು. ಆರೋಪಿಗಳು ಸೋಮವಾರ ರಾತ್ರಿ 10.40ರ ವೇಳೆ ವೆಲ್ಲಕಿನಾರು ಪ್ರದೇಶದಲ್ಲಿರುವುದನ್ನು ಪತ್ತೆಹಚ್ಚಿದ್ದರು' ಎಂದು ಸರವಣ ಸುಂದರ್ ಮಾಹಿತಿ ನೀಡಿದ್ದಾರೆ.

'ಕಾರ್ಯಾಚರಣೆ ವೇಳೆ ಕಾನ್‌ಸ್ಟೆಬಲ್ ಒಬ್ಬರು ಗಾಯಗೊಂಡಿದ್ದಾರೆ. ಆರೋಪಿಗಳ ವಿರುದ್ಧ ಕೊಲೆ, ಕಳ್ಳತನದ ಪ್ರಕರಣಗಳು ದಾಖಲಾಗಿವೆ' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

'ನವೆಂಬರ್ 2ರಂದು ಮೂವರೂ ಸೇರಿಕೊಂಡು ದ್ವಿಚಕ್ರ ವಾಹನವನ್ನು ಕದ್ದೊಯ್ದು, ವಿಮಾನ ನಿಲ್ದಾಣ ಸಮೀಪದ ಮಣ್ಣಿನ ರಸ್ತೆಯಲ್ಲಿ ತೆರಳುತ್ತಿದ್ದರು. ಈ ವೇಳೆ ವಿದ್ಯಾರ್ಥಿನಿಯೊಬ್ಬಳು ತನ್ನ ಸ್ನೇಹಿತನ ಜೊತೆ ಕಾರಿನಲ್ಲಿ ಕುಳಿತು ಮಾತನಾಡುತ್ತಿರುವುದನ್ನು ಗಮನಿಸಿದ್ದಾರೆ. ಅಲ್ಲಿಗೆ ತೆರಳಿದ ಮೂವರು, ಕಲ್ಲಿನಿಂದ ಕಾರಿನ ಗಾಜು ಒಡೆದುಹಾಕಿ, ಸ್ನೇಹಿತನ ಮೇಲೆ ದಾಳಿ ನಡೆಸಿ, ವಿದ್ಯಾರ್ಥಿನಿಯನ್ನು ಕತ್ತಲಿದ್ದ ನಿರ್ಜನ ಪ್ರದೇಶಕ್ಕೆ ಎಳೆದೊಯ್ದು ಲೈಂಗಿಕ ದೌರ್ಜನ್ಯವೆಸಗಿದ್ದಾರೆ. ಸ್ನೇಹಿತ ತಕ್ಷಣವೇ ಎಸ್‌ಒಎಸ್ ಮುಖಾಂತರ ಪೊಲೀಸ್ ನಿಯಂತ್ರಣ ಕೊಠಡಿಗೆ 11.20ಕ್ಕೆ ಮಾಹಿತಿ ನೀಡಿದ್ದಾರೆ. ಇದಾದ 15 ನಿಮಿಷಗಳಲ್ಲಿ ಪೊಲೀಸರು ಸ್ಥಳಕ್ಕೆ ತೆರಳಿ, ವಿದ್ಯಾರ್ಥಿನಿಯನ್ನು ರಕ್ಷಣೆ ಮಾಡಿ, ಆಸ್ಪತ್ರೆಗೆ ದಾಖಲಿಸಿದ್ದಾರೆ. ವಿದ್ಯಾರ್ಥಿನಿಯು ಅಪಾಯದಿಂದ ಪಾರಾಗಿದ್ದಾರೆ' ಎಂದು ಸರವಣ ವಿವರ ನೀಡಿದ್ದಾರೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜೀವನದಲ್ಲಿ ತತ್ತ್ವ ಮತ್ತು ಸಿದ್ಧಾಂತಗಳನ್ನು ಮರೆತಾಗ ಸೋಲು ಎದುರಾಗುತ್ತದೆ.

–ಜವಾಹರ ಲಾಲ್ ನೆಹರೂ

ಸಂಪಾದಕೀಯ

ಕಸ: ರಸ್ತೆಗಳ ಮೇಲಷ್ಟೇ ಅಲ್ಲ ನಡವಳಿಕೆಯಲ್ಲೂ ಕೊಳಕಿದೆ

ಎಲ್ಲೆಂದರಲ್ಲಿ ಕಸ ಸುರಿಯುವವರ ಮನೆಯ ಮುಂದೆ ತ್ಯಾಜ್ಯವನ್ನು ಸುರಿಯುವ ಮೂಲಕ ಕಸ ನಿರ್ವಹಣೆಯ ಬಗ್ಗೆ ಅರಿವು ಮೂಡಿಸುವ ಪ್ರಯತ್ನವನ್ನು 'ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ' (ಬಿಎಸ್‌ಡಬ್ಲ್ಯುಎಂಎಲ್) ನಡೆಸಿದೆ. 'ಕಸ ಸುರಿಯುವ ಹಬ್ಬ' ಹೆಸರಿನ ಈ ಅಭಿಯಾನ, ಸಮಸ್ಯೆಯನ್ನು ಸರಳೀಕರಿಸುವ ಹಾಗೂ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವಾಗಿದೆ. ರಸ್ತೆ, ಖಾಲಿ ನಿವೇಶನ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವುದನ್ನು ಅಭ್ಯಾಸ ಮಾಡಿಕೊಂಡಿರುವವರ ಮನೆಯ ಮುಂದೆ ತ್ಯಾಜ್ಯವನ್ನು ಸುರಿಯುವುದರ ಜೊತೆಗೆ ದಂಡವನ್ನೂ ವಿಧಿಸುವುದರ ಮೂಲಕ ಅವರಿಗೆ ಕಸದ ಸಮಸ್ಯೆಯ ಗಾಂಭೀರ್ಯವನ್ನು ಅರ್ಥ ಮಾಡಿಸುವುದು 'ಬಿಎಸ್‌ಡಬ್ಲ್ಯುಎಂಎಲ್' ಉದ್ದೇಶ. ಆದರೆ, ಹಬ್ಬ ಎಂದು ಕರೆಯಲಾಗುತ್ತಿರುವ ಈ ಅಭಿಯಾನ ವ್ಯಂಗ್ಯದಂತಿದ್ದು, ಏಟಿಗೆ ಏಟು ಎನ್ನುವ ಬದಲಾಗಿ ಪ್ರತೀಕಾರ ನ್ಯಾಯದ ಪರಿಕಲ್ಪನೆಯನ್ನು ಒಳಗೊಂಡಿರುವಂತಿದೆ. ನಾಗರಿಕರ ಮನೆಯ ಮುಂದೆ ಕಸ ಸುರಿಯುವುದನ್ನು ಸಾಂಕೇತಿಕ ಎಂದು ಭಾವಿಸುವುದಾದರೂ, ಅದು ಸಾರ್ವಜನಿಕರ ಅಶಿಸ್ತಿಗಿಂತಲೂ ಹೆಚ್ಚಾಗಿ ನಾಗರಿಕ ವ್ಯವಸ್ಥೆಯ ವೈಫಲ್ಯವನ್ನು ಸೂಚಿಸುವಂತಿದೆ.

ಸಮಸ್ಯೆ ಉಲ್ಬಣಗೊಂಡಿರುವುದರಲ್ಲಿ ಜನರ ಪಾತ್ರವೂ ಇದೆ ಎನ್ನುವುದು ನಿರ್ವಿವಾದ. ಸಾರ್ವಜನಿಕ ಹೊಣೆಗೇಡಿತನ ಬೆಂಗಳೂರಿನಲ್ಲಿ ಆಳವಾಗಿ ಬೇರೂರಿದೆ. ಯಾರೂ ನೋಡದಿರುವಾಗ ರಸ್ತೆಗಳಲ್ಲಿ ಕಸವನ್ನು ಚೆಲ್ಲುವವರು ಇರುವಂತೆಯೇ, ಆ ಕಸವನ್ನು ಸ್ವಚ್ಛಗೊಳಿಸುವುದು ಮತ್ತೊಬ್ಬರ ಕರ್ತವ್ಯ ಎಂದು ಭಾವಿಸುವ ನಿವಾಸಿಗಳೂ ಇದ್ದಾರೆ. ಈ ಮನೋಧರ್ಮ ನಗರವಾಸಿಗಳಲ್ಲಿ ನೈತಿಕಪ್ರಜ್ಞೆ ಕ್ಷೀಣವಾಗಿರುವುದರ ಸಂಕೇತವಾಗಿದೆ. ಆದರೆ, ಈ ಹೊಣೆಗೇಡಿತನವನ್ನು ಮುಂದುಮಾಡಿ, ಅಧಿಕಾರಿಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸಾಧ್ಯವಿಲ್ಲ. ಶಿಸ್ತಿನ ಬಗ್ಗೆ ಪಾಠ ಮಾಡುವ ಮೊದಲು, ಬಿಎಸ್‌ಡಬ್ಲ್ಯುಎಂಎಲ್ ಹಾಗೂ ಅದರ ಮಾತೃಸಂಸ್ಥೆ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ತಮ್ಮ ಕಾರ್ಯನಿರ್ವಹಣೆಯನ್ನು ಮೊದಲು ಸುಧಾರಿಸಿಕೊಳ್ಳಬೇಕು. ಘನ ತ್ಯಾಜ್ಯ ನಿರ್ವಹಣೆಗಾಗಿ ಪ್ರತಿ ವರ್ಷ ದುಬಾರಿ ಸುಂಕ ಸಂಗ್ರಹಿಸುವ ಸಂಸ್ಥೆಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಬದ್ಧತೆಯನ್ನು ಪ್ರದರ್ಶಿಸಬೇಕು. 'ಕಸದ ಮಾಫಿಯಾ' ಸಕ್ರಿಯವಾಗಿರುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹಿಂದೊಮ್ಮೆ ಆಡಿದ್ದ ಮಾತೇ ವ್ಯವಸ್ಥೆಯಲ್ಲಿನ ಹುಳುಕನ್ನು ಕಾಣಿಸುವಂತಿದೆ. ಭ್ರಷ್ಟಾಚಾರ ಹಾಗೂ ಅದಕ್ಷತೆ ಸಮಸ್ಯೆ ಹೆಚ್ಚಾಗಲಿಕ್ಕೆ ಪ್ರಮುಖ ಕಾರಣಗಳು. ವಾಸ್ತವ ಹೀಗಿರುವಾಗ, ಸಾಂಕೇತಿಕ ಕ್ರಮಗಳಿಂದ ಹೆಚ್ಚಿನ ಉಪಯೋಗವಿಲ್ಲ. ಕಸ ಎಸೆಯುವವರನ್ನು ಮುಜುಗರಕ್ಕೆ ಒಳಪಡಿಸುವ ಪ್ರಯತ್ನದಿಂದ ಸಾಧ್ಯವಾಗಬಹುದಾದ ಸಾರ್ವಜನಿಕ ಎಚ್ಚರ ದೀರ್ಘ ಕಾಲ ಉಳಿಯುವುದೂ ಇಲ್ಲ. ಗಮನಾರ್ಹವಾಗಿ ಕಾರ್ಯ ನಿರ್ವಹಿಸುವ ದಕ್ಷ ಹಾಗೂ ಪ್ರಾಮಾಣಿಕ ಕಸ ನಿರ್ವಹಣಾ ವ್ಯವಸ್ಥೆ ಬೆಂಗಳೂರಿಗೆ ಅತ್ಯಗತ್ಯವಾಗಿದೆ.



ಕಸ ಎಸೆಯುವವರನ್ನು ದಂಡಿಸುವ ಪ್ರಯತ್ನದಿಂದ ಕಸ ನಿರ್ವಹಣೆ ಸಮಸ್ಯೆ ಬಗೆಹರಿಯುವುದಿಲ್ಲ. ಸ್ವಚ್ಛ ನಗರ ರೂಪುಗೊಳ್ಳುವಲ್ಲಿ ಸಾರ್ವಜನಿಕ ಹೊಣೆಗಾರಿಕೆಯ ಜೊತೆಗೆ ಗುಣಮಟ್ಟದ ಆಡಳಿತವೂ ಅಗತ್ಯ.

ಸಾರ್ವಜನಿಕ ಸ್ಥಳಗಳಲ್ಲಿ ಕಸದ ತೊಟ್ಟಿಗಳು ಇಲ್ಲದಿರುವುದು ಸಮಸ್ಯೆ ಹೆಚ್ಚಾಗಲಿಕ್ಕೆ ಕಾರಣಗಳಲ್ಲೊಂದು. ಮನೆಯ ಹೊಸ್ತಿಲಲ್ಲೇ ಕಸ ವಿಂಗಡಣೆ ನಡೆಯಬೇಕೆನ್ನುವ ಉದ್ದೇಶದಿಂದ, ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಕಸದ ತೊಟ್ಟಿಗಳನ್ನು ತೆರವುಗೊಳಿಸಲಾಗಿದೆ. ರಾತ್ರಿ ಪಾಳಿಗಳಲ್ಲಿ ಕೆಲಸ ಮಾಡುವ ನೌಕರರು ಬೆಳಗಿನ ಸಮಯದಲ್ಲಿ ಮನೆಯ ಮುಂದೆ ಬರುವ ತ್ಯಾಜ್ಯ ಸಂಗ್ರಹದ ವಾಹನಗಳಿಗೆ ಕಸ ನೀಡಬೇಕೆನ್ನುವುದು ಅವಾಸ್ತವಿಕ ನಿರೀಕ್ಷೆಯಾಗಿದೆ. ತ್ಯಾಜ್ಯ ವಿಲೇವಾರಿಗೆ ತೊಟ್ಟಿಗಳು ಇಲ್ಲದೆ ಹೋದಾಗ, ಆ ಕಸ ರಸ್ತೆಯ ಪಾಲಾಗುವುದರಲ್ಲಿ ಅಚ್ಚರಿಯೇನೂ ಇಲ್ಲ. ಕಸ ಸಂಗ್ರಹ ವಾಹನಗಳು ನಿಯಮಿತವಾಗಿ ಬರುವುದಿಲ್ಲ ಎನ್ನುವ ದೂರುಗಳೂ ಇವೆ. ಕಸ ಎಸೆಯುವವರನ್ನು ಶಿಕ್ಷಿಸಬೇಕೆನ್ನುವ ಮನಸ್ಥಿತಿಯಿಂದ ಹೊರಬಂದು, ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು 'ಜಿಬಿಎ' ಮುಂದಾಗಬೇಕು. ತ್ಯಾಜ್ಯ ಸಂಗ್ರಹಣೆಯ ಸಮಯ, ಮಾನವ ಸಂಪನ್ಮೂಲದ ಕೊರತೆ ಹಾಗೂ ನಾಗರಿಕರ ಅಸಹಕಾರ ಸೇರಿದಂತೆ ಯಾವ ಕಾರಣದಿಂದಾಗಿ ಸಮಸ್ಯೆ ಬಿಗಡಾಯಿಸಿದೆ ಎನ್ನುವುದನ್ನು ಕಂಡುಕೊಳ್ಳಬೇಕು. ಕಸದ ಸಮಸ್ಯೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಮನೆ ಮನೆ ಸಮೀಕ್ಷೆ ನಡೆಸುವುದು ಅಗತ್ಯ. ಕಾನೂನಿನ ಅನುಷ್ಠಾನ ನ್ಯಾಯಯುತವಾಗಿ ಇರಬೇಕೇ ಹೊರತು, ಪ್ರತೀಕಾರದಂತೆ ಪ್ರತಿಕ್ರಿಯಾತ್ಮಕವಾಗಿ ಇರಬಾರದು. ಬೆಂಗಳೂರಿನ ತ್ಯಾಜ್ಯ ನಿರ್ವಹಣೆ ಸಮಸ್ಯೆ ರಸ್ತೆಗಳಲ್ಲಿನ ಗಲೀಜಿಗೆ ಸಂಬಂಧಿಸಿದ್ದಷ್ಟೇ ಅಲ್ಲ; ಅದು, ವರ್ತನೆಯಲ್ಲಿನ ಕೊಳಕಿಗೆ ಸಂಬಂಧಿಸಿದ್ದೂ ಆಗಿದೆ. ನಗರದ ಸ್ವಚ್ಛತೆ ಸಾರ್ವಜನಿಕ ಹೊಣೆಗಾರಿಕೆ ಆಗಿರುವಂತೆ, ಗುಣಮಟ್ಟದ ಸೇವೆ ಕಲ್ಪಿಸುವುದು ಆಡಳಿತದ ಕರ್ತವ್ಯವೂ ಆಗಿದೆ.

ಪೌರರು ಮಾತ್ರವೇ ಮತದಾರರು!



ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುವುದು ಚುನಾವಣಾ ಆಯೋಗಕ್ಕೆ ಸಂವಿಧಾನ ನೀಡಿರುವ ಅಧಿಕಾರ. ದೇಶದ ಭವಿಷ್ಯದ ಮೇಲೆ ಪರಿಣಾಮ ಬೀರುವ ಚುನಾವಣಾ ಪ್ರಕ್ರಿಯೆ ಸಂವಿಧಾನಬದ್ಧವಾಗಿ ನಡೆಯಲು 'ಎಸ್‌ಐಆರ್' ಅನಿವಾರ್ಯ.

'ಇಂಡಿಯಾ' ಮೈತ್ರಿಕೂಟ ಹಾಗೂ ಇತರ ಕೆಲವು ರಾಜಕೀಯ ಪಕ್ಷಗಳ ಪ್ರಮುಖರು ಕೇಂದ್ರ ಚುನಾವಣಾ ಆಯೋಗವು ಬಿಹಾರದಲ್ಲಿ ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಬಹಳ ಗಟ್ಟಿ ದನಿಯಲ್ಲಿ ವಿರೋಧಿಸಿದರು. ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಕೆಲವು ನಿರ್ಬಂಧಗಳನ್ನು ವಿಧಿಸಿ ಎಸ್‌ಐಆರ್ ಮುಂದುವರಿಸಲು ಕೋರ್ಟ್, ಚುನಾವಣಾ ಆಯೋಗಕ್ಕೆ ಅವಕಾಶ ಮಾಡಿಕೊಟ್ಟಿತು.

ದೇಶದ ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿ ಮತದಾರರ ಪಟ್ಟಿಯನ್ನು ಕಾಲಕಾಲಕ್ಕೆ ಪರಿಷ್ಕರಿಸುವ, ಅದನ್ನು ಸರಿಪಡಿಸುವ ಹೊಣೆಯನ್ನು ಸಂವಿಧಾನವು ಚುನಾವಣಾ ಆಯೋಗಕ್ಕೆ ನೀಡಿದೆ. ಈ ಕೆಲಸವು ಬಹಳ ಸುದೀರ್ಘ ಅವಧಿಗೆ ನಡೆಯುತ್ತದೆಯಾದ ಕಾರಣ, ಇದನ್ನು ಹೇಗೆ ಕಾಲಕಾಲಕ್ಕೆ ಮಾಡಬೇಕೋ ಆ ರೀತಿಯಲ್ಲಿ ಮಾಡುತ್ತಿಲ್ಲ. ಬಿಹಾರದಲ್ಲಿ ಆಗಿರುವಂತೆ, ಕೆಲವು ಸಂದರ್ಭಗಳಲ್ಲಿ ಈ ಕೆಲಸವನ್ನು ಇಪ್ಪತ್ತು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ನಂತರ ನಡೆಸಲಾಗುತ್ತಿದೆ. ಆದರೆ, ಮೃತಪಟ್ಟವರು, ಮನೆ ತೊರೆದು ಬೇರೆಡೆ ಹೋದವರು ಅಥವಾ ಮತದಾರರ ಪಟ್ಟಿಗೆ ಅಕ್ರಮವಾಗಿ ಪ್ರವೇಶ ಪಡೆದವರ ಹೆಸರನ್ನು ತೆಗೆಯಲು ಈ ಪ್ರಕ್ರಿಯೆಯನ್ನು ನಡೆಸಲೇಬೇಕು. ಪ್ರಜಾತಾಂತ್ರಿಕ ಪ್ರಕ್ರಿಯೆಯ ಶುದ್ಧಿಯನ್ನು ಕಾಪಾಡಬೇಕು ಎಂದು ಬಯಸುವುದಾದರೆ, ಈ ಪ್ರಕ್ರಿಯೆ ನಡೆಯಲೇಬೇಕು.

ಹೀಗಿದ್ದರೂ, ಕಾಂಗ್ರೆಸ್ ಪಕ್ಷ ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ), ರಾಷ್ಟ್ರೀಯ ಜನತಾದಳ (ಆರ್‌ಜೆಡಿ), ಡಿಎಂಕೆ ಸೇರಿದಂತೆ ಹಲವು ಪಕ್ಷಗಳು ಎಸ್‌ಐಆರ್ ಪ್ರಕ್ರಿಯೆಯನ್ನು ವಿರೋಧಿಸಿವೆ. 12 ರಾಜ್ಯಗಳಲ್ಲಿ ಎಸ್‌ಐಆರ್ ನಡೆಸುವುದಾಗಿ ಚುನಾವಣಾ ಆಯೋಗವು ಈಚೆಗೆ ಮಾಡಿರುವ ಘೋಷಣೆಯನ್ನೂ ಅವು ವಿರೋಧಿಸಿವೆ. ಎಸ್‌ಐಆರ್ ಪ್ರಕ್ರಿಯೆಗೆ ಈ ಪಕ್ಷಗಳು ಎತ್ತಿರುವ ತಕರಾರುಗಳ ಪೈಕಿ ಒಂದು, ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ಪ್ರಜೆಗಳಲ್ಲದವರ ಹೆಸರನ್ನು ಚುನಾವಣಾ ಆಯೋಗವು ತೆಗೆದುಹಾಕಲಿದೆ ಎಂಬುದಾಗಿದೆ. ಈ ವಾದವನ್ನು ಒಪ್ಪುವುದಾದರೆ, ಸಂವಿಧಾನವು ಚುನಾವಣಾ ಆಯೋಗಕ್ಕೆ ನೀಡಿರುವ ಕೆಲವು ನಿರ್ದಿಷ್ಟ ಅಧಿಕಾರಗಳ ಉಲ್ಲಂಘನೆಯಾಗುತ್ತದೆ. ಅಲ್ಲದೆ, ಭಾರತದ ಪ್ರಜೆಗಳು ಮಾತ್ರವೇ ಅರ್ಹ ಮತದಾರರಾಗಿರುತ್ತಾರೆ ಎಂದು ಹೇಳುವ ಕೆಲವು ಕಾಯ್ದೆಗಳ ಉಲ್ಲಂಘನೆಯೂ ಆಗುತ್ತದೆ. ಅಕ್ರಮ ವಲಸಿಗರು ಹಾಗೂ ಗಡಿಯಾಚೆಯಿಂದ ನುಸುಳುವ ಕೆಲವರಿಗೆ ನಮ್ಮ ಮತದಾರರ ಪಟ್ಟಿಯಲ್ಲಿ ಕಳ್ಳಮಾರ್ಗದಲ್ಲಿ ಸ್ಥಾನ ಪಡೆದು, ದೇಶದ ಏಕತೆ ಹಾಗೂ ಸಮಗ್ರತೆಗೆ ಅಪಾಯ ತಂದೊಡ್ಡಲು ಅವಕಾಶ ಮಾಡಿಕೊಟ್ಟಂತೆಯೂ ಆಗುತ್ತದೆ. ಭಾರತದ ಪ್ರಜೆಗಳಲ್ಲದವರನ್ನು ಮತದಾರರ ಪಟ್ಟಿಯಿಂದ ಹೊರಹಾಕುವುದಕ್ಕೆ ಈ ಪಕ್ಷಗಳು ಏಕೆ ವಿರೋಧ ವ್ಯಕ್ತಪಡಿಸುತ್ತಿವೆ ಎಂಬುದು ನಮ್ಮೆದುರಿನ ಪ್ರಶ್ನೆಯಾಗಿದೆ.

ಇಲ್ಲಿ ಆಡಳಿತದ ಮೇಲೆ ಆಗುವ ಗಂಭೀರ ಪರಿಣಾಮಗಳ ವಿಚಾರವೂ ಇದೆ. ಸಂವಿಧಾನದ ಪ್ರಕಾರ, 25 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವ ಪ್ರತಿ ಮತದಾರ ಕೂಡ ವಿಧಾನಸಭೆ ಅಥವಾ ಲೋಕಸಭೆಯ ಸದಸ್ಯನಾಗಲು ಅರ್ಹತೆ ಪಡೆಯುತ್ತಾನೆ. ಅದರ ಮುಂದುವರಿದ ಭಾಗವಾಗಿ ಆತ ರಾಜ್ಯವೊಂದರ ಮುಖ್ಯಮಂತ್ರಿ ಅಥವಾ ದೇಶದ ಪ್ರಧಾನಿಯಾಗಲು ಅರ್ಹತೆ ಪಡೆಯುತ್ತಾನೆ. ಹೀಗಾಗಿ, ದೇಶದ ಪ್ರಜೆಗಳಲ್ಲದವರು ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆದುಕೊಳ್ಳದಂತೆ ನೋಡಿಕೊಳ್ಳುವ ದೊಡ್ಡ ಹೊಣೆಗಾರಿಕೆಯು ಚುನಾವಣಾ ಆಯೋಗದ ಮೇಲಿದೆ.

ಕೇಂದ್ರ ಚುನಾವಣಾ ಆಯೋಗದ ಅಧಿಕಾರದ ಬಗ್ಗೆ ಸಂವಿಧಾನದಲ್ಲಿ ಸ್ಪಷ್ಟವಾದ ಉಲ್ಲೇಖವಿದೆ. ಚುನಾವಣೆ ಹಾಗೂ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಕೆಲಸದಲ್ಲಿ ಚುನಾವಣಾ ಆಯೋಗಕ್ಕೆ 'ಮೇಲ್ವಿಚಾರಣೆ ನಡೆಸುವ, ನಿರ್ದೇಶನ ನೀಡುವ ಮತ್ತು ನಿಯಂತ್ರಣ ಹೊಂದಿರುವ' ಅಧಿಕಾರವಿದೆ ಎಂದು ಸಂವಿಧಾನದ 324ನೇ ವಿಧಿಯು ಹೇಳುತ್ತದೆ. ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ವಿಚಾರದಲ್ಲಿ ಸಂವಿಧಾನದ 326ನೇ ವಿಧಿಯು, ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆಗೆ ನಡೆಯುವ ಚುನಾವಣೆಯು ವಯಸ್ಕ ಮತಾಧಿಕಾರವನ್ನು ಆಧರಿಸಿರಬೇಕು ಎಂದು ಸಾರುತ್ತದೆ. ಅಂದರೆ, ಭಾರತದ ಪ್ರಜೆಯಾಗಿರುವ ಪ್ರತಿ ವ್ಯಕ್ತಿ, ಆತನಿಗೆ ನಿಗದಿಪಡಿಸಿದ ದಿನಾಂಕಕ್ಕೆ 18 ವರ್ಷ ವಯಸ್ಸಾಗಿದ್ದರೆ, ಸಂವಿಧಾನದ ಪ್ರಕಾರ ಆತ ಅನರ್ಹಗೊಂಡಿಲ್ಲದಿದ್ದರೆ, ಚುನಾವಣೆಯಲ್ಲಿ ಮತದಾರನಾಗಿ ಹೆಸರು ನೋಂದಾಯಿಸಿಕೊಳ್ಳಲು ಅರ್ಹನಾಗಿರುತ್ತಾನೆ.

ಪೌರತ್ವಕ್ಕೆ ಸಂಬಂಧಿಸಿದ ಈ ನಿಯಮವನ್ನು ಪ್ರಜಾಪ್ರಾತಿನಿಧ್ಯ ಕಾಯ್ದೆ–1950ರ ಸೆಕ್ಷನ್ 16ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅಲ್ಲಿ, 'ಭಾರತದ ಪ್ರಜೆ ಅಲ್ಲದ ಯಾವುದೇ ವ್ಯಕ್ತಿಗೆ ಮತದಾರನಾಗಿ ಹೆಸರು ನೋಂದಾಯಿಸಲು ಅರ್ಹತೆ ಇರುವುದಿಲ್ಲ' ಎಂದು ಹೇಳಲಾಗಿದೆ. ಅಂದರೆ, ಸಂವಿಧಾನ ಮತ್ತು ಸಂಸತ್ತು ರೂಪಿಸಿದ ಚುನಾವಣಾ ಕಾಯ್ದೆಯು ಭಾರತದ ಪ್ರಜೆಗಳು ಮಾತ್ರವೇ ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆಯಬಹುದು ಎಂದು ಸ್ಪಷ್ಟವಾಗಿ ಹೇಳುತ್ತವೆ. ಇವನ್ನೆಲ್ಲ ಗಮನಿಸಿದ ನಂತರವೂ, ಈ ವಿಚಾರವಾಗಿ ಚುನಾವಣಾ ಆಯೋಗವು ಮುಂದಡಿ ಇರಿಸಬಾರದು ಎಂದು ಹೇಳುವುದು ತರ್ಕಹೀನವಾಗುತ್ತದೆ. ದೇಶದ ಅತ್ಯಂತ ಹಳೆಯ ರಾಜಕೀಯ ಪಕ್ಷದ ವಕ್ತಾರರು ಕೂಡ ಈ ಸಾಂವಿಧಾನಿಕ, ಕಾನೂನಾತ್ಮಕ ಅಂಶಗಳ ಬಗ್ಗೆ ಅರಿವು ಹೊಂದಿಲ್ಲದಿರುವುದು ಬೇಸರದ ಸಂಗತಿ. ಆ ವಕ್ತಾರರಲ್ಲಿ ಒಬ್ಬರು, 'ಆಧಾರ್ ಕಾರ್ಡ್ ಪೌರತ್ವಕ್ಕೆ ಸಾಕ್ಷ್ಯವಲ್ಲ ಎಂದು ಚುನಾವಣಾ ಆಯೋಗ ಹೇಳಿದೆ. ಆದರೆ ಪೌರತ್ವದ ಬಗ್ಗೆ ಯಾರು ತೀರ್ಮಾನಿಸಬೇಕು? ಅವರು (ಚುನಾವಣಾ ಆಯೋಗದವರು) ಆ ಅಧಿಕಾರ ಹೊಂದಿಲ್ಲ' ಎಂದು ಟ್ವೀಟ್ ಮಾಡಿದ್ದರು. ಹಾಗಾದರೆ, ಸಂವಿಧಾನದ 324 ಹಾಗೂ 326ನೇ ವಿಧಿಗಳನ್ನು ಅಳಿಸಲಾಗಿದೆ ಎಂದು ಅವರು ಹೇಳಬಹುದೇ?

ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಹಾಗೂ ಅದನ್ನು ಪರಿಷ್ಕರಿಸುವ ಅಧಿಕಾರವನ್ನು ಕೂಡ ಚುನಾವಣಾ ಆಯೋಗಕ್ಕೆ ಕಾನೂನು ನೀಡಿದೆ.

ಚುನಾವಣಾ ಆಯೋಗಕ್ಕೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲು ಸ್ಪಷ್ಟವಾಗಿ ಅಧಿಕಾರ ನೀಡುವ ಕಾನೂನು ಇರುವಾಗ, ಈ ಪ್ರಕ್ರಿಯೆಗೆ ವಿರೋಧ ದಾಖಲಿಸಿರುವ ಕೆಲವು ರಾಜಕೀಯ ಪಕ್ಷಗಳ ವಾದವನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ಟಿಎಂಸಿ ಪಕ್ಷದ ಶಾಸಕರೊಬ್ಬರು ಎಸ್‌ಐಆರ್‌ಗೆ ವಿರೋಧ ವ್ಯಕ್ತಪಡಿಸಿದ್ದಾರೆ, ಹಿಂಸೆಯ ಎಚ್ಚರಿಕೆಯನ್ನೂ ನೀಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಅನುಷ್ಠಾನಕ್ಕೆ ತಂದರೆ, ಅಲ್ಲಿನ ಮತದಾರರ ಪಟ್ಟಿಯಿಂದ ಮತದಾರರ ಹೆಸರನ್ನು ತೆಗೆದರೆ ತಾವು ಬಿಜೆಪಿ ನಾಯಕರ ಕಾಲು ಮುರಿಯುವುದಾಗಿ, ಬಿಜೆಪಿ ನಾಯಕರಿಗೆ ಬೆಂಕಿ ಹಚ್ಚುವುದಾಗಿ ಅವರು ಬೆದರಿಕೆ ಒಡ್ಡಿದ್ದಾರೆ. ಆ ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೂ ಮುಖ್ಯ ಚುನಾವಣಾ ಅಧಿಕಾರಿಯ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ; ಎಸ್‌ಐಆರ್ ವಿಚಾರವಾಗಿ ಚುನಾವಣಾ ಆಯೋಗದ ಮೇಲೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಈ ಮೊದಲೇ ಹೇಳಿರುವಂತೆ, ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆಗೆ ವಿರೋಧ ಏಕೆ ಎಂಬುದನ್ನು ವಿವರಿಸಲು ಸಾಧ್ಯವಿಲ್ಲ. ಏಕೆಂದರೆ ಬಹುತೇಕ ರಾಜ್ಯಗಳಲ್ಲಿ ಈ ಪ್ರಕ್ರಿಯೆಯು 20 ವರ್ಷ ಅಥವಾ ಅದಕ್ಕಿಂತ ಹೆಚ್ಚು ಸಮಯದಿಂದ ನಡೆದೇ ಇಲ್ಲ. 2002ರಲ್ಲಿ ಸಿದ್ಧವಾದ ಮತದಾರರ ಪಟ್ಟಿಯಲ್ಲಿ ಇರುವ ಮೃತ ವ್ಯಕ್ತಿಗಳ, ಒಂದೇ ಊರಿನಲ್ಲಿ ಬೇರೆಡೆಗೆ ಅಥವಾ ಬೇರೆ ಪಟ್ಟಣಕ್ಕೆ ಅಥವಾ ಬೇರೊಂದು ರಾಜ್ಯಕ್ಕೆ ವಲಸೆ ಹೋಗಿರುವವರ ಸಂಖ್ಯೆಯನ್ನು ಯಾರಾದರೂ ಊಹೆ ಮಾಡಿಕೊಳ್ಳಬಹುದು. ಸರ್ಕಾರಿ ಉದ್ಯೋಗಗಳಲ್ಲಿ ಇರುವ ಹಲವರು ಕಾಲಕಾಲಕ್ಕೆ ವರ್ಗವಾಗುತ್ತಿರುತ್ತಾರೆ. ನೌಕರಿಯಿಂದ ನಿವೃತ್ತರಾದ ನಂತರ ಸರ್ಕಾರಿ ನಿವಾಸ ತೊರೆದವರ ಸಂಖ್ಯೆಯನ್ನೂ ಊಹಿಸಬಹುದು. ಅಲ್ಲದೆ, ಮತದಾನಕ್ಕೆ ಅರ್ಹತೆ ಪಡೆಯುವಷ್ಟು ವಯಸ್ಸಾಗಿರುವ ಯುವಕರು ಶಿಕ್ಷಣಕ್ಕಾಗಿ ಬೇರೊಂದು ಊರಿಗೆ ತೆರಳಿರುತ್ತಾರೆ. ಇಂತಹ ಎಲ್ಲರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಬೇಕಾಗುತ್ತದೆ. ಈ ಉದ್ದೇಶಕ್ಕೆ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಅಗತ್ಯವಾಗುತ್ತದೆ.

ಇವೆಲ್ಲ ಅಂಶಗಳಷ್ಟೇ ಅಲ್ಲದೆ, ಈ ಮೊದಲೇ ಉಲ್ಲೇಖಿಸಿರುವಂತೆ, ವರ್ಷಗಳಿಂದ ಲಕ್ಷಾಂತರ ಮಂದಿ ಬಾಂಗ್ಲಾದೇಶ ಹಾಗೂ ಮ್ಯಾನ್ಮಾರ್‌ನಿಂದ ಭಾರತಕ್ಕೆ ನುಸುಳಿ ಬಂದಿದ್ದಾರೆ. ಅವರು ಇಲ್ಲಿನ ಮತದಾರರ ಪಟ್ಟಿಯಲ್ಲಿ ಕಳ್ಳಮಾರ್ಗದಿಂದ ಸೇರಿಕೊಂಡಿದ್ದಾರೆ. ಈ ಮೂಲಕ ಅವರು ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಗೆ ಅಪಾಯ ತಂದೊಡ್ಡಿದ್ದಾರೆ. ಅಂಥವರ ಹೆಸರನ್ನು ತೆಗೆಯಬೇಕಾಗುತ್ತದೆ.

ಸಂವಿಧಾನ ಹಾಗೂ ಸಂಸತ್ತು ರೂಪಿಸಿದ ಶಾಸನಗಳು ತನ್ನ ಮೇಲೆ ಹೊರಿಸಿರುವ ಹೊಣೆಯನ್ನು ಚುನಾವಣಾ ಆಯೋಗವು ನಿರ್ವಹಿಸಬೇಕು. ಬೆದರಿಕೆಗಳು, ನಿಂದನೆಗಳಿಗೆ ಅದು ಬಾಗಬಾರದು. ಚುನಾವಣೆಗಳ ಮೇಲೆ ನಿಗಾ ಇರಿಸಲು, ಅವುಗಳಿಗೆ ನಿರ್ದೇಶನ ನೀಡಲು ಹಾಗೂ ಅವುಗಳನ್ನು ನಿಯಂತ್ರಿಸಲು ಚುನಾವಣಾ ಆಯೋಗಕ್ಕೆ ಅಧಿಕಾರ ಇದೆ. ಸಂವಿಧಾನದ 324ನೇ ವಿಧಿಯು ಈ ಅಧಿಕಾರ ನೀಡಿದೆ. ಅದಕ್ಕಿಂತ ಮುಖ್ಯವಾಗಿ, ಮತದಾರರ ಪಟ್ಟಿಯ ವಿಚಾರವಾಗಿ, ದೇಶದ ಪ್ರಜೆಗಳು ಮಾತ್ರವೇ ಮತದಾರರಾಗಬಹುದು ಎಂಬುದನ್ನು ಸಂವಿಧಾನದ 326ನೇ ವಿಧಿ ಹಾಗೂ ಚುನಾವಣಾ ಕಾನೂನುಗಳು ಸ್ಪಷ್ಟವಾಗಿ ಹೇಳುತ್ತವೆ. ಇದಕ್ಕೆ ಬದ್ಧವಾಗಿ ನಡೆದುಕೊಳ್ಳುವ ಹೊಣೆ ಆಯೋಗದ ಮೇಲಿದೆ. ದೇಶದ ಪ್ರಜೆಗಳಲ್ಲದವರು ಮತದಾರರ ಪಟ್ಟಿಯಲ್ಲಿ ತೂರಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು.



ವಾಚಕರ ವಾಣಿ

ಪ್ರಶಸ್ತಿ: ಗಟ್ಟಿಮುಟ್ಟಾಗಿರುವಾಗಲೇ ಗುರ್ತಿಸಿ!

ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೀಣೆ ತಯಾರಕ ಪೆನ್ನ ಓಬಳಯ್ಯನವರು, ರಾಜ್ಯೋತ್ಸವದ ಮರುದಿನವೇ ನಿಧನರಾಗಿದ್ದಾರೆ. ದೊರೆತ ಪ್ರಶಸ್ತಿಯನ್ನು ಆನಂದಿಸುವುದಕ್ಕೆ ಅವರು ನಮ್ಮೊಡನಿಲ್ಲ. ಪ್ರಶಸ್ತಿಯಿಂದ ಪ್ರೋತ್ಸಾಹಿತರಾಗಿ ಮತ್ತಷ್ಟು ಸಾಧನೆ ಮಾಡಲು ಅವರಿಗೆ ವಯಸ್ಸು ಕೂಡ ಇರಲಿಲ್ಲ. ಪ್ರಶಸ್ತಿಗಳಿಂದ ಸಾಧಕರನ್ನು ಗುರುತಿಸುವುದು ಮುಖ್ಯ. ಅದಕ್ಕೂ ಮಿಗಿಲಾಗಿ, ಇನ್ನೂ ತಮ್ಮ ಕಾರ್ಯಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವಷ್ಟರ ಮಟ್ಟಿಗೆ ಗಟ್ಟಿಮುಟ್ಟಾಗಿದ್ದು, ಮತ್ತಷ್ಟು ಸಾಧನೆ ಮಾಡಬಲ್ಲ ಸಾಮರ್ಥ್ಯ ಇರುವಾಗಲೇ ಗುರುತಿಸಿ ಪ್ರೋತ್ಸಾಹಿಸಬೇಕಿದೆ. ಆಗ ಅವರು ಮತ್ತಷ್ಟು ಸಾಧನೆ ಮಾಡಲು ಅನುಕೂಲವಾಗುತ್ತದೆ.

ಜಿ. ಬೈರೇಗೌಡ, ನೆಲಮಂಗಲ

ಕಬ್ಬು ರೈತರ ಅಳಲಿಗೆ ತಕ್ಷಣ ಸ್ಪಂದಿಸಿ

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪೂರ ಕ್ರಾಸ್‌ನಲ್ಲಿ ಕಬ್ಬಿಗೆ ನ್ಯಾಯಯುತ ಬೆಲೆ ನೀಡುವಂತೆ ಆಗ್ರಹಿಸಿ ಸಾವಿರಾರು ರೈತರು ಹೋರಾಟ ನಡೆಸುತ್ತಿದ್ದಾರೆ. ಹೋರಾಟವು ಗಂಭೀರ ಸ್ವರೂಪ ಪಡೆದಿದೆ. ಆದರೆ, ರಾಜ್ಯದ ಆಡಳಿತ ವ್ಯವಸ್ಥೆಯು ರೈತರ ಕೂಗು ಕೇಳಿಸಿಕೊಂಡರೂ ಜಾಣಮೌನ ವಹಿಸಿರುವುದು ಸರಿಯಲ್ಲ. ಸಕ್ಕರೆ ಕಾರ್ಖಾನೆಗಳ ಮಾಲೀಕರು, ರೈತರ ಮನವಿ ಕೇಳದೆ ಮುಗುಮ್ಮಾಗಿರುವುದು ಸರಿಯಾದ ನಡೆಯಲ್ಲ. ಮಹಾರಾಷ್ಟ್ರದಲ್ಲಿ ಈಗಾಗಲೇ ಘೋಷಿಸಿರುವಂತೆ ರಾಜ್ಯದಲ್ಲಿಯೂ ಕಬ್ಬಿಗೆ ನ್ಯಾಯಯುತ ಬೆಲೆಯನ್ನು ತಕ್ಷಣವೇ ಘೋಷಿಸಬೇಕು.

ಬೀರಪ್ಪ ಡಿ. ಡಂಬಳಿ, ಅಥಣಿ

ಆನ್‌ಲೈನ್ ಅಶ್ಲೀಲತೆ: ಲಗಾಮು ಹಾಕಿ

ಅಪ್ರಾಪ್ತರು ಆನ್‌ಲೈನ್‌ನಲ್ಲಿನ ಅಶ್ಲೀಲ ವಿಷಯಗಳ ಸೆಳೆತಕ್ಕೆ ಸಿಗುವುದರಿಂದ ಆಗಬಹುದಾದ ಅಪಾಯ ಗಂಭೀರವಾದುದು ಮತ್ತು ಅದನ್ನು ನಿರ್ಲಕ್ಷಿಸಲಾಗದು. ಇದರ ತಡೆಗೆ ಕೇಂದ್ರ ಸರ್ಕಾರವು ಡಿಜಿಟಲ್ ಸುರಕ್ಷತೆ ನೀತಿ ಮತ್ತು ಜಾಗೃತಿ ಮೂಡಿಸಬೇಕಿದೆ. ಡಿಜಿಟಲ್ ಸಾಕ್ಷರತೆ ಮತ್ತು ಪೋಷಕರ ಸಬಲೀಕರಣ ಮುಖ್ಯ ಅಂಶವಾಗಬೇಕು. ಅಪ್ರಾಪ್ತರು ಬಳಸುವ ಡಿಜಿಟಲ್ ಸಾಧನಗಳಲ್ಲಿ ಕಡ್ಡಾಯವಾಗಿ ವಿಷಯ ಶೋಧಕ ವ್ಯವಸ್ಥೆ ಇರಬೇಕು. ವಯಸ್ಸು ದೃಢೀಕರಿಸುವ ಕೃತಕ ಬುದ್ಧಿಮತ್ತೆ ಆಧಾರಿತ ವ್ಯವಸ್ಥೆ ಹಾಗೂ ಇಂಟರ್‌ನೆಟ್ ಸೇವಾದಾತರ ಸಹಯೋಗದಡಿ ಅಶ್ಲೀಲ ವಿಷಯಗಳ ಪ್ರವೇಶವನ್ನು ತಡೆಹಿಡಿಯಬೇಕು. ಶಾಲಾ ಪಠ್ಯದಲ್ಲಿ ಡಿಜಿಟಲ್ ಶಿಕ್ಷಣವನ್ನು ಸೇರ್ಪಡೆಗೊಳಿಸಬೇಕು. ಮಕ್ಕಳು ಆರೋಗ್ಯಕರ ಮಾಹಿತಿ ಮತ್ತು ಹಾನಿಕಾರಕ ವಿಷಯಗಳ ನಡುವಿನ ವ್ಯತ್ಯಾಸ ಅರಿಯುವಂತೆ ಮಾಡಬೇಕಿದೆ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಹುಲಿ ಉಪಟಳ: ಸೆರೆ ಪರಿಹಾರವಲ್ಲ

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹುಲಿಗಳ ಉಪಟಳ ಹೆಚ್ಚಾಗಿದೆ. ಹುಲಿ ದಾಳಿಗೆ ರೈತರು ಹಾಗೂ ಕೃಷಿ ಕಾರ್ಮಿಕರು ಬಲಿಯಾಗುತ್ತಿದ್ದಾರೆ. ಈ ಒತ್ತಡ ಪರಿಸ್ಥಿತಿ ನಿಭಾಯಿಸುವ ದಿಸೆಯಲ್ಲಿ ಅರಣ್ಯ ಇಲಾಖೆಯು ಹುಲಿ ಸೆರೆ ಹಿಡಿಯುವ ತಾತ್ಕಾಲಿಕ ಪರಿಹಾರದ ಮೊರೆ ಹೋಗಿದೆ. ಈ ನಿಲುವು ಒಂದು ರೀತಿಯಲ್ಲಿ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ. ಹಲವು ವರ್ಷದಿಂದ ಅರಣ್ಯ ಒತ್ತುವರಿ ತೆರವು ನಡೆದಿಲ್ಲ. ಅರಣ್ಯದ ಸುತ್ತಲೂ ವೈಜ್ಞಾನಿಕವಾಗಿ ಕಾಪು ವಲಯವನ್ನು (ಬಫರ್ ಜೋನ್) ಸಂರಕ್ಷಿಸುವ ಕೆಲಸವಾಗಿಲ್ಲ. ಇದು ಕೂಡ ಹುಲಿಗಳ ಉಪಟಳ ಹೆಚ್ಚಳಕ್ಕೆ ಕಾರಣಗಳಲ್ಲಿ ಒಂದಾಗಿದೆ. ಸರ್ಕಾರ ಹುಲಿಗಳ ಸಂಖ್ಯೆ ಹೆಚ್ಚಳಕ್ಕೆ ಪೂರಕವಾದ ಕ್ರಮಕೈಗೊಂಡರೆ ಸಾಲದು. ಅವುಗಳ ಆವಾಸಸ್ಥಳವನ್ನು ಸುಸ್ಥಿರ ನೆಲೆಯಲ್ಲಿ ಅಭಿವೃದ್ಧಿಪಡಿಸಬೇಕು. ಇದಕ್ಕೆ ಮಾದರಿಯಾದ ಸಂರಕ್ಷಣಾ ವ್ಯವಸ್ಥೆಯೊಂದನ್ನು ರೂಪಿಸುವ ತುರ್ತಿದೆ.

ಮಹೇಶ ಪಿ. ಪುಟ್ಟೇಗೌಡನಹುಂಡಿ, ಚಾಮರಾಜನಗರ

ಡಿಜಿಟಲ್ ಸಾಕ್ಷರತೆ ಹೆಚ್ಚುವುದು ಅಗತ್ಯ

'ಡಿಜಿಟಲ್ ಅರೆಸ್ಟ್' ಬಗ್ಗೆ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಇದು ಸಮಾಜದಲ್ಲಿ ನಿರ್ಮಾಣವಾಗುತ್ತಿರುವ ಜ್ವಲಂತ ಆರ್ಥಿಕ ಸಮಸ್ಯೆಗೆ ಹಿಡಿದ ಕನ್ನಡಿ. ಮೋಸ ಹೋದವರಲ್ಲಿ ಬಹುಪಾಲು ಸಂತ್ರಸ್ತರು ಹಿರಿಯ ನಾಗರಿಕರೇ ಆಗಿದ್ದಾರೆ. ಕಷ್ಟಪಟ್ಟು ದುಡಿದ ಹಣವನ್ನು ಮುಪ್ಪಿನ ದಿನಗಳಲ್ಲಿ ಅನುಕೂಲವಾಗಲೆಂದು ಜತನದಿಂದ ಕಾಪಾಡಿಕೊಂಡಿದ್ದನ್ನು ದುರುಳರು ದೋಚಿದಾಗ ಉಂಟಾಗುವ ಆಘಾತ ಊಹಿಸಲೂ ಸಾಧ್ಯವಿಲ್ಲ. ತಂತ್ರಜ್ಞಾನವು ಅಭಿವೃದ್ಧಿಯಾದಂತೆ ಎಲ್ಲರ ಕೈಗೆಟುಕಿದರೆ ಉಂಟಾಗುವ ಅನುಕೂಲಗಳ ಜೊತೆಗೆ ಸೃಷ್ಟಿಯಾಗುವ ಇಂತಹ ಸಮಸ್ಯೆಗಳಿಗೂ ತುರ್ತಾಗಿ ಪರಿಹಾರ ಕಂಡುಕೊಳ್ಳಬೇಕಿದೆ. ಸುರಕ್ಷತಾ ಕ್ರಮಗಳ ಕುರಿತು ಜನರಿಗೆ, ಮುಖ್ಯವಾಗಿ ಹಿರಿಯ ನಾಗರಿಕರಿಗೆ ಡಿಜಿಟಲ್ ಸಾಕ್ಷರತೆ ಮೂಡಿಸಬೇಕಿದೆ. ಈ ದಿಸೆಯಲ್ಲಿ ಸರ್ಕಾರ, ಸಂಘ–ಸಂಸ್ಥೆಗಳಿಂದ ಎಲ್ಲೆಡೆ ಅಭಿಯಾನ ನಡೆಯಬೇಕಿದೆ.

ಆನಂದ ಎನ್.ಎಲ್., ಅಜ್ಜಂಪುರ

ಕೊಂಕು ಹುಡುಕಾಟದಲ್ಲಿ ವಿಪಕ್ಷ ಕಣ್ಮರೆ

ರಾಜ್ಯ ಸರ್ಕಾರದ ಬಳಿ ಹಣ ಇಲ್ಲ. ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ ಎಂದು ಪ್ರತಿದಿನವೂ ವಿರೋಧ ಪಕ್ಷದ ನಾಯಕರು ಆರೋಪಿಸುತ್ತಾರೆ. ಮತ್ತೊಂದೆಡೆ ಸರ್ಕಾರ ಯಾವುದೇ ಅಭಿವೃದ್ಧಿ ಕಾರ್ಯ ಘೋಷಿಸಿದರೂ ಅದಕ್ಕೆ ಅಡ್ಡಗಾಲು ಹಾಕುತ್ತಾರೆ. ಬಹುಮತ ಪಡೆದ ಪಕ್ಷದ ಆಡಳಿತಕ್ಕೆ ತೊಂದರೆ ಕೊಡುವುದು, ಸಮಾಜದಲ್ಲಿ ಧರ್ಮ, ಭಾಷೆ ವಿಷಯಗಳಿಗೆ ಕುಮ್ಮಕ್ಕು ನೀಡಿ ಅಶಾಂತಿ ಸೃಷ್ಟಿಸುವುದು ಮತದಾರರಿಗೆ ಮಾಡುವ ಅವಮಾನವಲ್ಲವೇ? ಸರ್ಕಾರದ ಲೋಪದೋಷವನ್ನು ಬಯಲುಗೊಳಿಸುವುದು ವಿಪಕ್ಷಗಳ ಜವಾಬ್ದಾರಿಯೂ ಹೌದು. ಹಾಗಿದ್ದರೂ, ಅಭಿವೃದ್ಧಿ ಕಾರ್ಯ ಬೆಂಬಲಿಸುವುದು ಜವಾಬ್ದಾರಿಯಲ್ಲವೇ?

ಚಂದ್ರಶೇಖರ ಎಚ್.ಎಸ್., ಬೆಂಗಳೂರು

ಚಾವಡಿ

ಶಿಕ್ಷಣ ನೀತಿ ಎಲ್ಲಿ?

ರಾಜ್ಯ ಶಿಕ್ಷಣ ನೀತಿ ಎಲ್ಲಿ ಹೋಯಿತು? ಯಾಕೆ ಅದನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆಗೊಳಿಸಿಲ್ಲ?



ಮಹಾಬಲೇಶ್ವರ ರಾವ್, ನಿವೃತ್ತ ಪ್ರಾಧ್ಯಾಪಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಬೆಳಗಾವಿ, ಬಾಗಲಕೋಟೆಯಲ್ಲಿ ಕಬ್ಬು ಬೆಳೆಗಾರರು ಕಳೆದ ಐದಾರು ದಿನಗಳಿಂದ ಹೆದ್ದಾರಿ ತಡೆ ನಡೆಸುತ್ತಿದ್ದಾರೆ. ಇದಕ್ಕೆ ಸ್ಪಂದಿಸದ ರಾಜ್ಯ ಸರ್ಕಾರವು, ರೈತ ವಿರೋಧಿ ನಿಲುವು ತಳೆದಿದೆ. ರೈತರನ್ನು ವಿಷ ಕುಡಿದು ಸಾಯುವ ಅಸಹಾಯಕ ಪರಿಸ್ಥಿತಿಗೆ ದೂಡಿದೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 5-11-2000

• ಖ್ಯಾತ ಸಂಗೀತ ನಿರ್ದೇಶಕ ನಾಗೇಂದ್ರ ನಿಧನ

ಬೆಂಗಳೂರು, ನ. 4– 'ಗಂಧದ ಗುಡಿ', 'ಎರಡು ಕನಸು', 'ಹೊಂಬಿಸಿಲು' ಸೇರಿದಂತೆ ಸುಮಾರು 200 ಚಲನಚಿತ್ರಗಳಿಗೆ ಹಿನ್ನೆಲೆ ಸಂಗೀತ ನೀಡಿ ರಸಿಕರ ನಾಲಿಗೆಯ ತುದಿಯಲ್ಲಿಯೇ ಇರುವಂಥ ಹಾಡುಗಳಿಗೆ ರಾಗ ಸಂಯೋಜನೆ ಮಾಡಿದ್ದ ಪ್ರಖ್ಯಾತ ಸಂಗೀತ ನಿರ್ದೇಶಕರಾದ ರಾಜನ್ ನಾಗೇಂದ್ರ ಜೋಡಿಯ ನಾಗೇಂದ್ರ ಇನ್ನಿಲ್ಲ.

ನಗರದ ಬೌರಿಂಗ್ ಆಸ್ಪತ್ರೆಯಲ್ಲಿ ಕಳೆದ ಸುಮಾರು ಒಂದೂವರೆ ತಿಂಗಳಿಂದ ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದ ಅವರು, ಇಂದು ನಿಧನರಾದರು.

• ವಿಶ್ವಬ್ಯಾಂಕ್‌ನಿಂದ 10 ಸಾವಿರ ಕೋಟಿ ರೂಪಾಯಿ ಸಾಲ

ತುಮಕೂರು, ನ. 4– ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗೆ ವಿಶ್ವಬ್ಯಾಂಕ್‌ನಿಂದ ಸುಮಾರು 10 ಸಾವಿರ ಕೋಟಿ ರೂಪಾಯಿ ಸಾಲ ಪಡೆಯಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ತಿಂಗಳ 7ರಂದು ವಿಶ್ವಬ್ಯಾಂಕ್‌ನ ಅಧ್ಯಕ್ಷರು ಬೆಂಗಳೂರಿಗೆ ಆಗಮಿಸಲಿದ್ದು, ಆಗ ಈ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಪ್ರಕಟಿಸಿದರು.

75 ವರ್ಷಗಳ ಹಿಂದೆ

ಭಾನುವಾರ, 5-11-1950

• ಮುಂಬೈ ಬಿಟ್ಟು ಲಂಡನ್ನಿಗೆ ಹೊರಟ ವಿಮಾನ ನಾಪತ್ತೆ

ಗ್ರೆನೋಬಲ್, ನ. 4– ನಾಲ್ಕು ಎಂಜಿನ್‌ಗಳ ಇಂಡಿಯನ್ ಕಾನ್‌ಸ್ಟಲೇಷನ್ ವಿಮಾನವೊಂದು ದಕ್ಷಿಣ ಫ್ರಾನ್ಸಿನ ಪರ್ವತಗಳಲ್ಲಿ ಅಪಘಾತಕ್ಕೊಳಗಾಗಿದೆಯೆಂದು ಊಹಿಸಲಾಗಿದೆ.

ಈ ವಿಮಾನದಲ್ಲಿ ನಲ್ವತ್ತು ಭಾರತೀಯ ನಾವಿಕರೂ, ಎಂಟು ಮಂದಿ ಚಾಲಕ ದಳದವರೂ ಇದ್ದರೆಂದು ಹೇಳಲಾಗಿದೆ.

ಮುಂಬಯಿಯಿಂದ ಲಂಡನ್ನಿಗೆ ಹೋಗುತ್ತಿದ್ದ ಈ ವಿಮಾನವು ಜಿನೀವಾದಲ್ಲಿ ಬರಬೇಕಾಗಿದ್ದ ಕಾಲಕ್ಕೆ ಮೂರು ಗಂಟೆ ತಡವಾದರೂ ಬಂದಿರಲಿಲ್ಲ. ಏರ್ ಇಂಡಿಯಾ ಅಂತರರಾಷ್ಟ್ರೀಯ ವಿಮಾನವು ಮಾರ್ಸೇಲ್ಸ್‌ಗೆ ಈಶಾನ್ಯದಲ್ಲಿ ಮೂವತ್ತು ಮೈಲಿ ದೂರದಲ್ಲಿತ್ತೆಂದು ಕಡೆಯ ವರದಿ ಬಂದಿತ್ತು.

ಚುರುಮುರಿ



ಭ್ರಾತೃ ಭಾಷೆ

• ಮಣ್ಣೆ ರಾಜು

'ನಿಮ್ಮ ನೆರೆಹೊರೆಯವರ ಕಲಬೆರಕೆ ಕನ್ನಡ ಕೇಳಲಾಗ್ತಿಲ್ಲ, ನಾನು ಊರಿಗೆ ಹೋಗಿಬಿಡ್ತೀನಿ...' ಚಟ್ನಿಹಳ್ಳಿ ನಿಂಗತ್ತೆ ಬೇಸರಗೊಂಡರು.

'ನಮ್ಮ ಅಕ್ಕ-ಪಕ್ಕ, ಹಿಂದೆ-ಮುಂದಿನ ಮನೆಗಳಲ್ಲಿ 'ಪಂಜಾಬ ಸಿಂಧು ಗುಜರಾತ ಮರಾಠ ದ್ರಾವಿಡ ಉತ್ಕಲ ವಂಗ...' ಪ್ರದೇಶದವರು ವಾಸಿಸುತ್ತಿದ್ದಾರೆ. ಅವರು ತಮ್ಮ ಭಾಷೆ ಮಿಕ್ಸ್ ಮಾಡಿ ಕನ್ನಡ ಮಾತನಾಡ್ತಾರೆ, ಹಾಗಾಗಿ ನಿಮಗೆ ಅರ್ಥವಾಗೊಲ್ಲ' ಅಂದಳು ಸುಮಿ.

'ಪರಭಾಷಿಗರೊಂದಿಗೆ ನಾವು ಭ್ರಾತೃತ್ವದಿಂದ ಬಾಳ್ತಿದ್ದೀವಿ. ನಮ್ಮ ಮಾತೃಭಾಷೆಗಿಂಥ ಭ್ರಾತೃಭಾಷೆಯ ಪ್ರಭಾವ ಹೆಚ್ಚಾಗಿದೆ' ಶಂಕ್ರಿ ಹೇಳಿದ.

'ಪರಭಾಷೆಗಳ ಪದಗಳು ಕನ್ನಡದಲ್ಲಿ ವಿಲೀನವಾಗಿ ಬೃಹತ್ ಬೆಂಗಳೂರಿನ ಕನ್ನಡ ನಿಘಂಟಿನ ಗಾತ್ರವೂ ಬೃಹತ್ ಆಗ್ತಿದೆ!'

'ಹೀಗಾದರೆ ಶುದ್ಧ ಕನ್ನಡ ಕಾಣೆಯಾಗೋದಿಲ್ವೆ?'

'ಬೋರ್ಡ್‌ಗಳಲ್ಲಿ 60 ಪರ್ಸೆಂಟ್ ಕನ್ನಡ ಅಕ್ಷರವನ್ನು ಸರ್ಕಾರ ಕಡ್ಡಾಯ ಮಾಡಿದೆ'.

'ಬೆಳಿಗ್ಗೆ ತರಕಾರಿ ಅಂಗಡಿಯಲ್ಲಿ ಹೆಂಗಸೊಬ್ಬಳು 'ಒನ್ ಕಿಲೊ ಬ್ರಿಂಜಾಲ್, ಆಫ್ ಕಿಲೋ ಟೊಮೆಟೊ ಕೊಡಿ' ಎಂದು ವ್ಯಾಪಾರ ಮಾಡಿದಳು. ಅವಳ ಮಾತಿನಲ್ಲಿ ಎಷ್ಟು ಪರ್ಸೆಂಟ್ ಕನ್ನಡ ಇದೆ ಕ್ಯಾಲುಕುಲೇಟ್ ಮಾಡು'.

'ಬೆಂಗಳೂರು ಕನ್ನಡವನ್ನು ಕ್ಯಾಲುಕುಲೇಟ್ ಮಾಡಬಾರದು, ಆತಂಕ ಆಗಿಬಿಡುತ್ತದೆ. ಬೆಂಗಳೂರಿನಲ್ಲಿ 35 ಪರ್ಸೆಂಟ್‌ನಷ್ಟಾದರೂ ಕನ್ನಡ ಬಳಕೆಯಾದರೆ ಸಾಕು, ನಮ್ಮ ಕನ್ನಡ ಪಾಸಾಗಿ ಬಿಡುತ್ತದೆ!'

'ಹೌದೌದು. ಕನ್ನಡ ಫೇಲಾಗಬಾರದು. ಸರ್ಕಾರ ಕೃಪಾಂಕ ಕೊಟ್ಟಾದರೂ ಬೆಂಗಳೂರು ಕನ್ನಡವನ್ನು ಪಾಸ್ ಮಾಡಬೇಕು' ಅಂದ ಶಂಕ್ರಿ.

'ಪರಭಾಷಿಗರ ವಿಚಾರ ಬಿಡು. ನಿನ್ನ ಮಕ್ಕಳೇ ಮನೆಯಲ್ಲಿ ಕನ್ನಡ ಮಾತನಾಡ್ತಿಲ್ಲವಲ್ಲೇ ಸುಮಿ' ನಿಂಗತ್ತೆಗೆ ಸಿಟ್ಟು.

'ಮಕ್ಕಳು ಇಂಗ್ಲಿಷ್ ಮೀಡಿಯಂನಲ್ಲಿ ಓದುತ್ತಿದ್ದಾರೆ. ಕನ್ನಡ ಮಾತನಾಡಿಕೊಂಡು ಇಂಗ್ಲಿಷ್ ಕಡೆಗಣಿಸಿದರೆ ಅವರ ಭವಿಷ್ಯಕ್ಕೆ ಧಕ್ಕೆಯಾಗೋದಿಲ್ವೆ ಅತ್ತೆ?' ಅಂದಳು ಸುಮಿ.

'ಬೆಂಗಳೂರಿನ ಸಹವಾಸ ಸಾಕು ನಮ್ಮೂರಿಗೆ ಹೋಗ್ತೀನಿ...' ಸಿಡುಕುತ್ತಾ ನಿಂಗತ್ತೆ ಬ್ಯಾಗ್ ರೆಡಿ ಮಾಡಿಕೊಳ್ಳಲು ಹೊರಟರು.

ಸಂಗತ

ಹಳ್ಳಿ ಹುಡುಗಿಯರಿಗೆ ಕ್ರಿಕೆಟ್ ದುಬಾರಿ

ಕ್ರಿಕೆಟ್ ಆಟಗಾರ್ತಿಯರ ಸಾಧನೆ ಪೋಷಕರಿಗೆ ಹೊಸ ಸಾಧ್ಯತೆ ಕಾಣಿಸಿದೆ. ಈ ಸಾಧ್ಯತೆ 'ಕೆಎಸ್‌ಸಿಎ' ಹಾಗೂ ಖಾಸಗಿ ಕ್ಲಬ್‌ಗಳಿಗೂ ಮನವರಿಕೆ ಆಗಬೇಕಿದೆ.

• ಪ್ರಮೋದ ಕುಲಕರ್ಣಿ

ಭಾರತದ ವನಿತೆಯರು ಚೊಚ್ಚಿಲ ಏಕದಿನ ವಿಶ್ವಕಪ್ ಕ್ರಿಕೆಟ್ ಟ್ರೋಫಿಗೆ ಮುತ್ತಿಕ್ಕಿ ಆನಂದಬಾಷ್ಪ ಸುರಿಸುತ್ತಿದ್ದ ಐತಿಹಾಸಿಕ ಕ್ಷಣಗಳನ್ನು ಟಿ.ವಿ.ಯಲ್ಲಿ ಕಣ್ತುಂಬಿಕೊಳ್ಳುತ್ತಿದ್ದ ಕೋಟ್ಯಂತರ ಜನರ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಹಾಗೆಯೇ, ಅನೇಕ ಪೋಷಕರಲ್ಲಿ ಆಸೆಯೊಂದು ಚಿಗುರಿದ್ದು ಸುಳ್ಳಲ್ಲ.

ಭಾರತದ ಕ್ರಿಕೆಟ್ ಆಟಗಾರ್ತಿಯರು ಅನುಭವಿಸಿದ ಖುಷಿ ಹಾಗೂ ಹೆಮ್ಮೆಯ ಕ್ಷಣಗಳನ್ನು ನಮ್ಮ ಮನೆಯ ಮಗಳು ಮುಂದೊಂದು ದಿನ ಅನುಭವಿಸುವಂತಾಗಲಿ ಎನ್ನುವ ಆಕಾಂಕ್ಷೆ ಒಂದಷ್ಟು ಪೋಷಕರ ಮನಸ್ಸಿನಲ್ಲಿ ಟಿಸಿಲೊಡೆಯುವಂತೆ ಮಾಡಿದೆ. ವಿಶ್ವಕಪ್ ಗೆದ್ದ ಭಾರತ ತಂಡದ ಸಾಧನೆಯ ಭಾವುಕ ಕ್ಷಣಗಳ ದೃಶ್ಯಾವಳಿಗಳನ್ನು ಸಾಮಾಜಿಕ ತಾಣಗಳಲ್ಲಿ ಕಣ್ತುಂಬಿಕೊಂಡ ಹೆಣ್ಣುಮಕ್ಕಳಿಗೂ ಸಾಧನೆಗೆ ಪ್ರೇರಣೆ ಲಭಿಸಿದಂತಾಗಿದೆ.

ಸಾಧನೆಯ ಹಾದಿ ಸುಲಭದ್ದಲ್ಲ. ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗಂತೂ ಮತ್ತಷ್ಟು ಕಠಿಣ ಸವಾಲು. ವೃತ್ತಿಪರ ಕ್ರಿಕೆಟ್ ಆಟಗಾರ್ತಿಯಾಗುವ ಕನಸು ನನಸು ಮಾಡಿಕೊಳ್ಳುವ ಆಸೆ ಈಡೇರಿಸಿಕೊಳ್ಳಲು ರಾಜ್ಯದ ಬಹುತೇಕ ಜಿಲ್ಲೆಗಳ ಹೆಣ್ಣುಮಕ್ಕಳು ಬೆಂಗಳೂರಿನತ್ತ ಮುಖ ಮಾಡಬೇಕಾದ ಅನಿವಾರ್ಯತೆಯಿದೆ.

ಮಹಿಳಾ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿದ್ದ ಕರ್ನಾಟಕದ ರಾಜೇಶ್ವರಿ ಗಾಯಕ್ವಾಡ್, ವೇದಾ ಕೃಷ್ಣಮೂರ್ತಿ, ಶ್ರೇಯಾಂಕ ಪಾಟೀಲ, ವಿ.ಆರ್. ವನಿತಾ– ಹೀಗೆ ಇತ್ತೀಚೆಗಿನ ತಲೆಮಾರಿನ ಕ್ರಿಕೆಟಿಗರು ಆರಂಭದಲ್ಲಿ ತಮ್ಮೂರಿನಲ್ಲಿ ಕ್ರಿಕೆಟ್ ಆಡುವುದನ್ನು ರೂಢಿಸಿಕೊಂಡರೂ, ವೃತ್ತಿಪರ ಕಲಿಕೆಗಾಗಿ ರಾಜಧಾನಿಗೆ ಹೋಗಬೇಕಾಯಿತು. ಒಮ್ಮೆ ಅವಕಾಶದ 'ರೈಲು' ಸಿಕ್ಕ ಬಳಿಕ ಕ್ರಿಕೆಟ್ ವೃತ್ತಿಬದುಕು ಹಳಿಯ ಮಾರ್ಗದಲ್ಲಿ ಸಾಗುತ್ತದೆ. ಆದರೆ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಲಬುರಗಿ, ಹೀಗೆ ಕೆಲ ಕಡೆ ಮಾತ್ರ ಸೀಮಿತ ಚೌಕಟ್ಟಿನಲ್ಲಿ ಹೆಣ್ಣುಮಕ್ಕಳ ತರಬೇತಿಗೆ ಅವಕಾಶಗಳಿವೆ. ಕೊಪ್ಪಳ, ರಾಯಚೂರು, ಯಾದಗಿರಿ, ಗದಗ ಹೀಗೆ ಅನೇಕ ಜಿಲ್ಲೆಗಳ ಹೆಣ್ಣುಮಕ್ಕಳು ನೆರೆಯ ಜಿಲ್ಲೆಗಳು ಅಥವಾ ಬೆಂಗಳೂರಿಗೆ ಹೋಗುವುದು ಅನಿವಾರ್ಯವಾಗುತ್ತಿದೆ.



ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪುರುಷರ ಕ್ರಿಕೆಟ್‌ನಲ್ಲಿ ವಿವಿಧ ವಯೋಮಿತಿಯೊಳಗಿನ ಪಂದ್ಯಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಆಯೋಜಿಸುತ್ತಿದೆ. ಬಹಳಷ್ಟು ಕ್ಲಬ್‌ಗಳು ಇರುವ ಹುಬ್ಬಳ್ಳಿ ಹಾಗೂ ಬೆಳಗಾವಿಯಂಥ ಊರುಗಳಲ್ಲಿ ಪಂದ್ಯಗಳನ್ನು ಆಡಲು ಮಕ್ಕಳಿಗೆ ವೇದಿಕೆ ದೊರೆಯುತ್ತಿದೆ. ಇಂಥ ಪ್ರಯೋಗವನ್ನು ಮಹಿಳಾ ಕ್ರಿಕೆಟ್‌ನಲ್ಲಿಯೂ ಖಾಸಗಿ ಕ್ಲಬ್‌ಗಳು ಹಾಗೂ ಕೆಎಸ್‌ಸಿಎ ನಿಯಮಿತವಾಗಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಮಾಡಿದರೆ ಹೊಸ ಪ್ರತಿಭೆಗಳ ಶೋಧ ಸುಲಭವಾಗುತ್ತದೆ.

ಹನ್ನೊಂದು ಆಟಗಾರ್ತಿಯರ ತಂಡವನ್ನು ಕಟ್ಟಲು ಸಾಧ್ಯವಾಗದೆ ಪುರುಷರ ತಂಡದ ಜೊತೆಗೆ ಮಹಿಳೆ ಕ್ರಿಕೆಟ್ ಆಡಬೇಕಾದ ಅನಿವಾರ್ಯತೆ ಕೆಲವು ಭಾಗದಲ್ಲಿ ನಿರ್ಮಾಣವಾಗಿದೆ. ತರಬೇತಿಗೆ ಬರುವ ಬೆರಳೆಣಿಕೆಯಷ್ಟೇ ಹೆಣ್ಣುಮಕ್ಕಳಿಗೆ ಸ್ಥಳೀಯವಾಗಿ ಪುರುಷರೊಂದಿಗೆ ತರಬೇತಿ ಸಿಕ್ಕರೂ, ನಿರಂತರವಾಗಿ ಪಂದ್ಯಗಳನ್ನು ಆಡಲು ಅವಕಾಶ ಸಿಗುತ್ತಿಲ್ಲ. ಹೀಗಾಗಿ, ಪ್ರತಿಭಾವಂತ ಆಟಗಾರ್ತಿಯರ ಪೂರ್ಣ ಸಾಮರ್ಥ್ಯ ಒರೆಗೆ ಹಚ್ಚಲು ಸಾಧ್ಯವಾಗುತ್ತಿಲ್ಲ.

ಹೆಣ್ಣುಮಕ್ಕಳ ಕ್ರಿಕೆಟ್ ಅಭ್ಯಾಸಕ್ಕಾಗಿ ಕುಟುಂಬ ತೊರೆದು ಬೆಂಗಳೂರಿಗೆ ಹೋಗಲು ಬಡ ಮತ್ತು ಮಧ್ಯಮವರ್ಗದ ಮಕ್ಕಳ ಪೋಷಕರಿಗೆ ಸುಲಭವಲ್ಲ. ಇದರಿಂದಲೂ ಸಾಧನೆಯ ಕನಸು ಕಮರಬಹುದು. ಭವಿಷ್ಯದಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ತಂಡದಲ್ಲಿ ಅವಕಾಶಗಳನ್ನು ಪಡೆದುಕೊಳ್ಳುವುದು ಆಟಗಾರ್ತಿಯ ಸಾಮರ್ಥ್ಯದ ಮೇಲೆ ಅವಲಂಬಿತವಾದರೂ, ಪ್ರಾಥಮಿಕ ಹಂತದ ತರಬೇತಿಯಾದರೂ ಇರುವೆಡೆ ಸಿಗುವಂತಾಗಬೇಕು.

ವಿಶ್ವಕಪ್ ಗೆದ್ದ ತಂಡದ ಆಟಗಾರ್ತಿಯರ ಪಟ್ಟಿ ನೋಡಿದರೆ ರಾಜ್ಯಕ್ಕೆ ಖಂಡಿತವಾಗಿಯೂ ನಿರಾಸೆಯಾಗುತ್ತದೆ. ದೊಡ್ಡ ಕ್ರಿಕೆಟ್ ಸಂಸ್ಥೆ, ನೂರಾರು ಪುರುಷ ಕ್ರಿಕೆಟ್ ಕ್ಲಬ್‌ಗಳನ್ನು ಹೊಂದಿರುವ ಕರ್ನಾಟಕದಲ್ಲಿ ಮಹಿಳೆಯರಿಗೆ ಕ್ರಿಕೆಟ್ ತರಬೇತಿಗೆ ಸೌಲಭ್ಯಗಳ ಕೊರತೆಯಿದೆ.

ಮಹಿಳೆಯರ ಕ್ರಿಕೆಟನ್ನು ಜನ ಈಗಿನಷ್ಟು ಗಂಭೀರವಾಗಿ ಪರಿಗಣಿಸದ ಕಾಲದಲ್ಲಿಯೂ ಶಾಂತಾ ರಂಗಸ್ವಾಮಿ ಅವರು ದೇಶವನ್ನು ಪ್ರತಿನಿಧಿಸಿ ಪ್ರೇರಣೆಯಾದರು. ಇವರ ನಾಯಕತ್ವದಲ್ಲಿ ಭಾರತ 1976ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಪಟ್ನಾದಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಗೆಲುವು ದಾಖಲಿಸಿತ್ತು. ಇದು ಭಾರತ ಮಹಿಳಾ ತಂಡ ಟೆಸ್ಟ್ ಮಾದರಿಯಲ್ಲಿ ಗಳಿಸಿದ ಮೊದಲ ಗೆಲುವು. ಮಹಿಳಾ ತಂಡದ ಪ್ರಥಮ ನಾಯಕಿಯೂ ಆಗಿದ್ದ ಶಾಂತಾ ಅವರು, 'ಭಾರತೀಯ ಕ್ರಿಕೆಟಿಗರ ಸಂಘಟನೆ'ಯ (ಐಸಿಎ) ಅಧ್ಯಕ್ಷೆಯಾಗಿದ್ದಾರೆ. ಈ ಸ್ಥಾನಕ್ಕೆ ಆಯ್ಕೆಯಾದ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಪಡೆದಿದ್ದಾರೆ.

ಶಾಂತಾ ರಂಗಸ್ವಾಮಿ ಸೇರಿದಂತೆ ಅನೇಕರ ಶ್ರಮದಿಂದಾಗಿ ಈಗಿನ ಮಹಿಳಾ ಕ್ರಿಕೆಟ್‌ನಲ್ಲಿ ಜೆಮಿಮಾ ರಾಡ್ರಿಗಸ್, ಹರ್ಮನ್ ಪ್ರೀತ್ ಕೌರ್, ದೀಪ್ತಿ ಶರ್ಮಾ, ಶಫಾಲಿ ವರ್ಮಾ, ಸ್ಮೃತಿ ಮಂದಾನ ತಾರೆಯರಾಗಿ ಹೊಳೆಯುತ್ತಿದ್ದಾರೆ. ಮುಂದೆ ಇಂಥ ತಾರೆಯರ ಪಟ್ಟಿಯಲ್ಲಿ ರಾಜ್ಯದ ಆಟಗಾರ್ತಿಯರೂ ನಿರಂತರವಾಗಿ ಕಾಣಿಸಿಕೊಳ್ಳುವಂತಾಗಲು ಮಹಿಳಾ ಕ್ರಿಕೆಟ್‌ಗೆ ರಾಜ್ಯದ ರಾಜಧಾನಿಯ ಆಚೆಗೂ ಒತ್ತು ಕೊಡಬೇಕಾಗಿದೆ. ಮನೆಯಲ್ಲಿ ಮಧ್ಯರಾತ್ರಿ ಟಿ.ವಿ.ಯಲ್ಲಿ 'ವಿಶ್ವ ವಿಜೇತ ವನಿತೆಯರ' ಸಾಧನೆ ಕಣ್ತುಂಬಿಕೊಂಡ ಪೋಷಕರ ಎದೆಯ ದನಿಗೆ ಕೆಎಸ್‌ಸಿಎ ಹಾಗೂ ಖಾಸಗಿ ಕ್ಲಬ್‌ಗಳು ಕಿವಿಗೊಡಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಛಲಗಾತಿಯರು

• ಗಿರೀಶ ದೊಡ್ಡಮನಿ

'ರೆಕ್ಕೆ ಇದ್ದರೆ ಸಾಕೇ? ಹಕ್ಕಿಗೆ ಬೇಕು ಬಾನು ಬಯಲಲಿ ತೇಲುತ ತಾನು ಮ್ಯಾಲೆ ಹಾರೋಕೆ ಕಾಲೊಂದಿದ್ದರೆ ಸಾಕೇ? ಚಿಗರೆಗೆ ಬೇಕು ಕಾನು ಗಾಳಿಯ ಮೇಲೆ ತಾನು ಜಿಗಿದು ಓಡೋಕೆ...'

'ಚಿನ್ನಾರಿಮುತ್ತ' ಚಿತ್ರದ ಈ ಹಾಡಿಗೆ ದಶಕಗಳೇ ಉರುಳಿವೆ. ಮೊನ್ನೆಯಷ್ಟೇ ವಿಶ್ವಕಪ್ ಜಯಿಸಿದ ಭಾರತ ಮಹಿಳೆಯರ ತಂಡದ ಸಾಧನೆಗೂ ಈ ಹಾಡು ಪ್ರಸ್ತುತವಾಗುತ್ತದೆ. ಪ್ರತಿಭೆ, ಸಾಮರ್ಥ್ಯಗಳಿದ್ದರೂ ಅವಕಾಶಗಳಿಗಾಗಿ ಹೋರಾಟ ಮಾಡುತ್ತ ಬೆಳೆದ ನಾರಿಶಕ್ತಿ ಇದು...



ನವಯುಗ ಸೃಷ್ಟಿಸಿದ ಹರ್ಮನ್

ಭಾರತದ ಪುರುಷರ ತಂಡವು ಈ ಹಿಂದೆ ಗೆದ್ದಿರುವ ವಿಶ್ವಕಪ್ ವಿಜಯಗಳನ್ನು ನೋಡಿದರೆ ಆಲ್‌ರೌಂಡರ್‌ಗಳ ಪಾತ್ರವೇ ಮಹತ್ವದ್ದು. ಅದೇ ರೀತಿ ಮಹಿಳೆಯರ ತಂಡವೂ ಆಲ್‌ರೌಂಡರ್ ಹರ್ಮನ್‌ಪ್ರೀತ್ ಕೌರ್ ನಾಯಕತ್ವದಲ್ಲಿಯೇ ಚೊಚ್ಚಲ ವಿಶ್ವಕಪ್ ಸಾಧನೆ ಮಾಡಿದೆ. ಪಂಜಾಬ್ ರಾಜ್ಯದ ಮೋಗಾ ಪಟ್ಟಣದ ಹರ್ಮನ್ ಸ್ಫೋಟಕ ಬ್ಯಾಟರ್ ವೀರೇಂದ್ರ ಸೆಹ್ವಾಗ್ ಅವರ ಆಟಕ್ಕೆ ಮಾರುಹೋಗಿ ಬ್ಯಾಟ್ ಹಿಡಿದವರು. ಕ್ರೀಡಾಪಟುವಾಗಿದ್ದ ಅಪ್ಪ ಹರಮಂದರ್ ಸಿಂಗ್ ಭುಲ್ಲರ್ ಅವರು ಸ್ಥಳೀಯ ಕೋರ್ಟ್‌ನಲ್ಲಿ ಗುಮಾಸ್ತರಾಗಿದ್ದರು. ತಾಯಿ ಸತ್ವಿಂದರ್ ಕೌರ್ ಮತ್ತು ತಂಗಿ ಹೇಮ್‌ಜೀತ್ ಕೌರ್ ಅವರ ಪ್ರೋತ್ಸಾಹ ಹರ್ಮನ್‌ಗೆ ಸಿಕ್ಕಿತ್ತು.

ಅವರು ಭಾರತ ತಂಡದಲ್ಲಿ ಪದಾರ್ಪಣೆ ಮಾಡಿದ್ದೇ ವಿಶ್ವಕಪ್ ಪಂದ್ಯದ ಮೂಲಕ. 2009ರಲ್ಲಿ ಆಸ್ಟ್ರೇಲಿಯಾದ ಬೋರಾಲ್‌ನಲ್ಲಿ ಪಾಕಿಸ್ತಾನ ಎದುರಿನ ಆ ಪಂದ್ಯದಲ್ಲಿ ಹರ್ಮನ್ ವೃತ್ತಿಜೀವನ ಆರಂಭವಾಯಿತು. ಕಾಲಕ್ರಮೇಣ ಹರ್ಮನ್ ಆಟದಿಂದ ಖ್ಯಾತಿ ಪಡೆದರು. ಅದರಲ್ಲೂ 2017ರಲ್ಲಿ ಅವರು ಸೆಮಿಫೈನಲ್‌ನಲ್ಲಿ ಹೊಡೆದ 171 ರನ್‌ಗಳ ಆಟ 'ಗೇಮ್ ಚೇಂಜರ್' ಆಗಿತ್ತು. ಅಷ್ಟು ಆಕರ್ಷಕ ಮತ್ತು ದಿಟ್ಟ ಬ್ಯಾಟಿಂಗ್ ಅದಾಗಿತ್ತು. ಭಾರತದ ಹುಡುಗಿಯರೂ ಬೀಸಾಟವಾಡಬಲ್ಲರು ಎಂಬುದನ್ನು ತೋರಿಸಿದ್ದರು. ಬಿಗ್ ಬ್ಯಾಷ್ ಲೀಗ್ ಅವರನ್ನು ಕೈಬೀಸಿ ಕರೆಯಿತು. ಅವರ ಛಲವೇ ವಿಶ್ವಕಪ್ ವಿಜಯದ ಐತಿಹಾಸಿಕ ಸಾಧನೆಗೆ ಕಾರಣವಾಗಿದೆ.



ಅಮನ್ಜೋತ್ ಕ್ಯಾಚ್

ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾದ ಬ್ಯಾಟರ್ ಲಾರಾ ವೊಲ್ವಾರ್ಟ್ ಅವರು ಔಟಾಗದೇ ಹೋಗಿದ್ದರೆ ಫಲಿತಾಂಶ ಬೇರೆಯದೇ ಆಗುವ ಸಾಧ್ಯತೆ ಇತ್ತು. ಶತಕ ಬಾರಿಸಿದ್ದ ಲಾರಾ; ದೀಪ್ತಿ ಎಸೆತವನ್ನು ಬೌಂಡರಿಗೆರೆ ದಾಟಿಸುವ ಅವರ ಪ್ರಯತ್ನಕ್ಕೆ ಅಡ್ಡಿಯಾದವರು ಅಮನ್ಜೋತ್ ಕೌರ್. ಅವತ್ತು ಅವರು ಪಡೆದ 'ಜಗ್ಲಿಂಗ್' ಮಾದರಿಯ ಕ್ಯಾಚ್ ಇಡೀ ಪಂದ್ಯಕ್ಕೆ ತಿರುವು ನೀಡಿತು. ಲೀಗ್ ಹಂತದಲ್ಲಿ ಶ್ರೀಲಂಕಾ ಎದುರಿನ ಪಂದ್ಯದಲ್ಲಿ ದೀಪ್ತಿಯೊಂದಿಗೆ ಅವರು ಜೊತೆಯಾಟವಾಡಿ ತಂಡಕ್ಕೆ ಗೆಲುವಿನ ದಾರಿ ತೋರಿಸಿದ್ದರು. ಚಂಡೀಗಡದಲ್ಲಿ ಕಾರ್ಪೆಂಟರ್ ಆಗಿರುವ ಭೂಪಿಂದರ್ ಸಿಂಗ್ ಅವರ ಮಗಳು ಅಮನ್ಜೋತ್. ಬಾಲ್ಯದಲ್ಲಿ ಹಾಕಿ, ಫುಟ್‌ಬಾಲ್ ಮತ್ತು ಹ್ಯಾಂಡ್‌ಬಾಲ್ ಆಟದಲ್ಲಿ ಸಕ್ರಿಯರಾಗಿದ್ದವರು. 15 ವರ್ಷದ ಹುಡುಗಿಯ ಚುರುಕುತನ ಗುರುತಿಸಿದ ನಾಗೇಶ್ ಗುಪ್ತಾ ತಮ್ಮ ಕ್ರಿಕೆಟ್ ಅಕಾಡೆಮಿಗೆ ಸೇರಿಸಿಕೊಂಡರು. ಮಧ್ಯಮವೇಗಿಯಾಗಿದ್ದ ಹುಡುಗಿಯ ಬ್ಯಾಟಿಂಗ್ ಕೌಶಲಕ್ಕೂ ಸಾಣೆ ಹಿಡಿದರು.



ಹರ್ಲೀನ್ ಆಟ

ಚುರುಕಾದ ಫೀಲ್ಡಿಂಗ್‌ಗೆ ಹೆಸರಾಗಿರುವ ಆಟಗಾರ್ತಿ ಹರ್ಲೀನ್ ಡಿಯೊಲ್. ಪಂಜಾಬಿ ಹುಡುಗಿಯ ನೃತ್ಯದ ವಿಡಿಯೊಗಳು ಭಾರಿ ಜನಪ್ರಿಯ. ಮಧ್ಯಮ ಕ್ರಮಾಂಕದಲ್ಲಿ ಬಂದು ತಂಡದ ಮೊತ್ತ ಹೆಚ್ಚಿಸಲು ನೆರವಾಗುತ್ತಾರೆ. ಚಂಡೀಗಡದಲ್ಲಿ ಜನಿಸಿರುವ ಈ ಹುಡುಗಿ ಹಿಮಾಚಲಪ್ರದೇಶ ತಂಡವನ್ನು ಪ್ರತಿನಿಧಿಸುತ್ತಾರೆ.



ರೇಣುಕಾ 'ವೇಗ'

ಟೂರ್ನಿಯಲ್ಲಿ ಅನುಭವಿ ಮಧ್ಯಮವೇಗಿ ರೇಣುಕಾ ಸಿಂಗ್ ಠಾಕೂರ್ ಅವರು ಹೆಚ್ಚು ವಿಕೆಟ್ ಗಳಿಸಲಿಲ್ಲ. ಆದರೆ, ಶಿಸ್ತಿನ ಬೌಲಿಂಗ್ ಮೂಲಕ ಗಮನ ಸೆಳೆದರು. 4.02ರ ಎಕಾನಮಿಯಲ್ಲಿ ಬೌಲಿಂಗ್ ಮಾಡಿದ ಅವರು ಎದುರಾಳಿ ಆರಂಭಿಕ ಬ್ಯಾಟರ್‌ಗಳಿಗೆ ಒತ್ತಡ ಹೇರಿದರು.



ದಿಟ್ಟೆ ಸ್ನೇಹ ರಾಣಾ

ಟೂರ್ನಿಯ ಲೀಗ್ ಹಂತದಲ್ಲಿ ಡೆಹ್ರಾಡೂನ್‌ನ ಸ್ನೇಹ ರಾಣಾ ಅವರ ಕೈಚಳಕವು ಗಮನ ಸೆಳೆದಿತ್ತು. ಮೊದಲ ಮೂರು ಪಂದ್ಯಗಳಲ್ಲಿ ಅವರು ಕೆಳಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದು ಉಪಯುಕ್ತ ಕಾಣಿಕೆ ನೀಡಿದ್ದರು. ಬೌಲಿಂಗ್‌ನಲ್ಲಿಯೂ ಮಿಂಚಿದ್ದರು. ಆದರೆ ಫೈನಲ್ ಹಂತದಲ್ಲಿ ಆಡುವ ಅವಕಾಶ ಅವರಿಗೆ ಸಿಗಲಿಲ್ಲ.



ಛಲಗಾತಿ ದೀಪ್ತಿ

ದೀಪ್ತಿ ಶರ್ಮಾ ಉತ್ತರ ಪ್ರದೇಶದ ಆಗ್ರಾದ, ರೈಲ್ವೆ ಇಲಾಖೆಯ ನಿವೃತ್ತ ಉದ್ಯೋಗಿ ಭಗವಾನ್ ಶರ್ಮಾ ಅವರ ಕೊನೆಯ ಪುತ್ರಿ. ಅಣ್ಣನ ಕ್ರಿಕೆಟ್ ಆಟ ನೋಡುತ್ತ ತಾವೂ ಕ್ರೀಡಾಂಗಣಕ್ಕೆ ಇಳಿದವರು. ಭಾರತ ತಂಡದಲ್ಲಿ ಆಡುತ್ತಿದ್ದ ತಮ್ಮದೇ ರಾಜ್ಯದ ಸುರೇಶ್ ರೈನಾ ಅವರನ್ನೇ ಅನುಕರಿಸಿದರು. ಎಡಗೈ ಬ್ಯಾಟರ್–ಬಲಗೈ ಸ್ಪಿನ್ನರ್ ಆಗಿ ಬೆಳೆದರು.

ವಿಶ್ವಕಪ್ ಟೂರ್ನಿಯಲ್ಲಿ ಶ್ರೀಲಂಕಾ ಎದುರಿನ ಪಂದ್ಯದಲ್ಲಿ 121ಕ್ಕೆ 5 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಅರ್ಧಶತಕ ಹೊಡೆದು ಆಸರೆಯಾದರು. ಅದರಿಂದಾಗಿ ತಂಡವು 269 ರನ್ ಗಳಿಸಿತು. ಇಂಗ್ಲೆಂಡ್ ವಿರುದ್ಧವೂ ನಾಲ್ಕು ವಿಕೆಟ್ ಪಡೆದು, ಅರ್ಧಶತಕ ಗಳಿಸಿದ್ದರು. ಫೈನಲ್‌ನಲ್ಲಿ ಅವರ ಅರ್ಧಶತಕ ಮತ್ತು ಐದು ವಿಕೆಟ್ ಗೊಂಚಲು ಅವಿಸ್ಮರಣೀಯವಾಗಿವೆ.



ರಾಧಾ ನಿಖರತೆ

ಟೂರ್ನಿಯ ಬಹಳಷ್ಟು ಪಂದ್ಯಗಳಲ್ಲಿ ಬದಲೀ ಆಟಗಾರ್ತಿಯಾಗಿ ರಾಧಾ ಯಾದವ್ ಕಣಕ್ಕಿಳಿದರು. ಸಿಕ್ಕ 3 ಪಂದ್ಯಗಳಲ್ಲಿ 4 ವಿಕೆಟ್ ಪಡೆದರು. ಅದರಲ್ಲೂ ಒಂದು ಪಂದ್ಯದಲ್ಲಿ 3 ವಿಕೆಟ್ ಪಡೆದಿದ್ದು ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ.



ಭಾವಿ ಕ್ಯಾಪ್ಟನ್

ಮಹಾರಾಷ್ಟ್ರದ ಸ್ಮೃತಿ ಮಂದಾನ ಅವರೀಗ ಭಾರತ ತಂಡದ ಭಾವಿ ನಾಯಕಿಯೆಂದೇ ಪರಿಗಣಿತರಾಗಿದ್ದಾರೆ. ಆರಂಭಿಕ ಬ್ಯಾಟರ್ ಆಗಿ ತಂಡಕ್ಕೆ ಉತ್ತಮ ಆರಂಭ ನೀಡುವುದರ ಜೊತೆಗೆ ಶಾಂತಚಿತ್ತದ ಮೂಲಕ ತಂಡವನ್ನು ನಿರ್ವಹಿಸುವ ಬಗೆ ಹರ್ಮನ್ ಒತ್ತಡವನ್ನು ಕಡಿಮೆ ಮಾಡಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿಯಾಗಿ ಕಪ್ ಗೆದ್ದಿರುವ ಸ್ಮೃತಿ ಮುಂಬರುವ ಒಲಿಂಪಿಕ್ ಕೂಟದಲ್ಲಿ ಭಾರತ ತಂಡಕ್ಕೆ ಚಿನ್ನದ ಪದಕ ಗೆದ್ದು ಕೊಡುವ ಕನಸು ಕಾಣುತ್ತಿದ್ದಾರೆ.




ಆಂಧ್ರದ ಪ್ರತಿನಿಧಿ

ಆಂಧ್ರಪ್ರದೇಶದ ಕಡಪಾ ಜಿಲ್ಲೆಯಿಂದ ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಮೊದಲ ಆಟಗಾರ್ತಿ ಶ್ರೀ ಚರಣಿ. 20 ವರ್ಷದ ಚರಣಿ ಬ್ಯಾಡ್ಮಿಂಟನ್ ಆಟಗಾರ್ತಿಯಾಗಬೇಕೆಂಬ ಆಸೆ ಅವರ ಅಪ್ಪ ಚಂದ್ರಶೇಖರ್ ರೆಡ್ಡಿ ಅವರದ್ದಾಗಿತ್ತು. ಥರ್ಮಲ್ ವಿದ್ಯುತ್ ಯೋಜನೆಯ ಕಚೇರಿಯಲ್ಲಿ ಚಿಕ್ಕ ಹುದ್ದೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಬಾಲ್ಯದಲ್ಲಿ ಕೊಕ್ಕೊ ಆಡಿಕೊಂಡಿದ್ದ ಚರಣಿ ಅವರು ಸ್ಮೃತಿ ಮಂದಾನ ಮತ್ತು ಯುವರಾಜ್ ಸಿಂಗ್ ಅವರಿಂದ ಪ್ರಭಾವಿತರಾಗಿ ಕ್ರಿಕೆಟ್‌ನತ್ತ ವಾಲಿದರು.




ಜೆಮಿಮಾ 'ಪಾದರಸ'

ಪಾದರಸದಷ್ಟೇ ಚುರುಕಾದ ಹುಡುಗಿ ಜೆಮಿಮಾ ರಾಡ್ರಿಗಸ್. ಗಿಟಾರ್, ಹಾಡು, ನೃತ್ಯದಲ್ಲಿ ಸದಾ ಮುಂದು. ನಗುಮುಖದ ಮುಂಬೈ ಹುಡುಗಿ ಸೆಮಿಫೈನಲ್‌ನಲ್ಲಿ ಹೊಡೆದ ಅಜೇಯ ಶತಕ ಬಹುಕಾಲ ನೆನಪಿನಲ್ಲಿ ಉಳಿಯಲಿದೆ. ಆಸ್ಟ್ರೇಲಿಯಾ ಎದುರಿನ ಆಟವೇ ಭಾರತ ಫೈನಲ್‌ಗೆ ಪ್ರವೇಶಿಸಲು ರಹದಾರಿಯಾಯಿತು.



ಬೌಲಿಂಗ್ 'ಕ್ರಾಂತಿ'

ಮಧ್ಯಪ್ರದೇಶದ ಗುವಾರಾ ಗ್ರಾಮದ ಮುನ್ನಾಸಿಂಗ್ ಅವರ ಕುಟುಂಬದ ಕುಡಿ ಕ್ರಾಂತಿ ಗೌಡ್. ಆದಿವಾಸಿಗಳು ಹೆಚ್ಚಿರುವ ಊರು ಅದು. ಮೂವರು ಅಣ್ಣಂದಿರು ಮತ್ತು ಇಬ್ಬರು ಅಕ್ಕಂದಿರೊಂದಿಗೆ ಬೆಳೆದ ಹುಡುಗಿ. ಆದರೆ ಅವರೆಲ್ಲರಿಗಿಂತ ಭಿನ್ನವಾದ ಕ್ರಾಂತಿಯನ್ನೇ ಮಾಡಿದರು. ಬಡತನ, ಅವಮಾನಗಳನ್ನು ಮೀರಿ ನಿಂತವರು ಕ್ರಾಂತಿ. ಹುಡುಗರೊಂದಿಗೆ ಟೆನಿಸ್ ಬಾಲ್ ಕ್ರಿಕೆಟ್ ಆಡುತ್ತಲೇ ಬೆಳೆದರು. ಈ ಹುಡುಗಿಯು 120–130 ಕಿ.ಮೀ. (ಪ್ರತಿ ಗಂಟೆ) ವೇಗದ ಎಸೆತಗಳನ್ನು ಹಾಕುತ್ತಿದ್ದರು. ಬ್ಯಾಟಿಂಗ್ ಮಾಡುವ ಹುಡುಗರು ಈಕೆಯ ಎಸೆತಗಳನ್ನು ಉಡಾಫೆ ಮಾಡುವಂತೆಯೇ ಇರಲಿಲ್ಲ. ಬರಿಗಾಲಿನಲ್ಲಿ ಓಡಿ ಬಂದು ಚೆಂಡೆಸೆಯುತ್ತಿದ್ದ ಈ ಹುಡುಗಿಯ ಪ್ರತಿಭೆಗೆ ಅಪ್ಪ ಮನಸೋತರು. ತಮ್ಮ ಆರ್ಥಿಕ ಕಷ್ಟ,ನಷ್ಟಗಳ ನಡುವೆಯೂ ಅಕಾಡೆಮಿಗೆ ಸೇರಿಸಿದರು.



ಅರುಂಧತಿ ಪಯಣ

ಮತ್ತೊಬ್ಬ ಮಧ್ಯಮವೇಗಿ ಅರುಂಧತಿ ರೆಡ್ಡಿ ಅವರದ್ದು ತೆಲಂಗಾಣ ರಾಜ್ಯ. ಅವರ ತಾಯಿ ವಾಲಿಬಾಲ್ ಆಟಗಾರ್ತಿಯಾಗಿದ್ದರು. ಆದರೆ ರಾಷ್ಟ್ರ ತಂಡದಲ್ಲಿ ಆಡುವ ಅವರ ಆಸೆ ಕೈಗೂಡಿರಲಿಲ್ಲ. ಮಗಳನ್ನು ರಾಷ್ಟ್ರ ಮಟ್ಟದ ಕ್ರೀಡಾಪಟುವನ್ನಾಗಿಸುವ ಅವರ ಛಲದಿಂದ ಅರುಂಧತಿ ಕ್ರಿಕೆಟ್ ಆಟಗಾರ್ತಿಯಾಗಿ ರೂಪುಗೊಂಡರು.



ಅದೃಷ್ಟದ ಬ್ಯಾಟರ್ ಶಫಾಲಿ

ಹರಿಯಾಣದ ಶಫಾಲಿ ವರ್ಮಾ ಅವರು ಬಾಲ್ಯದಿಂದಲೇ 'ಲೇಡಿ ಸಚಿನ್ ತೆಂಡೂಲ್ಕರ್' ಎಂದೇ ಕರೆಸಿಕೊಂಡವರು. 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ ತಂಡದ ನಾಯಕಿಯಾಗಿದ್ದವರು. ಆಕೆ 'ಲಕ್ಕೀ ಸ್ಟಾರ್' ಕೂಡ. ವಿಶ್ವಕಪ್ ಟೂರ್ನಿಗೆ ಆಯ್ಕೆಯಾದ ತಂಡದಲ್ಲಿ ಅವರು ಇರಲಿಲ್ಲ. ಫಾರ್ಮ್ ಕೊರತೆಯಿಂದ ಸ್ಥಾನ ಕಳೆದುಕೊಂಡಿದ್ದರು. ಆದರೆ ಅದೃಷ್ಟ ಅವರನ್ನು ಹುಡುಕಿಕೊಂಡು ಬಂತು. ಪ್ರತೀಕಾ ರಾವಲ್ ಗಾಯಗೊಂಡಾಗ ಆಯ್ಕೆದಾರರಿಗೆ ನೆನಪಾಗಿದ್ದು ಶಫಾಲಿ. ಸೆಮಿಫೈನಲ್‌ನಲ್ಲಿ ಕಾಲಿಟ್ಟ ಹುಡುಗಿ ಬೇಗ ಔಟಾದರು. ಆಗಲೂ ಕೆಲವರು ಮುಖ ಸಿಂಡರಿಸಿದರು. ಆದರೆ ಫೈನಲ್‌ನಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಮಿಂಚಿದರು. ಪಂದ್ಯದ ಆಟಗಾರ್ತಿ ಗೌರವ ಗಿಟ್ಟಿಸಿದರು.



ಪ್ರತೀಕಾ ಶತಕ

ಸ್ಮೃತಿಯೊಂದಿಗೆ ಉತ್ತಮ ಆರಂಭ ನೀಡಿದ ಪ್ರತೀಕಾ ರಾವಲ್ ಅವರು ವಿಶ್ವಕಪ್‌ನಲ್ಲಿ ತಮ್ಮ ಚೊಚ್ಚಲ ಶತಕ ಕೂಡ ಹೊಡೆದರು. ಆದರೆ ಗಾಯಗೊಂಡು ಫೈನಲ್‌ನಿಂದ ಹೊರಗುಳಿದರು. ಮನಃಶಾಸ್ತ್ರಜ್ಞೆ ಆಗಿರುವ ದೆಹಲಿಯ ಪ್ರತೀಕಾ ಅವರು ಮೊದಲು ಬ್ಯಾಸ್ಕೆಟ್‌ಬಾಲ್ ಆಟಗಾರ್ತಿಯಾಗಿದ್ದವರು. ಅಪ್ಪನ ಆಸೆಗೆ ಸ್ಪಂದಿಸಿ ಕ್ರಿಕೆಟಿಗರಾದರು.



ಫಿನಿಷರ್ ರಿಚಾ

ಪಶ್ಚಿಮ ಬಂಗಾಳದ ಸಿಲಿಗುರಿಯ ರಿಚಾ ಘೋಷ್ ಅವರದ್ದು ಈ ವಿಶ್ವಕಪ್ ಟೂರ್ನಿಯಲ್ಲಿ 'ಫಿನಿಷರ್' ಪಾತ್ರ. ವಿಕೆಟ್‌ಕೀಪಿಂಗ್ ಜೊತೆಗೆ ಏಳು ಅಥವಾ ಎಂಟನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ಲೀಗ್ ಹಂತದ ಒಂದು ಪಂದ್ಯದಲ್ಲಿ 94 ರನ್ ಗಳಿಸಿದರು.



ಉಮಾ ಆಟ

ಅಸ್ಸಾಂ ರಾಜ್ಯದ ಉಮಾ ಚೆಟ್ರಿ ಅವರಿಗೆ ಈ ವಿಶ್ವಕಪ್‌ನಲ್ಲಿ ಆಡಲು ಲಭಿಸಿದ್ದು ಒಂದು ಪಂದ್ಯ ಮಾತ್ರ. ಅಮ್ಮನ ಪ್ರೋತ್ಸಾಹದಿಂದ ಕ್ರಿಕೆಟ್ ಆಟ ಆಯ್ಕೆ ಮಾಡಿಕೊಂಡ ಚೆಟ್ರಿ ಭವಿಷ್ಯದ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದಾರೆ. ಅವರು ತಮ್ಮ ತಾಯಿ, ತಂದೆಯೊಂದಿಗೆ ವಿಶ್ವಕಪ್ ಹಿಡಿದು ನಿಂತ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿವೆ.

ಹೊರುವುದೆಲ್ಲ ಭಾರವಲ್ಲ



ನುಡಿ ಬೆಳಗು

ವಾಸುದೇವ ನಾಡಿಗ್

ಆ ಉಪನ್ಯಾಸಕರು ನಡೆಸಿದ ಪ್ರಯೋಗವೇ ಭಿನ್ನವಾದುದು. ಹರೆಯಕ್ಕೆ ಬಂದ ವಿದ್ಯಾರ್ಥಿಗಳನ್ನು ಸಂಭಾಳಿಸುವುದು ಸುಲಭವಲ್ಲ. ಮಾತಿನ ಮೂಲಕವೇ ಅವರ ಹಂತಕ್ಕೆ ಇಳಿದು ಕಲಿಸಬೇಕಾಗುತ್ತದೆ. ಪಾಠ ಮಾಡುವುದಕ್ಕೆ ಆಯ್ದುಕೊಂಡ ವಿಷಯ ಕೂಡಾ ಭಿನ್ನ. ಅದು 'ಭಾರ'ಕ್ಕೆ ಸಂಬಂಧಪಟ್ಟದ್ದು. ಒಂದು ಲೋಟದ ತುಂಬಾ ನೀರನ್ನು ತುಂಬಿಸಿ ಎಲ್ಲರನ್ನೂ ಉದ್ದೇಶಿಸಿ ಕೇಳಲಾಯಿತು. 'ಈ ಲೋಟ ಎಷ್ಟು ಭಾರ? ನೂರು ಗ್ರಾಂ, ಇನ್ನೂರು ಗ್ರಾಂ?' ಬಗೆಬಗೆಯ ಅಂದಾಜಿನ ಉತ್ತರಗಳು ಬಂದವು. ಕೊನೆಯ ಬೆಂಚಿನಲ್ಲಿ ಕುಳಿತ ವಿದ್ಯಾರ್ಥಿನಿಯೊಬ್ಬಳು ಎದ್ದು 'ಸರ್, ಅದರ ಭಾರ ಅದನ್ನು ಹಿಡಿದುಕೊಂಡವರನ್ನು ಅವಲಂಬಿಸಿದೆ' ಎಂದಳು. ಉಪನ್ಯಾಸಕ ಅವಾಕ್ಕಾದರು. ಅವರು ನಿರೀಕ್ಷೆ ಮಾಡಿದ್ದು ಇದೇ ಉತ್ತರವನ್ನೇ.

ನಿಜ ಅಲ್ಲವೇ? ಆ ಲೋಟವನ್ನು ಸೆಕೆಂಡ್‌ಗಟ್ಟಲೆ ಹಿಡಿದರೆ ಭಾರವೇ ಅಲ್ಲ, ನಿಮಿಷಗಟ್ಟಲೆ ಹಿಡಿದರೆ ತುಸು ಭಾರ ಎನಿಸಲೂಬಹುದು. ಗಂಟೆಗಟ್ಟಲೆ ಹಿಡಿದುಕೊಂಡರೆ ಭುಜ ನೋವು ಬರುತ್ತದೆ. ಹಾಗೇ ಹಿಡಿದೇ ಕೂತರೆ ಭುಜ ಕೈಗಳು ಕಾಯಂ ನೋವಿಗೆ ಒಳಗಾಗುತ್ತವೆ. ಗಹನವಾದ ಮತ್ತು ಚೊಕ್ಕವಾದ ತಾತ್ವಿಕತೆ ಹೀಗೇ ಬಿಚ್ಚಿಕೊಳ್ಳುತ್ತದೆ. ಯಾವುದೂ ಭಾರವಲ್ಲ. ಆದರೆ ಅದನ್ನು ಹೊರುವ ರೀತಿ ಮತ್ತು ಸಮಯ ಆ ಭಾರವನ್ನು ವ್ಯಾಖ್ಯಾನಿಸುತ್ತವೆ.

ಜೀವನವೂ ಹಾಗೇ ನೋಡಿ. ದಾಟುವ ತನಕ ಎಲ್ಲವೂ ಸವಾಲೇ. ಆನಂತರ ಅದೊಂದು ಇನ್ನೊಬ್ಬರಿಗೆ ಹಗುರವಾಗಿ ವಿವರಿಸಬಹುದಾದ ನೀತಿ ಪಾಠವಾಗುತ್ತದೆ. 'ಅವರವರ ಯೋಚನೆಗಳೇ ಅವರವರನ್ನು ನಡೆಸುತ್ತವೆ' ಎಂಬ ಮಾತನ್ನು ಕವಿ ಸು.ರಂ.ಎಕ್ಕುಂಡಿ ಅವರ ಅನೇಕ ಕಥನ ಕವನಗಳು ಸಾರಿ ಸಾರಿ ಹೇಳುತ್ತವೆ. ಬಾಳಿನ ವೈವಿಧ್ಯಕ್ಕೆ ಇಂತಹ ಭಿನ್ನ ಮನಃಸ್ಥಿತಿಗಳೇ ಕಾರಣ. ನೀರು ತುಂಬಿದ ಲೋಟ ಭಾರಕ್ಕೆ ಒಂದು ಸಂಕೇತವಷ್ಟೇ. ಆದನ್ನು ಹೇಗೆ ಪರಿಭಾವಿಸುತ್ತೇವೆ ಎನ್ನುವುದರ ಮೇಲೆ ಬಾಳು ಹಾಸಿಕೊಳ್ಳುತ್ತದೆ.

ಈ ಕಾಲಘಟ್ಟದ ಬಹುದೊಡ್ಡ ಸವಾಲು ಎಂದರೆ, ಭಾವನೆಗಳ ನಿರ್ವಹಣೆ. ಸರಿಯಾದ ನಿರ್ವಹಣೆಯು ಎಂತಹ ಭಾರವನ್ನೂ ಹಗುರ ಮಾಡಬಲ್ಲದು. ಸವಾಲುಗಳಿಗೆ ಅಡೆತಡೆಗಳಿಗೆ ಯಾವ ನೆಲೆಯಲ್ಲಿ ಮತ್ತು ಯಾವ ತೀವ್ರತೆಯಲ್ಲಿ ಎದುರಾಗಬೇಕು ಎಂಬುದೇ ಬಹುದೊಡ್ಡ ಪ್ರಶ್ನೆ. ಭಾರ ಅಲ್ಲವೇ ಅಲ್ಲ ಅಂತ ಅಂದುಕೊಳ್ಳುವುದರಲ್ಲೇ ಮುಕ್ಕಾಲು ಸಮಸ್ಯೆ ಮುಗಿದುಹೋಗಿರುತ್ತದೆ. ಯಾವ ಭಾರವನ್ನು ಎಷ್ಟು ಹೊತ್ತು ಹೊರಬೇಕು ಮತ್ತು ಹೇಗೆ ನಿಭಾಯಿಸಿ ಹೊರಬರಬೇಕು ಎನ್ನುವ ತಾರ್ಕಿಕ ಶಕ್ತಿಯೇ ಆ ಭಾರದ ಪ್ರಮಾಣವನ್ನು ಪತ್ತೆ ಹಚ್ಚಬಲ್ಲದಲ್ಲವೇ?

ಇಡೀ ಕುಟುಂಬವನ್ನು ಅರಗಿನ ಮನೆಯೊಳಗೆ ಕಳಿಸಿ ಸುಟ್ಟು ಹಾಕಲು ಹೊರಟರೂ ಅಲ್ಲೊಂದು ಬಾಗಿಲು ಅವರನ್ನು ಉಳಿಸಿತು. ಎಂತಹ ಭಾರ ನೋಡಿ ಇದು. ಪಲಾಯನ ಹೂಡದೇ ಈ ಭಾರವನ್ನು ನಿಭಾಯಿಸುವ ತಂತ್ರಗಳೇ ಸಾವಿನ ಭಾರವನ್ನೂ ಹಗುರ ಮಾಡಿದ ಕಥೆಯನ್ನು ನಾವೆಲ್ಲ ಓದಿದ್ದೇವೆ.

ಉಪನ್ಯಾಸಕರ ಪ್ರಯೋಗದ ಲೋಟದೊಳಗಿನ ನೀರು ಮತ್ತು ಲೋಟದ ಗಾತ್ರಗಳು ಇಲ್ಲಿ ಲೆಕ್ಕಕ್ಕೇ ಬರುವುದಿಲ್ಲ. ಹಾಗೇ ಈ ಬಾಳು. ನಮ್ಮ ನಮ್ಮ ಮನೋಬಲ ಮತ್ತು ಆತ್ಮವಿಶ್ವಾಸಗಳು ಎಲ್ಲ ಭಾರವನ್ನೂ ಸಲೀಸಾಗಿ ಹೊತ್ತು ದಾಟಬಲ್ಲದು. ಭಾರ ಎನ್ನುವ ಮಾತೇ ಅವರವರ ನೆಪಗಳು. ❖

ಪದಬಂಧ 6214


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜಂಗಮರಿಗೆ ಮಾಡುವ ಆರೋಗಣೆ (3)
2.ಅಂದಣದಲ್ಲಿ ರುವ ಚಲುವು ಕಾಣುತ್ತಿದೆಯೇ? (2)
5.ನಿಮ್ಮ ಈ ಅಂದಾಜು ಸರಿ! (4)
7.ಎವೆಯನ್ನು ಮುಚ್ಚುವುದು (4)
9.ಬೇನೆಗೊಂದು ಪರ್ಯಾಯ ಪದ (2)
10.ಹೊಂದಾಣಿಕೆಯಿಲ್ಲದ ಮಾತು (7)
12.ಪುಸ್ತಕದ ಹಾಳೆ (2)
15.ಈ ತರ ಇಯತ್ತೆ ಕಾಣುತಿದೆ (4)
16.ವಾಯು,ಸಮುದ್ರ,ರೈಲು ಹಾಗೂ ರಸ್ತೆ ಈ ನಾಲ್ಕೂ ಸಾರಿಗೆ ವಿಧಾನಗಳನ್ನು ಹೊಂದಿರುವ ರಾಜ್ಯದ ಏಕೈಕ ನಗರ (4)
17.ಕತ್ತೆತ್ತಿ ನೋಡಿದಾಗ ಗಾರ್ದಭ ಕಾಣಿಸಿತಲ್ಲಾ! (2)
18.ರಾಜ್ಯದಲ್ಲಿ ಉಪ್ಪಿನ ಸತ್ಯಾಗ್ರಹ ಜರುಗಿದ ಸ್ಥಳ (3)

ಮೇಲಿಂದ ಕೆಳಕ್ಕೆ

1.ಈತ ತತ್ವಜ್ಞಾನಿ (4)
3.ನಮ್ಮ ನಾಡ ಹಬ್ಬ (3)
4.ಬೆಟ್ಟದಿಂದ ಹರಿದು ಬರುವ ಪ್ರವಾಹ (2)
6.ಕೊನೆಗೆ ಆರೋಪದಲ್ಲೇ ಈ ಮುಕ್ತಾಯ! (4)
8.ಮುಸಲ್ಮಾನ ದೊರೆ ಇಲ್ಲಿದ್ದಾನೆ (3)
10.ಒಪ್ಪವಾಗಿ ಮೂಡಿರುವ ಪ್ರೀತಿ (4)
11.ಕಡಿದಾದ ಕೊರಕಲು (3)
13.ಮಾಡಿದ ಕೆಲಸಕ್ಕೆ ದೊರೆತ ಲಾಭ (4)
14.ಕರುವಿಗೆ ತೋರಿದ ದಯೆ (3)
16.ಹಿಮ ಇಲ್ಲಿ ಕಾಣುತ್ತಿದೆ (2)



6213ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಿಸಿಲ್ಗುದುರೆ 3.ಪರಾಠ 5.ರಥ
6.ತಿಸ 8.ಪ್ರಭಾತ
9.ಪಟ್ಟಾಭಿಷೇಕ 12.ತರಂಗ
13.ಯತಿ 15.ಇಂಗು
16.ಮಿಸುನಿ 17.ಹರಿನಾಳಿಗೆ

ಮೇಲಿಂದ ಕೆಳಕ್ಕೆ:
1.ಬಿಸಿರಕ್ತ 2.ದುರ್ಗತಿ
4.ತಲಾಂತರ 7.ಸದಭಿಪ್ರಾಯ
8.ಪ್ರತೀಕ 9.ಪರಾಗ
10.ಅಂತರ್ಯಾಮಿ 11.ಲಗುಬಗೆ
14. ತಿಜೋರಿ

ಸುಡೊಕು 6598

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	6				7		1	
8		7	6		4	2		9
	2		3				5	
2	4			1		9		
						6	7	
7	5			9		3	4	
	8							3
			4		8	5		
9		4			2		6	

6597 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ನವೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು **ತಿಥಿ:** ಕಾರ್ತಿಕ ಶುಕ್ಲ ಪೂರ್ಣಿಮಾ ಗಂ. 18-49 **ನಕ್ಷತ್ರ:** ಅಶ್ವಿನಿ ಗಂ 9-40 **ಯೋಗ:** ಸಿದ್ಧಿ (ಆಸ್ರಿಕ್) ಗಂ 11-28 **ಕರಣ:** ವಿಷ್ಟಿ ಗಂ. 8-45 ತುಲಾ ಮಾಸದ 19 ನೇ ದಿನ. **ಮಳೆ ನಕ್ಷತ್ರ:** ಸ್ವಾತಿ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 - 01-30, **ಸೂರ್ಯೋದಯ:** 06-30 **ಸೂರ್ಯಾಸ್ತ:** 05-59, **ಮುಸ್ಲಿಂ ದಿನಾಂಕ:** 13 ಜುಮಾದುಲ್ಲಾವಲ್, **ದಿನ ವಿಶೇಷ:** ಗುರುನಾನಕ್ ಜನ್ಮದಿನ, **ಅದೃಷ್ಟ ಸಂಖ್ಯೆ:** 10, 6

ಮೇಷ: ಎಲ್ಲರೊಂದಿಗೆ ಸಹಕಾರ ಮನೋಭಾವನೆಯಿಂದ ಮತ್ತು ಸರಳತೆಯಿಂದ ಮುಂದುವರಿದಲ್ಲಿ ಯಶಸ್ಸು ಕಂಡುಬರುತ್ತದೆ. ಮಗನ ಯೋಜನೆಗಳು ಕಾರ್ಯಗತಗೊಳ್ಳಲು ಪ್ರಯತ್ನ ಬೇಕು.

ವೃಷಭ: ಗಾರ್ಮೆಂಟ್ಸ್ ಕೆಲಸಗಾರರಿಗೆ ಬಹಳ ದಿನಗಳ ಬಳಿಕ ವೇತನ ಹೆಚ್ಚುವುದರಿಂದ ಸಂತಸ. ಉದ್ಯೋಗ ಬದಲಿಸುವ ವಿಚಾರದಲ್ಲಿ ಯೋಚಿಸಿ. ತುರ್ತುಕಾರ್ಯ ನಿರ್ವಹಣೆ ಮಾಡಬೇಕಾಗಬಹುದು.

ಮಿಥುನ: ರಬ್ಬರ್, ಪ್ಲಾಸ್ಟಿಕ್ ವಸ್ತುಗಳ ತಯಾರಿಕೆಯ ವ್ಯವಹಾರದಲ್ಲಿರುವವರು ಏಳಿಗೆ ಕಾಣುವರು. ಬೆನ್ನು ನೋವು ಹೋಗಲಾಡಿಸಿಕೊಳ್ಳುವ ಸಲುವಾಗಿ ಯೋಗದಲ್ಲಿ ಆಸಕ್ತಿ ಮೂಡಲಿದೆ.

ಕರ್ಕಾಟಕ: ಸರಕು ಸಾಗಾಣೆದಾರರಿಗೆ ಆದಾಯದಲ್ಲಿ ಲಾಭ ಕಂಡುಬಂದರೂ ಕಾರ್ಯ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ.

ಸಿಂಹ: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟುಮಾಡುತ್ತದೆ. ಮಹಿಳೆಯರಿಗೆ ಋಣಾತ್ಮಕ ಚಿಂತನೆ ಆರೋಗ್ಯವನ್ನು ಹಾಳು ಮಾಡುತ್ತದೆ.

ಕನ್ಯಾ: ಪಿತ್ರಾರ್ಜಿತ ಕೃಷಿ ಪ್ರದೇಶ ಅಥವಾ ಗೃಹ ಮಾರಾಟವು ಹಿರಿಯರ ಮನಸ್ಸನ್ನು ನೋಯಿಸಲಿದೆ. ಯೋಗ ಪ್ರಾಣಾಯಾಮಗಳನ್ನು ಅಭ್ಯಾಸ ಮಾಡುವುದರಿಂದ ಚೇತರಿಕೆ ಕಾಣಬಹುದು.

ತುಲಾ: ಮನೆಯಲ್ಲಿ ನಡೆಯಬೇಕಾದ ಮಂಗಳ ಕಾರ್ಯದ ಕುರಿತು ಹಿರಿಯರೊಂದಿಗೆ ಸಮಾಲೋಚನೆ ನಡೆಸುವಿರಿ. ಕುಟುಂಬದ ಅಭಿವೃದ್ಧಿಯಲ್ಲಿ ಅವಿರತ ಪ್ರಯತ್ನ ಫಲಕಾರಿ. ಉದ್ಯೋಗದಲ್ಲಿ ಬದಲಾವಣೆ ಇರಲಿದೆ.

ವೃಶ್ಚಿಕ: ಮೇಲಧಿಕಾರಿಗಳಿಂದ ಅಪೇಕ್ಷಿಸುವ ಸಹಕಾರಗಳು ದೊರೆತಂತೆ ಕಂಡರೂ ಸಂತೃಪ್ತಕರ ರೀತಿಯಲ್ಲಿ ಇರುವುದಿಲ್ಲ. ಮನೆಯಲ್ಲಿ ಸಾಕಿರುವ ದನ ಕರುಗಳ ಆರೋಗ್ಯ ತಪಾಸಣೆ ಮಾಡಿಸಿ.


ಧನು: ಔಷಧಿ, ರಸಗೊಬ್ಬರ ಮತ್ತು ಕೀಟನಾಶಕಗಳಂಥ ರಾಸಾಯನಿಕ ವಸ್ತುಗಳನ್ನು ತಯಾರು ಮಾಡುವವರಿಗೆ ಹೊಸ ಪ್ರಯೋಗ ಉತ್ತಮ ಫಲಿತಾಂಶ ನೀಡಲಿದೆ. ಸಂಸಾರದಲ್ಲಿ ನೆಮ್ಮದಿ ಇರಲಿದೆ.

ಮಕರ: ಸಂದರ್ಶಿಸಲು ಆಗಮಿಸುವ ವ್ಯಕ್ತಿಯ ಬಳಿ ದರ್ಪದಿಂದ ನಡೆದು-ಕೊಳ್ಳುವುದು ಸರಿಯಾದ ವರ್ತನೆಯಲ್ಲ. ಆರೋಗ್ಯಕ್ಕೆ ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ. ಗೋ ಉತ್ಪನ್ನಗಳ ಮಾರಾಟ ಲಾಭದಾಯಕ.


ಕುಂಭ: ಕೃಷಿಗೆ ಸಂಬಂಧಿಸಿದಂತೆ ಕೆಲಸಗಳು ಯಾವುದೇ ಅಡೆತಡೆಗಳಿಲ್ಲದೆ ಸರಿಯಾಗಿ ಮುಂದುವರಿಯುವುದು. ಮಾಧ್ಯಮ ಸಂಸ್ಥೆಯವರಿಗೆ ಉತ್ತಮ ದಿನವಾಗಿ ಪರಿಣಮಿಸಲಿದೆ. ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆ ಇರಲಿದೆ.

ಮೀನ: ಹೂವು-ಹಣ್ಣುಗಳ ಮಾರಾಟಗಾರರಿಗೆ ತಾವು ನಿರೀಕ್ಷಿಸಿದ್ದಕ್ಕಿಂತ ಲಾಭವನ್ನು ವ್ಯಾಪಾರದಲ್ಲಿ ಸಿಗುವುದರಿಂದ ಸಂತೋಷ ಇರುವುದು. ತಾಯಿಯವರ ಆರೋಗ್ಯ ಸುಧಾರಿಸಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ 25,763
ಇಂದಿನ ಅಂತ್ಯ 25,597
ದಿನದ ಕುಸಿತ 25,578
165

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100 ₹600, 12 ₹80
ಮೈಸೂರು 100 ₹600

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಪ್ರ.ಕೆ) ₹325-665
ದ್ವಿತಳಿ (ಪ್ರ.ಕೆ) ₹289-796

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)
ಆರ್‌ಎಸ್‌ಎಸ್-4 ₹181
ಆರ್‌ಎಸ್‌ಎಸ್-5 ₹176
ಗುಡ್ ಲಾಟ್ ₹163

ಮುದ್ದೆಮನೆ ಕಾಫಿ (50 ಕೆ.ಜಿ)
ಎಪಿ ₹29000
ಎಸಿ ₹15400
ಆರ್‌ಪಿ ₹19200
ಆರ್‌ಸಿ ₹11100

ಷೇರುಪೇಟೆ ಸೂಚ್ಯಂಕಗಳ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರದ ವಹಿವಾಟಿನಲ್ಲಿ ಕುಸಿತ ಕಂಡವು.


ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 519 ಅಂಶ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 165 ಅಂಶ ಇಳಿಕೆ ಕಂಡಿವೆ.

ಲೋಹ, ಐ.ಟಿ., ಯುಟಿಲಿಟಿ ವಲಯದ ಷೇರುಗಳನ್ನು ಹೂಡಿಕೆದಾರರು ಲಾಭ ಗಳಿಕೆ ಉದ್ದೇಶದಿಂದ ಮಾರಾಟ ಮಾಡಿದ್ದುದು ಹಾಗೂ ವಿದೇಶಿ ಹೂಡಿಕೆಯ ಹೊರಹರಿವು ಈ ಇಳಿಕೆಗೆ ಕಾರಣಗಳು ಎಂದು ವರ್ತಕರು ತಿಳಿಸಿದ್ದಾರೆ. ಗುರುನಾನಕ್ ಜಯಂತಿ ಕಾರಣಕ್ಕೆ ಷೇರುಪೇಟೆಗಳಿಗೆ ಬುಧವಾರ ರಜೆ ಇರಲಿದೆ.

'ಪ್ರಮುಖ ವಲಯಗಳಲ್ಲಿ ಲಾಭ ಗಳಿಕೆಯ ವಹಿವಾಟು ನಡೆಯಿತು. ಇದು ಇಡೀ ಷೇರುಪೇಟೆಯ ಮೇಲೆ ಪರಿಣಾಮ ಬೀರಿತು' ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಅವರು ಹೇಳಿದ್ದಾರೆ.

ಅಡಿಕೆ ಧಾರಣೆ

ಬಂಟ್ವಾಳ	
ಕೋಕ	18000-23000
ಹೊಸತು	29600-52000
ಹಳತು	49600-53500
ಚಿತ್ರದುರ್ಗ	
ಅಪಿ	58619-59029
ಬೆಟ್ಟೆ	34649-35099
ಕೆಂಪುಗೋಟು	30600-31000
ರಾಶಿ	58139-58569
ಕುಮಟ	
ಚಾಲಿ	41000-48199
ಚಿಪ್ಪು	26109-34289
ಕೋಕ	12009-32009
ಫ್ಯಾಕ್ಟರಿ	4599-23829
ಹಳೆಚಾಲಿ	43969-46556
ಪುತ್ತೂರು	
ಕೋಕ	20000-31500
ಹೊಸತು	26000-37000
ಸಾಗರ	
ಬಿಳಿಗೋಟು	23700-34066
ಚಾಲಿ	41299-42175
ಕೆಂಪುಗೋಟು	30199-30199
ರಾಶಿ	50009-53909
ಸಿಪ್ಪೆಗೋಟು	23175-23785
ಸಿದ್ದಾಪುರ	
ಬಿಳಿಗೋಟು	27119-36000
ಚಾಲಿ	41869-48599
ಕೋಕ	21399-31219
ಕೆಂಪುಗೋಟು	29199-33111
ರಾಶಿ	44899-57099
ತಟ್ಟಿಬೆಟ್ಟೆ	37199-54299
ಶಿವಮೊಗ್ಗ	
ಬೆಟ್ಟೆ	56100-76009
ಗೊರಬಲು	19000-43869
ಹೊಸತು	44669-58869
ರಾಶಿ	44669-63001
ಸರಕು	60007-91896
ಶಿರಸಿ	
ಬೆಟ್ಟೆ	41608-54099
ಚಾಲಿ	43219-49518
ಬಿಳಿಗೋಟು	27611-38799
ಕೆಂಪುಗೋಟು	26819-31099
ರಾಶಿ	53518-59699
ಯಲ್ಲಾಪುರ	
ಅಪಿ	73299-77799
ಬಿಳಿಗೋಟು	16909-38900
ಚಾಲಿ	39009-49699
ಕೋಕ	13000-29299
ಕೆಂಪುಗೋಟು	18899-38799
ರಾಶಿ	52119-64869
ತಟ್ಟಿಬೆಟ್ಟೆ	37609-50800



ಪಿಎಲ್‌ಐ 3ನೇ ಸುತ್ತು ಶುರು

ಹೂಡಿಕೆ ಇನ್ನಷ್ಟು ಆಕರ್ಷಿಸುವುದು ಕೇಂದ್ರದ ಉದ್ದೇಶ

ನವದೆಹಲಿ (ಪಿಟಿಐ): ವಿಶೇಷ ಬಳಕೆ ಉದ್ದೇಶದ ಉಕ್ಕು ತಯಾರಿಕಾ ವಲಯದಲ್ಲಿ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಮೂರನೆಯ ಸುತ್ತಿನ ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯನ್ನು ಮಂಗಳವಾರ ಆರಂಭಿಸಿದೆ.

ದೇಶಿ ಉತ್ಪಾದನೆ ಹೆಚ್ಚಿಸುವುದು ಹಾಗೂ ಆಮದನ್ನು ತಗ್ಗಿಸುವುದು ಕೂಡ ಪಿಎಲ್‌ಐ ಯೋಜನೆಯ ಉದ್ದೇಶಗಳಲ್ಲಿ ಒಂದಾಗಿದೆ. ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಈ ಯೋಜನೆಗೆ ಚಾಲನೆ ನೀಡಿದರು.

ರಕ್ಷಣೆ, ವೈಮಾಂತರಿಕ್ಷ, ಇಂಧನ, ವಾಹನ ಮತ್ತು ಮೂಲಸೌಕರ್ಯ ವಲಯಗಳಲ್ಲಿ ಬಳಕೆ ಮಾಡುವ 'ವಿಶೇಷ ಬಳಕೆ ಉದ್ದೇಶದ ಉಕ್ಕು' ತಯಾರಿಕೆ ವಲಯಕ್ಕೆ ಸಂಬಂಧಿಸಿದ ಪಿಎಲ್‌ಐ ಯೋಜನೆಗೆ ಕೇಂದ್ರ ಸಚಿವ ಸಂಪುಟವು 2021ರ ಜುಲೈನಲ್ಲಿ ಒಪ್ಪಿಗೆ ನೀಡಿತ್ತು. ಇದಕ್ಕೆ ₹6,322 ಕೋಟಿ ಅನುದಾನ ನಿಗದಿ ಮಾಡಲಾಗಿತ್ತು.


ಕುಮಾರಸ್ವಾಮಿ

ಈ ಯೋಜನೆಯು ಮೊದಲ ಎರಡು ಸುತ್ತುಗಳಲ್ಲಿ 'ಇದುವರೆಗೆ ₹43,874 ಕೋಟಿ ಹೂಡಿಕೆಯನ್ನು ಆಕರ್ಷಿಸಿದೆ. ಈ ಪೈಕಿ ₹22,973 ಕೋಟಿ ಈಗಾಗಲೇ ಹೂಡಿಕೆ ಆಗಿದೆ. ಅಲ್ಲದೆ, ಮೊದಲ ಎರಡು ಸುತ್ತುಗಳ ಮೂಲಕ 13 ಸಾವಿರಕ್ಕೂ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಿದೆ.

'ಮೊದಲ ಎರಡು ಸುತ್ತುಗಳಲ್ಲಿ ದೊರೆತ ಸ್ಪಂದನೆಯು ಉತ್ತೇಜನಕಾರಿಯಾಗಿದೆ. ಆ ಯಶಸ್ಸು ಸುಧಾರಣೆ ಆಧಾರಿತ ಹಾಗೂ ಕೈಗಾರಿಕೆಗಳಿಗೆ ಅಗತ್ಯವಿರುವ ನೀತಿಗಳ ಶಕ್ತಿಯನ್ನು ಹೇಳುತ್ತಿದೆ' ಎಂದು ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

'ಈ ಯೋಜನೆಯ ಮೂಲಕ ನಾವು ಭಾರತದಲ್ಲಿ ಉಕ್ಕು ತಯಾರಿಕೆ ಮಾಡುವುದಕ್ಕೆ ಮಾತ್ರ ಗಮನ ನೀಡುತ್ತಿಲ್ಲ. ಬದಲಿಗೆ, ಭಾರತದಿಂದ ಜಗತ್ತಿಗೆ ಉಕ್ಕು ಪೂರೈಕೆ ಮಾಡುವ ವ್ಯಾಪಕ ಆಲೋಚನೆ ಹೊಂದಿದ್ದೇವೆ' ಎಂದು ಹೇಳಿದ್ದಾರೆ.

ಯೋಜನೆಯ ಮೂರನೆಯ ಸುತ್ತು ಹೊಸ ಉದ್ದಿಮೆಗಳಿಗೆ ಹಾಗೂ ಈಗಾಗಲೇ ಇರುವ ಉದ್ದಿಮೆಗಳಿಗೆ ಹೊಸ ಅವಕಾಶಗಳನ್ನು ತೆರೆಯುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸುಡಾನ್: ಕದನ ವಿರಾಮಕ್ಕೆ ಆಗ್ರಹ

ದುಬೈ (ಎಪಿ): ಸುಡಾನ್‌ನಲ್ಲಿನ ಆಂತರಿಕ ಸಂಘರ್ಷ ಶಮನಗೊಳಿಸಲು ತಕ್ಷಣವೇ ಕದನ ವಿರಾಮ ಜಾರಿಗೊಳಿಸಿ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಮಂಗಳವಾರ ಆಗ್ರಹಿಸಿದ್ದಾರೆ.

ಎಲ್ ಫಾಶರ್‌ನ ಡಾರ್ಫರ್ ನಗರವನ್ನು ಅರೆಸೈನಿಕ ಪಡೆಗಳು ವಶಪಡಿಸಿಕೊಂಡ ಬೆನ್ನಿಗೆ, 'ಸುಡಾನ್‌ನಲ್ಲಿನ ಆಂತರಿಕ ಸಂಘರ್ಷವು ಯಾರ ನಿಯಂತ್ರಣಕ್ಕೂ ಸಿಗದಾಗಿದೆ' ಎಂದಿದ್ದಾರೆ. ಕತಾರ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಶೃಂಗಸಭೆಯಲ್ಲಿ ಮಾತನಾಡಿದ ಗುಟೆರೆಸ್, 'ಗಂಭೀರ ಎಚ್ಚರಿಕೆ ನೀಡಿದ್ದರೂ ಎಲ್ ಫಾಶರ್ ವಶಪಡಿಸಿಕೊಂಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುಡಾನ್‌ನಲ್ಲಿನ ಆಂತರಿಕ ಸಂಘರ್ಷವು ಎರಡು ವರ್ಷದಿಂದಲೂ ಜಗತ್ತಿನ ಮಾನವೀಯ ಬಿಕ್ಕಟ್ಟುಗಳಲ್ಲಿ ಒಂದಾಗಿದೆ. ಈ ಸಂಘರ್ಷದಲ್ಲಿ ಅಪಾರ ಸಂಖ್ಯೆಯ ನಾಗರಿಕರು ಸಿಲುಕಿಕೊಂಡಿದ್ದು, ತುರ್ತಾಗಿ ಕದನ ವಿರಾಮ ಒಪ್ಪಂದ ಏರ್ಪಡಬೇಕು ಎಂದು ಹೇಳಿದ್ದಾರೆ.

ಎಸ್‌ಬಿಐ ಲಾಭ ಶೇ 10ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಬ್ಯಾಂಕಿಂಗ್ ಕಂಪನಿಯಾದ ಎಸ್‌ಬಿಐ ಸೆಪ್ಟೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇಕಡ 10ರಷ್ಟು ಹೆಚ್ಚಳ ದಾಖಲಿಸಿದೆ. ಈ ತ್ರೈಮಾಸಿಕದಲ್ಲಿ ಎಸ್‌ಬಿಐ ಲಾಭವು ₹20,160 ಕೋಟಿ ಆಗಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಲಾಭವು ₹18,331 ಕೋಟಿ ಆಗಿತ್ತು. ಬ್ಯಾಂಕ್‌ನ ಒಟ್ಟು ವರಮಾನವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1.34 ಲಕ್ಷ ಕೋಟಿಗೆ ಹೆಚ್ಚಾಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹1.29 ಲಕ್ಷ ಕೋಟಿ ಆಗಿತ್ತು.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಎನ್‌ಪಿಎ ಪ್ರಮಾಣದಲ್ಲಿ ಸುಧಾರಣೆ ಕಂಡುಬಂದಿದ್ದು, ಅದು ಶೇಕಡ 1.73ಕ್ಕೆ ಇಳಿಕೆ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಅನುತ್ಪಾದಕ ಸಾಲಗಳ ಪ್ರಮಾಣವು ಶೇ 2.13ರಷ್ಟು ಇತ್ತು.ನಿವ್ವಳ ಎನ್‌ಪಿಎ ಪ್ರಮಾಣವು ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 0.53ರಷ್ಟು ಇದ್ದಿದ್ದು ಈ ಬಾರಿ ಶೇ 0.42ಕ್ಕೆ ಇಳಿಕೆಯಾಗಿದೆ.

ವೇದಂ ಗಡಿಪಾರಿಗೆ ಕೋರ್ಟ್ ತಡೆ

ಒಂದನೇ ಪುಟದಿಂದ...

ವಲಸೆ ಅಧಿಕಾರಿಗಳು ಆ ಪ್ರಕರಣದಲ್ಲಿ ಅವರನ್ನು ಗಡಿಪಾರು ಮಾಡಲು ಪ್ರಯತ್ನಿಸುತ್ತಿದ್ದಾರೆ.

'ವೇದಂ ಅವರು ತಮ್ಮದಲ್ಲದ ತಪ್ಪಿಗೆ ನಾಲ್ಕು ದಶಕಗಳನ್ನು ಜೈಲಿನಲ್ಲಿ ಕಳೆದಿದ್ದಾರೆ. ಜೈಲಿನಲ್ಲಿದ್ದುಕೊಂಡೇ ವ್ಯಾಸಂಗ ಮುಂದುವರಿಸಿ ಹಲವು ಪದವಿಗಳನ್ನು ಗಳಿಸಿದ್ದಾರೆ. ಸಹ ಕೈದಿಗಳಿಗೆ ಬೋಧನೆಯನ್ನೂ ಮಾಡಿದ್ದಾರೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ, ಅವರ ಮೇಲಿನ ಮಾದಕವಸ್ತು ಸಾಗಾಟ ಪ್ರಕರಣವನ್ನು ಕೈಬಿಡಬೇಕು' ಎಂದು ವೇದಂ ಪರ ವಕೀಲರು ವಾದಿಸಿದ್ದಾರೆ.

'ಕೊಲೆ ಪ್ರಕರಣದಲ್ಲಿ ಆರೋಪ ಸಾಬೀತಾಗಿಲ್ಲ ಎಂಬ ಕಾರಣಕ್ಕೆ, ಮಾದಕವಸ್ತು ಸಾಗಾಟದ ಪ್ರಕರಣವನ್ನು ಕೈಬಿಡಲು ಸಾಧ್ಯವಿಲ್ಲ' ಎಂದು ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆಯ ವಕ್ತಾರರು ಸೋಮವಾರ ಹೇಳಿದ್ದಾರೆ.

ಪ್ರಶ್ನೋತ್ತರ


ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

• **ಯಲ್ಲಪ್ಪ** ಬಳ್ಳಾರಿ

ಪ್ರಶ್ನೆ: ನಾನು ಸರ್ಕಾರಿ ನೌಕರ. ನನ್ನ ವಾರ್ಷಿಕ ಆದಾಯ ₹4 ಲಕ್ಷ, ವಯಸ್ಸು 26 ವರ್ಷ. ನಾನು ಇತ್ತೀಚೆಗೆ ಪಾಲಿಸಿ ಬಜಾರ್ ಆ್ಯಪ್‌ನಲ್ಲಿ ಎಕ್ಸಿಸ್ ಮ್ಯಾಕ್ಸ್ ಲೈಫ್ ಇನ್ವೆಸ್ಟ್‌ಮೆಂಟ್ ಪ್ಲ್ಯಾನ್ ಕ್ಯಾಪಿಟಲ್ ಗ್ಯಾರಂಟಿ ಸ್ಕೀಮ್‌ನಲ್ಲಿ ₹5,000 ಹೂಡಿಕೆ ಮಾಡಿದ್ದೇನೆ. ಐದು ವರ್ಷದವರೆಗೆ ಹೂಡಿಕೆ ಮಾಡಿದ್ದೇನೆ. ಈ ಹೂಡಿಕೆ ಯೋಜನೆ ಸರಿಯಾಗಿದೆಯೇ ಹಾಗೂ ನಾನು ಮಾಡಿದ ಹೂಡಿಕೆಯು ಲಾಭ ಕೊಡುವುದೇ?

ಉತ್ತರ: ಪ್ರತಿ ಹೂಡಿಕೆಗೂ ಅದರದ್ದೇ ಆದ ಗುಣ, ಲಕ್ಷಣಗಳಿರುತ್ತವೆ. ಇಲ್ಲಿ ಹೂಡಿಕೆ ಯಾವ ಸಂಸ್ಥೆಯದ್ದು ಎಂಬುದು ಮುಖ್ಯವಲ್ಲ, ಬದಲಾಗಿ ಹೂಡಿಕೆದಾರರಿಗೆ ಸಿಗುವ ಲಾಭ ಹಾಗೂ ದೀರ್ಘಾವಧಿ ಪ್ರಯೋಜನಗಳು ಮುಖ್ಯ. ಆದರೆ ನೀವು ಮೇಲೆ ಉಲ್ಲೇಖಿಸಿರುವ ಹೂಡಿಕೆ, ಕ್ಯಾಪಿಟಲ್ ಗ್ಯಾರಂಟಿ ಸ್ಕೀಮ್ ಎಂಬುದಾಗಿ ತಿಳಿಸಿದ್ದೀರಿ. ಇಂತಹ ಯೋಜನೆಗಳು, ಮಾರುಕಟ್ಟೆಯಲ್ಲಿ ವಿಮೆ ಮತ್ತು ಹೂಡಿಕೆಗಳನ್ನು ಒಟ್ಟಿಗೆ ಸೇರಿಸಿ ಪರಿಚಯಿಸುವ ಉತ್ಪನ್ನಗಳಾಗಿವೆ. ಇಲ್ಲಿ ನೀವು ಮುಂದಿನ ಕೆಲವು ವರ್ಷಗಳ ಕಾಲ ನಿರಂತರ ಹೂಡಿಕೆ ಮಾಡುತ್ತೀರಿ. ಸಹಜ ಸ್ಥಿತಿಯಲ್ಲಿ, ನಿಮ್ಮ ಅಷ್ಟು ವರ್ಷಗಳ ಮೂಲಧನಕ್ಕೆ ಸುರಕ್ಷತೆ ಇದ್ದಾಗ ಮಾತ್ರ ಯಾವುದೇ ವಿಮಾ ಹೂಡಿಕೆದಾರ ಆಕರ್ಷಿತನಾಗಿ ಅದನ್ನು ಒಪ್ಪಿಕೊಳ್ಳಲು ಸಾಧ್ಯ. ಇಲ್ಲವಾದರೆ, ಇದೂ ಕೂಡಾ ನೇರ ಷೇರು ಮಾರುಕಟ್ಟೆಯ ವ್ಯವಹಾರದಂತಾಗಿ ಲಾಭ-ನಷ್ಟದಲ್ಲಿ ವ್ಯವಹರಿಸುವ ಯೋಜನೆಯಾಗುತ್ತದೆ.

ಸಾಮಾನ್ಯವಾಗಿ ಇಂತಹ ವಿಮಾ ಯೋಜನೆಗಳು ವಿಮಾದಾರರಿಗೆ, ಅವರ ಹೂಡಿಕೆ ಮೊತ್ತದ ವೃದ್ಧಿಯ ಉದ್ದೇಶಕ್ಕಿಂತ ಅವರು ಅಥವಾ ಅವರ ಕುಟುಂಬ ಸದಸ್ಯ ದುರ್ದೈವವಶಾತ್ ಮರಣ ಹೊಂದಿದರೆ, ಅದಕ್ಕೆ ಪ್ರತಿಯಾಗಿ ಪೂರ್ವ ನಿರ್ಧರಿತ ಮೊತ್ತ ತಮ್ಮ ಕುಟುಂಬ ಸದಸ್ಯರಿಗೆ ಸಿಗುತ್ತದೆ ಎಂಬುದು ನಿರೀಕ್ಷೆ ಇರುತ್ತದೆ. ಒಂದು ವೇಳೆ ಯಾವುದೇ ಸಮಸ್ಯೆ ಇರದೆ, ವಿಮಾ ಅವಧಿ ಮುಗಿದೊಡನೆ, ಹೂಡಿಕೆ ಮಾಡಿದ ಹಣದೊಡನೆ, ಆಯಾ ಯೋಜನೆಯ ನಿಯಮಾವಳಿಗೆ ಸಂಬಂಧಿಸಿ ಒಂದಷ್ಟು ಲಾಭಾಂಶ ಅಥವಾ ಬೋನಸ್ ಕೂಡಾ ಸಿಗಬೇಕಾದುದು ಸಹಜ. ಇದು ಸಾಮಾನ್ಯ ಯೋಜನೆಯಲ್ಲಿ ನಿಮ್ಮ ವಾರ್ಷಿಕ ವಿಮಾ ನಿರ್ವಹಣೆ ವೆಚ್ಚ ಇತ್ಯಾದಿ ಕಳೆದುಳಿದ ಲಾಭದ ಮೊತ್ತ. ಇದಕ್ಕೆ ಪರ್ಯಾಯವಾಗಿ, ನೀವು ನಿಮ್ಮ ಹಣವನ್ನು ಯಾವುದೇ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಯೋಜನೆಗಳಲ್ಲಿ ವಿನಿಯೋಗಿಸಿದ್ದರೆ, ಅವಧಿ ಮುಗಿದೊಡನೆ ಆ ಸಮಯದ ಮಾರುಕಟ್ಟೆ ಮೌಲ್ಯದ ಮೇಲಿನ ಲಾಭವನ್ನೂ ನೀಡಲಾಗುತ್ತದೆ. ಇದು ನಿಮ್ಮ ಮೂಲ ವಾರ್ಷಿಕ ವಿಮಾ ಮೊತ್ತವಲ್ಲದೆ, ಹೆಚ್ಚುವರಿ ಲಾಭವಾಗಿರುತ್ತದೆ. ಈ ಅವಧಿಯಲ್ಲಿ ನಿಮಗೆ ಸಿಗುವ ವಿಮಾ ಭದ್ರತೆಗೆ ಸಂಬಂಧಿಸಿ, ಅಗತ್ಯ ವೆಚ್ಚಗಳನ್ನೂ ಅದರಲ್ಲೇ ಸರಿದೂಗಿಸಲಾಗುತ್ತದೆ.

ನಿಮ್ಮ ವಿಚಾರದಲ್ಲೂ ಈ ಎರಡು ವಿಚಾರಗಳನ್ನು ಗಮನದಲ್ಲಿಟ್ಟು ಹೂಡಿಕೆಯ ಪರಾಮರ್ಶೆ ಅಗತ್ಯ. ನಿಮ್ಮ ಮೂಲ ಉದ್ದೇಶ ಜೀವ ವಿಮೆಯಾಗಿದ್ದು, ನಿಮ್ಮ ಅಸಲು ಭದ್ರವಾಗಿದ್ದರೆ ಹಾಗೂ ಬರುವ ಲಾಭ ಎಷ್ಟಿದ್ದರೂ ಸಾಕೆಂದಾದರೆ (ಶೇ 4-6 ಲಾಭ) ಅದು ಮೂಲತಃ ವಿಮಾ ಹೂಡಿಕೆ. ಅದರ ಬದಲು, ನೀವು ಇತರ ಮಾರುಕಟ್ಟೆ ಹೂಡಿಕೆ ಲಾಭಕ್ಕೆ (ಮ್ಯೂಚುವ ಫಂಡ್, ಈಕ್ವಿಟಿ ವಿಭಾಗದ ಹೂಡಿಕೆ) ಈ ಯೋಜನೆಯಲ್ಲಿ ಸಿಗುವ ಮೊತ್ತವನ್ನು ತುಲನೆ ಮಾಡಿ ನೋಡುವುದಾದರೆ, ನಿಮ್ಮ ಉದ್ದೇಶ ವಿಮಾ ಸೌಲಭ್ಯ ಪಡೆಯುವುದಕ್ಕಿಂತ ಲಾಭ ವೃದ್ಧಿಸುವುದೇ ಆಗಿರುತ್ತದೆ.

ಹೀಗಾಗಿ, ನೀವು ನೀಡಿದ ಮಾಹಿತಿಯಂತೆ ಇದು ಅಸಲು ಭದ್ರತೆ ಇರುವ ಯೋಜನೆ ಎಂದು ಗೊತ್ತಾಗುತ್ತದೆ. ಸಮತೋಲಿತ ಲಾಭ ಹಾಗೂ ಜೀವ ವಿಮಾ ಭದ್ರತೆ ಎರಡೂ ಇರುವ ಯೋಜನೆ ಎಂದು ಮೇಲ್ನೋಟಕ್ಕೆ ತಿಳಿಯುತ್ತದೆ. ಈ ಮಾಹಿತಿಯನ್ನು ನೀವು ನಿಮ್ಮ ಪಾಲಿಸಿ ಬಾಂಡ್ ಮೂಲಕ ಕೂಡಾ ತಿಳಿಯಬಹುದು ಅಥವಾ ಆಯಾ ಗ್ರಾಹಕ ಕೇಂದ್ರವನ್ನು ಸಂಪರ್ಕಿಸಿ ತಿಳಿಯಬಹುದು. ಇನ್ನು ಭವಿಷ್ಯದ ಲಾಭದ ಬಗ್ಗೆ, ಈ ಸ್ಕೀಂ ಆಯಾ ಸಮಯದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧಾರವಾಗುತ್ತದೆ. ಹೀಗಾಗಿ ನಿಮ್ಮ ನಿರ್ಧಾರ ಸರಿ ಅಥವಾ ತಪ್ಪು ಎನ್ನುವ ವಿಚಾರಕ್ಕಿಂತ, ಮೇಲಿನ ಮಾಹಿತಿಯಂತೆ, ನಿಮ್ಮ ಉದ್ದೇಶ ಏನೆಂಬುದರ ಮೇಲೆ ನಿಮ್ಮ ಹೂಡಿಕೆಯ ಗುಣಮಟ್ಟ ನಿರ್ಧಾರವಾಗುತ್ತದೆ.

• **ರಾಘವೇಂದ್ರ,** ಕೊಡಗು

ಪ್ರಶ್ನೆ: ನಾನು ವಿದೇಶಿ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಬೇಕೆಂದಿದ್ದೇನೆ. ಅದಕ್ಕೆ ಖಾತೆ ತೆರೆಯುವುದು, ವಿದೇಶಿ ಕರೆನ್ಸಿಯಲ್ಲಿ ಹಣ ವರ್ಗಾಯಿಸುವುದು, ಹಣ ವರ್ಗಾವಣೆ ವೆಚ್ಚ ಇತ್ಯಾದಿ ಅಗತ್ಯ ಇರುವುದರಿಂದ ಈಗ ಸುಲಭವಾಗಿ ಭಾರತದಲ್ಲೇ ಇರುವ ಮ್ಯೂಚುವಲ್ ಫಂಡ್ ಸಂಸ್ಥೆಗಳಲ್ಲಿ ಹೂಡಿಕೆ ಮಾಡಿ ಲಾಭಗಳಿಸಬಹುದೆಂದು ನನ್ನ ಯೋಚನೆ. ಈ ತೀರ್ಮಾನ ಉತ್ತಮವೇ?

ಉತ್ತರ: ವಿದೇಶಿ ಕಂಪನಿಗಳಲ್ಲಿ ನೇರ ಹೂಡಿಕೆ ಮಾಡಲು ಹಣವನ್ನು ವಿದೇಶಕ್ಕೆ ಕಳುಹಿಸುವುದು, ಟ್ರೇಡಿಂಗ್ ಖಾತೆ ತೆರೆಯುವುದು, ವಿದೇಶಿ ಕರೆನ್ಸಿ ಪರಿವರ್ತನೆ ಮುಂತಾದ ಪೂರ್ವತಯಾರಿಗಳು ಬೇಕಾಗುತ್ತವೆ. ಇದರಲ್ಲಿ ಬ್ಯಾಂಕ್ ಶುಲ್ಕ ಮತ್ತು ತೆರಿಗೆ ಸಂಬಂಧಿತ ವಿಚಾರಗಳೂ ಇವೆ. ಇವೆಲ್ಲಕ್ಕಿಂತ ಮುಖ್ಯವಾಗಿ, ನೇರವಾಗಿ ಹೂಡಿಕೆ ಮಾಡಿದರೆ, ಕಂಪನಿಗಳನ್ನು ಆಯ್ಕೆ ಮಾಡುವುದು, ಅವುಗಳ ಆರ್ಥಿಕ ವರದಿ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯ ಆಳವಾದ ಸಮೀಕ್ಷೆ ಮಾಡಿ ಹೂಡಿಕೆ ಮಾಡುವ ಜವಾಬ್ದಾರಿ ಹೂಡಿಕೆದಾರನ ಮೇಲಿರುತ್ತದೆ.

ಇದರ ಬದಲು ಭಾರತದಲ್ಲೇ ಲಭ್ಯವಿರುವ ಅಂತರರಾಷ್ಟ್ರೀಯ ಮ್ಯೂಚುವಲ್ ಫಂಡ್‌ಗಳು ಅಥವಾ ಇಂಡೆಕ್ಸ್ ಫಂಡ್‌ಗಳಲ್ಲಿ (ಉದಾ: ನಾಸ್ಡಾಕ್ 100, ಎಸ್&ಪಿ 500 ಇತ್ಯಾದಿ ಇಂಡೆಕ್ಸ್ ಫಂಡ್‌ಗಳು) ಹೂಡಿಕೆ ಮಾಡಿದರೆ, ವಿದೇಶಿ ಮಾರುಕಟ್ಟೆಗಳ ಲಾಭವನ್ನು ಸುಲಭವಾಗಿ ಪಡೆಯಬಹುದು. ಇದರಿಂದ ವಿದೇಶಿ ಷೇರುಪತ್ರಗಳ ವೈವಿಧ್ಯತೆ, ಪರಿಣಿತ ತಜ್ಞರ ನಿರ್ವಹಣೆಯ ಪ್ರಯೋಜನ ದಕ್ಕುತ್ತದೆ. ವಿದೇಶಿ ಹಣಕಾಸು ವ್ಯವಹಾರದ ವೆಚ್ಚ ಇರುವುದಿಲ್ಲ ಮತ್ತು ಹೂಡಿಕೆ ಪ್ರಕ್ರಿಯೆ ಸರಳವಾಗಿರುತ್ತದೆ. ಇದು ಸಾಮಾನ್ಯ ಮ್ಯೂಚುವಲ್ ಫಂಡ್‌ಗಳಂತೆ ಇರುತ್ತದೆ. ಆದ್ದರಿಂದ ಪ್ರಾರಂಭಿಕ ಹೂಡಿಕೆದಾರರಿಗೆ ಇಂತಹ ಮ್ಯೂಚುವಲ್ ಫಂಡ್‌ಗಳು ಅನುಕೂಲಕರ ಆಯ್ಕೆಯಾಗುತ್ತವೆ. ವಿದೇಶಿ ಮಾರುಕಟ್ಟೆಯ ಹಾಗೂ ಆಯಾ ಫಂಡ್‌ಗಳು ಮಾಡುವ ಹೂಡಿಕೆ ನಿರ್ಣಯ, ಅಥವಾ ಆಯಾ ಇಂಡೆಕ್ಸ್ ಗಳಿಕೆಯ ಮೇಲೆ ನಿಮ್ಮ ಲಾಭ ನಿರ್ಧಾರ ಆಗುತ್ತದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

'ಬ್ಯಾಂಕ್ ಖಾಸಗೀಕರಣದಿಂದ ಧಕ್ಕೆ ಇಲ್ಲ'

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಖಾಸಗೀಕರಣದಿಂದ ಹಣಕಾಸಿನ ಒಳಗೊಳ್ಳುವಿಕೆಯ ಉದ್ದೇಶಕ್ಕೆ ಮತ್ತು ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆ ಆಗುತ್ತದೆ ಎಂಬ ಆತಂಕದಲ್ಲಿ ಹುರುಳಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಗಳವಾರ ಹೇಳಿದರು.

1969ರಲ್ಲಿ ನಡೆದ ಬ್ಯಾಂಕ್‌ಗಳ ರಾಷ್ಟ್ರೀಕರಣ ಪ್ರಕ್ರಿಯೆಯು ಹಣಕಾಸಿನ ಒಳಗೊಳ್ಳುವಿಕೆಯ ವಿಚಾರದಲ್ಲಿ ಅಪೇಕ್ಷಿತ ಫಲಿತಾಂಶವನ್ನು ನೀಡಿಲ್ಲ ಎಂದು ಅವರು ಹೇಳಿದರು.

ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ರಾಷ್ಟ್ರೀಕರಣದಿಂದಾಗಿ ಆದ್ಯತಾ ವಲಯಗಳಿಗೆ ಸಾಲ ನೀಡುವ ವಿಚಾರದಲ್ಲಿ, ಸರ್ಕಾರದ ಯೋಜನೆಗಳ ವಿಚಾರದಲ್ಲಿ ಅನುಕೂಲ ಆಗಿದ್ದು ನಿಜ. ಆದರೆ ಸರ್ಕಾರದ ನಿಯಂತ್ರಣದ ಕಾರಣದಿಂದಾಗಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ವೃತ್ತಿಪರತೆಯನ್ನು ಕಳೆದುಕೊಂಡವು' ಎಂದು ಹೇಳಿದರು.

'ನಾವು ಬ್ಯಾಂಕ್‌ಗಳನ್ನು ವೃತ್ತಿಪರವಾಗಿಸಿದ ನಂತರದಲ್ಲಿ' ರಾಷ್ಟ್ರೀಕರಣದ ಉದ್ದೇಶಗಳು 'ಬಹಳ ಚೆಂದವಾಗಿ ಅನುಷ್ಠಾನಗೊಳ್ಳುತ್ತಿವೆ' ಎಂದು ನಿರ್ಮಲಾ ವಿವರಿಸಿದರು. 'ಬ್ಯಾಂಕ್‌ಗಳನ್ನು ವೃತ್ತಿಪರವಾಗಿಸಲು ಯತ್ನಿಸಿದಾಗ, ಅಥವಾ ಅವುಗಳ ಖಾಸಗೀಕರಣದ ಉದ್ದೇಶ ಹೊಂದಿದಾಗ, ಬ್ಯಾಂಕ್‌ಗಳನ್ನು ಎಲ್ಲರಿಗೂ ತೆರೆದುಕೊಳ್ಳುವಂತೆ ಮಾಡುವ ಉದ್ದೇಶವು ಸೋಲುತ್ತದೆ ಎಂಬ ಗ್ರಹಿಕೆ ತಪ್ಪು' ಎಂದು ವಿವರಿಸಿದರು.


ನಿರ್ಮಲಾ

ಬ್ಯಾಂಕ್‌ಗಳು ವೃತ್ತಿಪರವಾಗಿ ನಡೆಯಲು ಅವಕಾಶ ಕಲ್ಪಿಸಿದಾಗ, ಬ್ಯಾಂಕ್‌ಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ಅಲ್ಲಿನ ಆಡಳಿತ ಮಂಡಳಿಗಳೇ ತೆಗೆದುಕೊಂಡಾಗ, ರಾಷ್ಟ್ರೀಯ ಹಿತಾಸಕ್ತಿ ಹಾಗೂ ಬ್ಯಾಂಕಿನ ಹಿತಾಸಕ್ತಿಗಳು ಈಡೇರುತ್ತವೆ ಎಂದು ಹೇಳಿದರು.

ಬ್ಯಾಂಕ್ ಖಾಸಗೀಕರಣದ ಭಾಗವಾಗಿ ಕೇಂದ್ರ ಸರ್ಕಾರವು ಐಡಿಬಿಐ ಬ್ಯಾಂಕ್‌ನ ಶೇ 51ರಷ್ಟು ಷೇರುಗಳನ್ನು ಭಾರತೀಯ ಜೀವ ವಿಮಾ ನಿಗಮಕ್ಕೆ (ಎಲ್‌ಐಸಿ) 2019ರಲ್ಲಿ ಮಾರಾಟ ಮಾಡಿದೆ.

ಗೋಪಿಚಂದ್ ಹಿಂದುಜಾ ನಿಧನ


ಲಂಡನ್ (ಪಿಟಿಐ): ಬ್ರಿಟನ್ನಿನ ಅತ್ಯಂತ ಶ್ರೀಮಂತ ಕುಟುಂಬದ ಮುಖ್ಯಸ್ಥ ಗೋಪಿಚಂದ್ ಪಿ. ಹಿಂದುಜಾ (85) ಅವರು ಲಂಡನ್ನಿನಲ್ಲಿ ನಿಧನರಾದರು.

ಗೋಪಿಚಂದ್ ಅವರನ್ನು ಬೊಫೋರ್ಸ್ ಹಗರಣದಲ್ಲಿ ಅವರ ಇಬ್ಬರು ಸಹೋದರರೊಂದಿಗೆ ಆರೋಪಿಯನ್ನಾಗಿ ಹೆಸರಿಸಲಾಗಿತ್ತು. ಆದರೆ 2005ರಲ್ಲಿ ದೆಹಲಿ ಹೈಕೋರ್ಟ್ ಈ ಮೂವರನ್ನೂ ದೋಷಮುಕ್ತಗೊಳಿಸಿದೆ.

ಗೋಪಿಚಂದ್ ಅವರು ಕಳೆದ ಕೆಲವು ವಾರಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದರು ಎಂದು ಅವರ ಕುಟುಂಬದ ಆಪ್ತ ಮೂಲಗಳು ತಿಳಿಸಿವೆ.

1940ರಲ್ಲಿ ಜನಿಸಿದ ಗೋಪಿಚಂದ್ ಅವರು ಹಿಂದುಜಾ ಸಮೂಹವನ್ನು ಜಾಗತಿಕ ಮಟ್ಟದಲ್ಲಿ ಬೆಳೆಸಿದ ನಾಲ್ವರು ಸಹೋದರರ ಪೈಕಿ ಎರಡನೆಯವರು. ಸಮೂಹವು ಆಟೊಮೊಬೈಲ್, ಇಂಧನ, ಬ್ಯಾಂಕಿಂಗ್ ಮತ್ತು ಮೂಲಸೌಕರ್ಯ ವಲಯಗಳಲ್ಲಿ ವಹಿವಾಟು ಹೊಂದಿದೆ.

2023ರಲ್ಲಿ ಶ್ರೀಚಂದ್ ಹಿಂದುಜಾ ಅವರ ನಿಧನದ ನಂತರ ಗೋಪಿಚಂದ್ ಅವರು ಸಮೂಹದ ನೇತೃತ್ವ ವಹಿಸಿಕೊಂಡಿದ್ದರು. ಗೋಪಿಚಂದ್ ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಮಗಳು ಇದ್ದಾರೆ.



ಗೋಪಿಚಂದ್ ಅವರ ನಾಯಕತ್ವದಲ್ಲಿ ಹಿಂದುಜಾ ಸಮೂಹವು 1984ರಲ್ಲಿ ಗಲ್ಫ್ ಆಯಿಲ್ ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿತು. ಹಿಂದುಜಾ ಸಮೂಹವು 1987ರಲ್ಲಿ ಅಶೋಕ್ ಲೇಲ್ಯಾಂಡ್ ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿತು.

ಗುರುನಾನಕ್ ಜಯಂತಿ: ಪಾಕ್‌ಗೆ ಭೇಟಿ ನೀಡಿದ 2,100 ಭಾರತೀಯರು

ಲಾಹೋರ್ (ಪಿಟಿಐ): ಗುರುನಾನಕ್ ದೇವ್ ಅವರ 556ನೇ ಜಯಂತಿಯ ಅಂಗವಾಗಿ ನಡೆಯಲಿರುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಕ್ಕಾಗಿ 2,100 ಮಂದಿ ಭಾರತೀಯ ಸಿಖ್ಖರು ಮಂಗಳವಾರ ವಾಘಾ ಗಡಿಯ ಮಾರ್ಗವಾಗಿ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಾರೆ.

ಪಾಕಿಸ್ತಾನ ಸಿಖ್ ಗುರುದ್ವಾರ ಪರಬಂಧಕ್ ಸಮಿತಿಯ ಅಧ್ಯಕ್ಷ ಹಾಗೂ ಪಂಜಾಬ್ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಸರ್ದಾರ್ ರಮೇಶ್ ಸಿಂಗ್ ಅರೋರಾ, ಎವಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್ (ಇಟಿಪಿಬಿ) ಮುಖ್ಯಸ್ಥ ಸಾಜಿದ್ ಮೊಹಮ್ಮದ್ ಚೌಹಾಣ್, ಹೆಚ್ಚುವರಿ ಕಾರ್ಯದರ್ಶಿ ನಾಸಿಕ್ ಮುಷ್ತಾಕ್ ಅವರು ಭಾರತೀಯ ಸಿಖ್ಖರನ್ನು ವಾಘಾ ಗಡಿಯಲ್ಲಿ ಸ್ವಾಗತಿಸಿದ್ದಾರೆ.

ಭಾರತೀಯ ಸಿಖ್ಖರ ಪೈಕಿ ಅಕಾಲ್ ತಖ್ತ್ ನಾಯಕ ಜಾನಿ ಕುಲದೀಪ್ ಸಿಂಗ್ ಗರ್ಗಾಜ್, ಬೀಬಿ ಗುರೀಂದರ್ ಕೌರ್ ನೇತೃತ್ವದ ಶಿರೋಮಣಿ ಗುರುದ್ವಾರ ಪರಬಂಧಕ್ ಸಮಿತಿ ನಿಯೋಗ ಹಾಗೂ ದೆಹಲಿ ಗುರುದ್ವಾರ ನಿರ್ವಹಣಾ ಸಮಿತಿಯ ರವೀಂದರ್ ಸಿಂಗ್ ಸ್ವೀಟಾ ಅವರೂ ಇದ್ದಾರೆ ಎಂದು ಇಟಿಪಿಬಿ ವಕ್ತಾರ ಗುಲಾಮ್ ಮೊಹಿಯುದ್ದೀನ್ ಅವರು ಮಾಹಿತಿ ನೀಡಿದ್ದಾರೆ.

ರೈಲು ಅಪಘಾತ 8 ಸಾವು

ಒಂದನೇ ಪುಟದಿಂದ...

ಅಪಘಾತದ ಕುರಿತು ರೈಲ್ವೆ ಸುರಕ್ಷತಾ ಆಯುಕ್ತರ (ಸಿಆರ್‌ಎಸ್) ಹಂತದಲ್ಲಿ ಸಮಗ್ರ ತನಿಖೆ ನಡೆಸಲಾಗುವುದು. ಕಾರಣಗಳನ್ನು ತಿಳಿದು, ಲೋಪಗಳನ್ನು ಸರಿಪಡಿಸಿಕೊಳ್ಳಲು ಶಿಫಾರಸು ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಪ್ರಯಾಣಿಕರು ಮತ್ತು ಅವರ ಕುಟುಂಬಗಳ ಅನುಕೂಲಕ್ಕಾಗಿ ಇಲಾಖೆ ಸಹಾಯವಾಣಿ ಆರಂಭಿಸಿದೆ.

ಅಪಘಾತದಲ್ಲಿ ಮೃತಪಟ್ಟವರ ಕುರಿತು ಕಂಬನಿ ಮಿಡಿದಿರುವ ಛತ್ತೀಸಗಢದ ಮುಖ್ಯಮಂತ್ರಿ ವಿಷ್ಣುದೇವ್ ಸಾಯಿ, 'ರಾಜ್ಯ ಸರ್ಕಾರ ಸಂತ್ರಸ್ತರ ಪರ ನಿಲ್ಲುತ್ತದೆ. ಗಾಯಗೊಂಡವರು ಶೀಘ್ರ ಗುಣಮುಖರಾಗಲಿ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಿರ್ಲೋಸ್ಕರ್‌ನಿಂದ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರ್ಲೋಸ್ಕರ್ ಫೆರೋಸ್ ಇಂಡಸ್ಟ್ರೀಸ್ ರಾಜ್ಯದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ₹3,000 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ರಾಜ್ಯದ ಕೈಗಾರಿಕೆ ಮತ್ತು ವಾಣಿಜ್ಯ ಉನ್ನತಮಟ್ಟದ ನಿಯೋಗದೊಂದಿಗೆ ಪುಣೆಯಲ್ಲಿ ರೋಡ್ ಶೋ ನಡೆಸಿ, ಹೂಡಿಕೆ ಕುರಿತು ಹತ್ತಕ್ಕೂ ಹೆಚ್ಚು ಉದ್ಯಮಿಗಳ ಜತೆ ಅವರು ಮಾತುಕತೆ ನಡೆಸಿದರು.

ರಾಜ್ಯದಲ್ಲಿ ಬಂಡವಾಳ ಹೂಡಲು ವಿಪ್ರೊ ಪ್ಯಾರಿ, ಅಟ್ಲಾಸ್ ಕಾಪ್ಕೊ, ಬೆಲ್-ರೈಸ್ ಇಂಡಸ್ಟ್ರೀಸ್, ಫಿನೋಲೆಕ್ಸ್ ಮತ್ತು ಫ್ಲೂಯಿಡ್ ಕಂಟ್ರೋಲ್ಸ್ ಲಿಮಿಟೆಡ್ ಉದ್ಯಮಗಳು ಆಸಕ್ತಿ ತೋರಿಸಿವೆ. ಬಂಡವಾಳ ತೊಡಗಿಸಲು ಮುಂದಾಗಿರುವ ಈ ಕಂಪನಿಗಳಿಗೆ ಭೂಮಿ, ಮೂಲಸೌಕರ್ಯ ಮುಂತಾದ ಅನುಕೂಲಗಳ ಜತೆಗೆ ಹೆಚ್ಚಿನ ಸಹಕಾರ ನೀಡಲಾಗುವುದು ಎಂದರು.


ಎಂ.ಬಿ. ಪಾಟೀಲ

'ಕಿರ್ಲೋಸ್ಕರ್ ಫೆರೋಸ್ ಈಗಾಗಲೇ ಹಿರಿಯೂರಿನಲ್ಲಿ ತನ್ನ ಘಟಕ ಹೊಂದಿದ್ದು, ಅದನ್ನು ಮೇಲ್ದರ್ಜೆಗೇರಿಸಲು ಮುಂದಾಗಿದೆ. ಇಲ್ಲಿ ಸ್ಪಾಂಜ್ ಪೈಪ್ ಉತ್ಪಾದನೆ ಆರಂಭಿಸಲಿದೆ. ಜೊತೆಗೆ ಉಕ್ಕು ಉತ್ಪಾದನಾ ಘಟಕದ ಸಾಮರ್ಥ್ಯ ಹೆಚ್ಚಳ, ಕಬ್ಬಿಣದ ಅದಿರು ಸಂಸ್ಕರಣೆ ಹೆಚ್ಚಳ, ಫೌಂಡ್ರಿ ಘಟಕದ ಅಭಿವೃದ್ಧಿ ಮುಂತಾದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಿದೆ' ಎಂದರು.

ವಿಪ್ರೊ ಪ್ಯಾರಿ ಕಂಪನಿಯು ರಾಜ್ಯದಲ್ಲಿ ಎಲೆಕ್ಟ್ರಾನಿಕ್ಸ್ ಕಾಪರ್ ಲ್ಯಾಮಿನೇಟ್ ಉತ್ಪಾದನಾ ಘಟಕವನ್ನು ಆರಂಭಿಸಿದೆ. ದೊಡ್ಡಬಳ್ಳಾಪುರ ಸಮೀಪದ ಆದಿನಾರಾಯಣ ಹೊಸಹಳ್ಳಿಯಲ್ಲಿ ಕೆಐಎಡಿಬಿ ನಿವೇಶನದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇಲ್ಲಿ ಕಂಪನಿಯು ಸ್ಮಾರ್ಟ್ ರೊಬೊಟಿಕ್ಸ್ ಪ್ರಯೋಗಾಲಯ ಸ್ಥಾಪಿಸಲಿದೆ ಎಂದರು.

ಕಬ್ಬಿಗೆ ₹3,614 ದರ ಘೋಷಿಸಿದ ಕಾರ್ಖಾನೆ

ಸಂಕೇಶ್ವರ (ಬೆಳಗಾವಿ ಜಿಲ್ಲೆ): ಇಲ್ಲಿಗೆ ಸಮೀಪದ ಮಹಾರಾಷ್ಟ್ರದ ಬಿದ್ರಿಯ ದೂಧಗಂಗಾ- ವೇದಗಂಗಾ ಸಹಕಾರ ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿಗೆ ಟನ್ ಕಬ್ಬಿಗೆ ₹3,614 ನೀಡುವುದಾಗಿ ಘೋಷಿಸಿದೆ.

ಕಬ್ಬಿಗೆ ₹3,700 ಕೊಡಬೇಕು ಎಂದು ಮಹಾರಾಷ್ಟ್ರದ ರೈತರೂ ಧರಣಿ ಆರಂಭಿಸಿದ್ದಾರೆ. ಕಳೆದ ವರ್ಷ ಅಲ್ಲಿ ₹3,410 ನೀಡಲಾಗಿದೆ. ಈ ಬಾರಿ ಸಹಕಾರ ಸಕ್ಕರೆ ಕಾರ್ಖಾನೆಯೇ ದರ ಪರಿಷ್ಕರಿಸಿದೆ. ಇದರಿಂದ ಬೆಳಗಾವಿ ಜಿಲ್ಲೆಯ ಗಡಿ ಭಾಗದ ರೈತರೂ ಅತ್ತ ಕಬ್ಬು ಸಾಗಣೆ ಮಾಡುವ ಸಾಧ್ಯತೆ ನಿಚ್ಚಳವಾಗಿದೆ.


ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ)
(10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1410 (1400)
ಸೋಯಾ (ರಿಫೈನ್ಡ್)	₹1260 (1260)
ಸೂರ್ಯಕಾಂತ (ರಿಫೈನ್ಡ್)	₹1480 (1480)
ಪಾಮೋಲಿನ್	₹1260 (1260)

'ಕಾರ್ಖಾನೆಗಳು ಹೆಚ್ಚಿನ ಲಾಭ ಗಳಿಸಿದರೆ ರೈತರಿಗೆ ಹೆಚ್ಚಿನ ದರ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಸಕ್ಕರೆ ಕಾರ್ಖಾನೆಗಳ ಸಮಗ್ರ ವಹಿವಾಟು ವರದಿ (ಬ್ಯಾಲೆನ್ಸ್ ಶೀಟ್) ಸರ್ಕಾರದ ಬಳಿ ಬರುತ್ತದೆ. ಉಪ ಉತ್ಪನ್ನಗಳಲ್ಲಿ ಕಾರ್ಖಾನೆಗಳು ಹೆಚ್ಚಿನ ಲಾಭ ಗಳಿಸಿದ್ದರೆ, ರೈತರಿಗೆ ಹೆಚ್ಚಿನ ದರ ದೊರಕಿಸಲು ಸರ್ಕಾರ ಬದ್ಧವಾಗಿದೆ' ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ಇಲ್ಲಿ ಹೇಳಿದರು.


ಶಿವಾನಂದ ಪಾಟೀಲ

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಬೆಲೆ ನಿರ್ಧಾರ ನಾಲ್ಕು ಗೋಡೆಗಳ ನಡುವೆ ನಡೆಯುವ ಪ್ರಕ್ರಿಯೆ. ರಸ್ತೆಯಲ್ಲಿ ಈ ಬಗ್ಗೆ ಚರ್ಚೆ ಬೇಡ, ಸರ್ಕಾರ ರೈತರ ಪರವಿದೆ' ಎಂದರು.

'ಬೆಳಗಾವಿಯಲ್ಲಿ ರೈತರು ಪ್ರತಿ ಟನ್‌ಗೆ ₹3,200 ದರಕ್ಕೆ ಒಪ್ಪಿದ್ದರು. ಆದರೆ, ಪುನಃ ಧರಣಿ ಮುಂದುವರಿಸಿದ್ದಾರೆ. ಕಬ್ಬಿಗೆ ಉತ್ತಮ ಬೆಲೆ ಇದೆ. ಹಿಂದೆ ₹700 ಪ್ರತಿ ಟನ್ ಬೆಲೆ ಇತ್ತು. ಕಾರ್ಖಾನೆಗಳು ಹೆಚ್ಚಾದ ಪರಿಣಾಮ ಕಬ್ಬಿನ ಬೆಲೆಯೂ ಉತ್ತಮವಾಗಿದೆ. ಕಬ್ಬಿಗೆ ಒಳ್ಳೆಯ ಬೆಲೆ ಬಂದಿದೆ. ಅದನ್ನು ನಾವು ಹಾಳು ಮಾಡಿಕೊಳ್ಳುವುದು ಬೇಡ' ಎಂದರು.

'ಸಕ್ಕರೆ ಕಾರ್ಖಾನೆಗಳಿಗೂ ಅನೇಕ ತೊಂದರೆಗಳಿವೆ. ಸಾಲ ಮಾಡಿಯೇ ಅವರು ಕಾರ್ಖಾನೆ ಸ್ಥಾಪಿಸಿದ್ದಾರೆ. ಕಾರ್ಖಾನೆಗಳ ತೊಂದರೆಗಳು ಹಾಗೂ ಕೇಂದ್ರದ ನೀತಿ ಪರಿಷ್ಕರಣೆ ಕುರಿತು ಮಾಜಿ ಸಚಿವ ಮುರುಗೇಶ ನಿರಾಣಿ ಅವರೇ ಕೇಂದ್ರ ಸರ್ಕಾರಕ್ಕೆ ಸುದೀರ್ಘ ಪತ್ರ ಬರೆದಿದ್ದಾರೆ. ಸಕ್ಕರೆ ರಫ್ತು ನಿಂತಿದೆ. ಹಾಗೆಂದ ಮಾತ್ರಕ್ಕೆ ಸರ್ಕಾರ ಸಕ್ಕರೆ ಕಾರ್ಖಾನೆಗಳ ಲಾಭಾಂಶದ ಬಗ್ಗೆ ಯೋಚಿಸದೇ ಒಂದು ತೂಕ ಹೆಚ್ಚಾಗಿ ರೈತರ ಬಗ್ಗೆಯೇ ಯೋಚಿಸುತ್ತಿದೆ' ಎಂದರು.

ಹಬ್ಬಿದ ರೈತರ ಹೋರಾಟ

ಒಂದನೇ ಪುಟದಿಂದ...

ಬಿಜೆಪಿ ರಾಜ್ಯ ಘಟದಕ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ, ಶಾಸಕ ದುರ್ಯೋಧನ ಐಹೊಳೆ, ಮಾಜಿ ಶಾಸಕ ಪಿ.ರಾಜೀವ್ ಸೇರಿ ಬಿಜೆಪಿಯ ಹಲವು ಮುಖಂಡರು ಮಂಗಳವಾರ ಧರಣಿಯಲ್ಲಿ ಪಾಲ್ಗೊಂಡರು.

ಬೆಳಗಾವಿ ಮಾತ್ರವಲ್ಲದೇ ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ರಾಯಚೂರು, ಕಲಬುರಗಿ, ಯಾದಗಿರಿ, ಶಿವಮೊಗ್ಗ, ದಾವಣಗೆರೆ, ಮಂಡ್ಯ ಜಿಲ್ಲೆಯ ರೈತರು ಕೂಡ ಅಪಾರ ಸಂಖ್ಯೆಯಲ್ಲಿ ಇಲ್ಲಿ ಸಮಾವೇಶಗೊಂಡಿದ್ದಾರೆ.

ರೈತರು ದುಡಿಮೆಯ ಹಣ ಸೇರಿಸಿ, ಮನೆಯಿಂದ ಬುತ್ತಿ ಕಟ್ಟಿಕೊಂಡು ಬಂದು ಕೂತಿದ್ದಾರೆ. ಜಿಲ್ಲೆಯ ಕೆಲವು ಮಠಾಧೀಶರು, ಮುಖಂಡರು, ಜನರೂ ಕಾಳು, ತರಕಾರಿ, ಅಕ್ಕಿ ನೀಡಿ ಹೋರಾಟಗಾರರ ಊಟಕ್ಕೆ ನೆರವಾಗುತ್ತಿದ್ದಾರೆ. ಊರಿನವರು ವಾಹನಗಳಲ್ಲಿ ನೀರಿನ ಬಾಟಲ್‌ಗಳನ್ನು ಪೂರೈಸಿ ರೈತರ ಬಾಯಾರಿಕೆ ಹೋಗಲಾಡಿಸುತ್ತಿದ್ದಾರೆ. ಮತ್ತೆ ಕೆಲವರು ಶಾಮಿಯಾನ ಹಾಕಿ ನೆರಳಿನ ವ್ಯವಸ್ಥೆ ಮಾಡಿದ್ದಾರೆ.

ಇತ್ತ, ಬೆಳಗಾವಿ ನಗರದಲ್ಲಿ ಮಂಗಳವಾರವೂ ವಕೀಲರು ಪಾದಯಾತ್ರೆ ಕೈಗೊಂಡರು. ನಿಪ್ಪಾಣಿ, ಸಂಕೇಶ್ವರ, ಖಾನಾಪುರ, ಅಥಣಿ, ಕಾಗವಾಡ, ಚಿಕ್ಕೋಡಿ, ಬೈಲಹೊಂಗಲ, ಚನ್ನಮ್ಮನ ಕಿತ್ತೂರು, ಗೋಕಾಕ ಮತ್ತಿತರ ತಾಲ್ಲೂಕುಗಳಲ್ಲಿ ಹೋರಾಟ ಮುಂದುವರೆದಿದೆ.

ಹುಕ್ಕೇರಿ ಪೂರ್ಣ ಬಂದ್

ರೈತರ ಹೋರಾಟ ಬೆಂಬಲಿಸಿ ಮಂಗಳವಾರ ಕರೆ ನೀಡಿದ್ದ ಹುಕ್ಕೇರಿ ಪಟ್ಟಣ ಬಂದ್ ಸಂಪೂರ್ಣ ಯಶಸ್ವಿಯಾಯಿತು. ಬೆಳಿಗ್ಗೆಯಿಂದಲೇ ಬಸ್, ಆಟೊ ಸೇರಿ ಯಾವುದೇ ಖಾಸಗಿ ವಾಹನ ಕೂಡ ರಸ್ತೆಗೆ ಇಳಿಯಲಿಲ್ಲ.

ವ್ಯಾಪಾರಸ್ಥರು ಸ್ವಯಂ ಪ್ರೇರಣೆಯಿಂದಲೇ ಅಂಗಡಿಗಳನ್ನು ಬಂದ್ ಮಾಡಿದರು. ಶಾಲೆ, ಕಾಲೇಜು ವಿದ್ಯಾರ್ಥಿಗಳೂ ತರಗತಿಗಳಿಂದ ದೂರವೇ ಉಳಿದರು. ಹುಕ್ಕೇರಿ ವಕೀಲರ ಸಂಘವು ರೈತ ಸಂಘಕ್ಕೆ ₹25 ಸಾವಿರ ದೇಣಿಗೆ ನೀಡಿ ಪ್ರೋತ್ಸಾಹಿಸಿದೆ.

ರೈತ ನಾಯಕ ಯಡಿಯೂರಪ್ಪ ಅವರ ಮಗನಾಗಿ ಇಲ್ಲಿಗೆ ಬಂದಿದ್ದೇನೆ. ಮಂಗಳವಾರ ರಾತ್ರಿಯಿಡೀ ರೈತರ ಜತೆಗೇ ಉಳಿದು ಹೋರಾಟ ಮಾಡುತ್ತೇನೆ
ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ರೂಬಿ ಶೀರ್ಷಿಕೆ ಅನಾವರಣ


ರಘು ಕೋವಿ ನಿರ್ದೇಶನದ ಚೊಚ್ಚಲ ಸಿನಿಮಾ 'ರೂಬಿ'ಯ ಶೀರ್ಷಿಕೆ ಅನಾವರಣ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು.

ಅಜಯ್ ರಾವ್ ನಟನೆಯ 'ಕೃಷ್ಣ ಲೀಲಾ' ಸಿನಿಮಾಗೆ ರಘು ಕಥೆ ಬರೆದಿದ್ದರು. ಅದಕ್ಕಾಗಿ ರಾಜ್ಯ ಪ್ರಶಸ್ತಿಯನ್ನೂ ಪಡೆದುಕೊಂಡಿದ್ದರು. ನಿರ್ದೇಶಕರಾದ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಎಂ.ಎಸ್. ರಾಜಶೇಖರ್, ಕೆ.ವಿ.ರಾಜು, ಶಶಾಂಕ್, ಉಪೇಂದ್ರ ಮುಂತಾದವರ ಸಿನಿಮಾಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವವಿರುವ ರಘು ಇದೇ ಮೊದಲ ಬಾರಿಗೆ ನಿರ್ದೇಶಕರಾಗಿ ಪರೀಕ್ಷೆ ಎದುರಿಸಲಿದ್ದಾರೆ.

'ನನ್ನ ಕನಸಿಗೆ ಇಬ್ಬರು ನಿರ್ಮಾಪಕರು ಸಾಥ್ ಕೊಟ್ಟಿದ್ದಾರೆ. ಒಂದು ಪ್ರೇಮ ಕಥೆಯನ್ನು ಸಂಗೀತದ ಮೂಲಕ ಹೇಳಲು ಸಾಧ್ಯವಿದೆ. ಅದನ್ನು ಆರ್. ಪಿ.ಪಟ್ನಾಯಕ್ ಅವರಂತಹ ಸಂಗೀತ ನಿರ್ದೇಶಕರು ಈ ಸಿನಿಮಾ ಮೂಲಕ ಮಾಡಿದ್ದಾರೆ. ಹೈದರಾಬಾದ್‌ನಲ್ಲಿ ನಡೆದ ನೈಜ ಘಟನೆಯನ್ನು ಈ ಸಿನಿಮಾ ಮೂಲಕ ಹೇಳಲು ಹೊರಟ್ಟಿದ್ದೇವೆ. ಚಿತ್ರದಲ್ಲಿ ಐದು ಹಾಡುಗಳು ಇವೆ. ಶೇಕಡ 50ರಷ್ಟು ಶೂಟಿಂಗ್ ಮುಕ್ತಾಯಗೊಂಡಿದೆ' ಎಂದರು ರಘು.

'ದಿಲ್‌ಮಾರ್' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಹೀರೊ ಆಗಿ ಹೆಜ್ಜೆ ಇಟ್ಟ ರಾಮ್ ಗೌಡ 'ರೂಬಿ'ಯಲ್ಲಿ ನಾಯಕರಾಗಿ ಅಭಿನಯಿಸುತ್ತಿದ್ದು, 'ಗಾಳಿಪಟ-2', 'ಮಾರ್ಟಿನ್' ಸಿನಿಮಾ ಖ್ಯಾತಿಯ ನಟಿ ವೈಭವಿ ಶಾಂಡಿಲ್ಯ ನಾಯಕಿಯಾಗಿ ಜೋಡಿಯಾಗಿದ್ದಾರೆ. ವೆಂಕಟೇಶ್ ಅಂಗುರಾಜ್ ಛಾಯಾಚಿತ್ರಗ್ರಹಣ, ಸುರೇಶ್ ಅರಸ್ ಸಂಕಲನ, ವಿಕ್ರಮ್ ಮೋರ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಇವಾನ್ ಫಿಲ್ಮ್ಸ್ ಈ ಸಿನಿಮಾವನ್ನು ನಿರ್ಮಿಸುತ್ತಿದೆ.


ವೈಭವಿ


ಸುದೀಪ್

ವಾರಾಂತ್ಯಕ್ಕೆ 'ಮಾರ್ಕ್' ಟೀಸರ್

ನಟ ಸುದೀಪ್ ನಟನೆಯ 47ನೇ ಸಿನಿಮಾ 'ಮಾರ್ಕ್' ಡಿ.25ರಂದು ತೆರೆಕಾಣಲಿದೆ. 'ಮ್ಯಾಕ್ಸ್' ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದ ಮೊದಲ ಟೀಸರ್ ಇದೇ ವಾರಾಂತ್ಯದಲ್ಲಿ ರಿಲೀಸ್ ಆಗಲಿದೆ ಎಂದು 'ಎಕ್ಸ್'ನಲ್ಲಿ ಸುದೀಪ್ ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ಸಿನಿಮಾದ 'ಸೈಕೊ ಸೈತಾನ್' ಹಾಡು ಬಿಡುಗಡೆಯಾಗಿತ್ತು. ನಿರ್ದೇಶಕ ಅನೂಪ್ ಭಂಡಾರಿ ಸಾಹಿತ್ಯದ ಈ ಹಾಡಿನಲ್ಲಿ ಸುದೀಪ್ ಭರ್ಜರಿಯಾಗಿ ಹೆಜ್ಜೆ ಹಾಕಿದ್ದರು. ಸಿನಿಮಾದೊಳಗಿನ ನಾಯಕನ ಪಾತ್ರವನ್ನು ವಿವರಿಸುವ ಈ ಹಾಡು ರಿಲೀಸ್ ಆದ ಬೆನ್ನಲ್ಲೇ ಟೀಸರ್ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ.

ಸುದೀಪ್ ಮತ್ತು ವಿಜಯ್ ಕಾರ್ತಿಕೇಯ ಕಾಂಬಿನೇಷನ್‌ನಲ್ಲಿ ಬರುತ್ತಿರುವ ಎರಡನೇ ಸಿನಿಮಾ ಇದಾಗಿದ್ದು, 'ಸತ್ಯಜ್ಯೋತಿ ಫಿಲ್ಮ್ಸ್' ಮತ್ತು 'ಕಿಚ್ಚ ಕ್ರಿಯೇಷನ್ಸ್' ಬ್ಯಾನರ್‌ಗಳು ಜೊತೆಯಾಗಿ ಸಿನಿಮಾವನ್ನು ನಿರ್ಮಿಸಿವೆ. ಶೇಖರ್‌ಚಂದ್ರ ಛಾಯಾಚಿತ್ರಗ್ರಹಣ, ಗಣೇಶ್ ಬಾಬು ಸಂಕಲನ ಚಿತ್ರಕ್ಕಿದೆ. ಸ್ಟಂಟ್ ಸಿಲ್ವಾ, ಸುಪ್ರೀಂ ಸುಂದರ್, ವಿಕ್ರಮ್ ಮೋರ್, ಕೆವಿನ್ ಕುಮಾರ್ ಸಾಹಸ ದೃಶ್ಯಗಳನ್ನು ಸಂಯೋಜಿಸಿದ್ದಾರೆ. 'ಇದು 'ಮ್ಯಾಕ್ಸ್-2' ಅಲ್ಲ. ಸಿನಿಮ್ಯಾಟಿಕ್ ಯೂನಿವರ್ಸ್ ಇರಬಹುದು. 'ಮ್ಯಾಕ್ಸ್'ನ ನಿರ್ದೇಶಕರು, ತಾಂತ್ರಿಕ ತಂಡವೇ ಕೆಲಸ ಮಾಡುತ್ತಿರುವ ಕಾರಣ ಅದೇ ಮಾದರಿಯಲ್ಲಿ ಸಿನಿಮಾವಿರಬಹುದು. ಈ ಪಾತ್ರದಲ್ಲಿ ವಿಭಿನ್ನತೆ ಇದ್ದು, ಅನಿಮಲ್ ಇನ್‌ಸ್ಟಿಂಕ್ಟ್ ಇದೆ' ಎಂದಿದ್ದರು ಸುದೀಪ್. ಈ ಸಿನಿಮಾದ ಶೂಟಿಂಗ್ ಪೂರ್ಣಗೊಂಡ ಬೆನ್ನಲ್ಲೇ ಸುದೀಪ್ ಮತ್ತೆ 'ಬಿಲ್ಲ ರಂಗ ಬಾಷಾ' ಪ್ರಾಜೆಕ್ಟ್ ಕೈಗೆತ್ತಿಕೊಳ್ಳಲಿದ್ದಾರೆ.


ಖುಷಿ ರವಿ, ಲಿಖಿತ್ ಶೆಟ್ಟಿ, ತೇಜಸ್ವಿನಿ ಶರ್ಮಾ

'ಫುಲ್ ಮೀಲ್ಸ್' ಟ್ರೇಲರ್ ಬಿಡುಗಡೆ

'ಸಂಕಷ್ಟಕರ ಗಣಪತಿ' ಸಿನಿಮಾ ಖ್ಯಾತಿಯ ನಟ ಲಿಖಿತ್ ಶೆಟ್ಟಿ, ತೇಜಸ್ವಿನಿ ಶರ್ಮಾ ಹಾಗೂ ಖುಷಿ ರವಿ ನಟಿಸಿರುವ 'ಫುಲ್ ಮೀಲ್ಸ್' ಚಿತ್ರ ನ.21ಕ್ಕೆ ತೆರೆಕಾಣುತ್ತಿದೆ. ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆ ಆಗಿದೆ.

ಬಹಳ ದಿನಗಳ ನಂತರ ಕನ್ನಡದಲ್ಲಿ ಫೋಟೊಗ್ರಾಫರ್ ಜೀವನದ ಕುರಿತಾದ ಕಥೆಯೊಂದು ಸಿನಿಮಾವಾಗಿ ತೆರೆಗೆ ಬರಲು ಸಿದ್ಧವಾಗಿದೆ. ವೆಡ್ಡಿಂಗ್ ಫೋಟೊಗ್ರಾಫರ್ ಒಬ್ಬನ ಸುತ್ತ ಸುತ್ತುವ ಕಥಾಹಂದರವನ್ನು ಹೊಂದಿರುವ ಈ ಸಿನಿಮಾ ರೊಮ್ಯಾಂಟಿಕ್ ಕಾಮಿಡಿ ಜಾನರ್‌ನಲ್ಲಿದೆ. ಎನ್.ವಿನಾಯಕ ಕಥೆ, ಚಿತ್ರಕಥೆ ಬರೆದು ಈ ಸಿನಿಮಾ ನಿರ್ದೇಶಿಸಿದ್ದಾರೆ.

ವೆಡ್ಡಿಂಗ್ ಫೋಟೊಗ್ರಾಫರ್ ಒಬ್ಬ ಪ್ರೀವೆಡ್ಡಿಂಗ್ ಶೂಟ್‌ಗೆಂದು ಹೋದಾಗ ಆ ಮದುವೆಯ ಹೆಣ್ಣಿಗೆ ಫೋಟೊಗ್ರಾಫರ್ ಮೇಲೆಯೇ ಪ್ರೀತಿ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ಸೃಷ್ಟಿಯಾಗುವ ಪರಿಸ್ಥಿತಿಗಳೇ ಚಿತ್ರದ ಪ್ರಮುಖ ಕಥಾವಸ್ತು ಎಂದಿದೆ ಚಿತ್ರತಂಡ.

'ಲಿಖಿತ್ ಶೆಟ್ಟಿ' ಫೋಟೊಗ್ರಾಫರ್ ಪಾತ್ರದಲ್ಲಿ ಕಾಣಿಸಿಕೊಂಡರೆ, 'ದಿಯಾ' ಖ್ಯಾತಿಯ ಖುಷಿ ರವಿ ಮದುವೆ ಹೆಣ್ಣಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮೇಕಪ್ ಹುಡುಗಿಯ ಪಾತ್ರದಲ್ಲಿ ತೇಜಸ್ವಿನಿ ಶರ್ಮಾ ನಟಿಸಿದ್ದು, ಇದೊಂದು ತ್ರಿಕೋನ ಪ್ರೇಮಕಥೆಯಾಗಿದೆ. ಗುರುಕಿರಣ್ ಸಂಗೀತ ನಿರ್ದೇಶನ, ದೀಪು ಎಸ್.ಕುಮಾರ್ ಸಂಕಲನ, ಮನೋಹರ್ ಜೋಷಿ ಛಾಯಾಚಿತ್ರಗ್ರಹಣ, ಹರೀಶ್ ಗೌಡ ಸಂಭಾಷಣೆ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ, ಅರ್ಜುನ್ ರಾಜ್ ಸಾಹಸ ನಿರ್ದೇಶನ, ಕವಿರಾಜ್ ಮತ್ತು ಪ್ರಮೋದ್ ಮರವಂತೆ ಸಾಹಿತ್ಯ ಚಿತ್ರಕ್ಕಿದೆ. ರಂಗಾಯಣ ರಘು, ಸೂರಜ್, ವಿಜಯ್ ಚಂಡೂರ್, ರವಿಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಚಂದ್ರಕಲಾ ಮೋಹನ್, ಹೊನ್ನವಳ್ಳಿ ಕೃಷ್ಣ, ರಮೇಶ್ ಪಂಡಿತ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ನ.7ಕ್ಕೆ ಯಜಮಾನ ಮರುಬಿಡುಗಡೆ

25 ವರ್ಷಗಳ ಹಿಂದೆ ತೆರೆಕಂಡಿದ್ದ ವಿಷ್ಣುವರ್ಧನ್ ನಟನೆಯ 'ಯಜಮಾನ' ಸಿನಿಮಾ ನ.7ರಂದು ಮರುಬಿಡುಗಡೆ ಆಗುತ್ತಿದೆ. ಕೆ.ಮೆಹರುನ್ನೀಸಾ ರೆಹಮಾನ್ ನಿರ್ಮಾಣದ ಹಾಗೂ ಆರ್.ಶೇಷಾದ್ರಿ-ರಾಧಾ ಭಾರತಿ ನಿರ್ದೇಶನದ ಈ ಸಿನಿಮಾಗೆ ಇದೀಗ ಆಧುನಿಕ ತಂತ್ರಜ್ಞಾನಗಳನ್ನು ಜೋಡಿಸಲಾಗಿದೆ. 4ಕೆ ಡಿಜಿಟಲ್ ಪ್ರೊಜೆಕ್ಷನ್‌ನಲ್ಲಿ ಸಿನಿಮಾವನ್ನು ಪ್ರೇಕ್ಷಕರು ವೀಕ್ಷಿಸಬಹುದಾಗಿದೆ.

ಚಿತ್ರದ ಕುರಿತು ಮಾತನಾಡಿದ ನಿರ್ಮಾಪಕ ರೆಹಮಾನ್, '130ಕ್ಕೂ ಹೆಚ್ಚು ಕಡೆ ಶತದಿನೋತ್ಸವ, 40ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಇಪ್ಪತ್ತೈದು ವಾರ ಹಾಗೂ ನಾಲ್ಕು ಕಡೆಗಳಲ್ಲಿ ಒಂದು ವರ್ಷ ಈ ಸಿನಿಮಾ ಓಡಿತ್ತು. 25 ವರ್ಷಗಳ ಹಿಂದೆಯೇ ₹35 ಕೋಟಿ ಕಲೆಕ್ಷನ್ ಮಾಡಿ ದಾಖಲೆ ಬರೆದ ಚಿತ್ರವಿದು. ವಿಷ್ಣುವರ್ಧನ್, ಪ್ರೇಮ, ಶಶಿಕುಮಾರ್, ಅಭಿಜಿತ್, ರಮೇಶ್ ಭಟ್, ಟೆನ್ನಿಸ್ ಕೃಷ್ಣ ಹೀಗೆ ಅನೇಕ ಕಲಾವಿದರ ಅದ್ದೂರಿ ತಾರಾಬಳಗವಿರುವ ಈ ಚಿತ್ರವನ್ನು ಈಗ ಮುನಿಸ್ವಾಮಿ ಅವರು ಮರುಬಿಡುಗಡೆ ಮಾಡುತ್ತಿದ್ದಾರೆ' ಎಂದರು.


ವಿಷ್ಣುವರ್ಧನ್

'ಚಿತ್ರವನ್ನು ಡಿಐ ಬಳಸಿ 4ಕೆ ಡಿಜಿಟಲ್ ಪ್ರೊಜೆಕ್ಷನ್‌ಗೆ ತಯಾರು ಮಾಡಲಾಗಿದೆ. ಮೋನೊ ಟ್ರ್ಯಾಕ್‌ನಲ್ಲಿದ್ದ ಈ ಚಿತ್ರದ ಕಲಾವಿದರ ಧ್ವನಿಗಳನ್ನೂ 5.1 ಹಾಗೂ 7.1 ಡಿಜಿಟಲ್ ಸೌಂಡ್‌ಗೆ ವರ್ಗಾಯಿಸಲಾಗಿದೆ. ಹಾಡುಗಳಿಗೂ ಇದೇ ರೀತಿ ನೂತನ ತಂತ್ರಜ್ಞಾನ ಅಳವಡಿಸಲಾಗಿದೆ' ಎಂದರು ಸಂಗೀತ ನಿರ್ದೇಶಕ ರಾಜೇಶ್ ರಾಮನಾಥ್. 'ನ.7ರಂದು 150ಕ್ಕೂ ಹೆಚ್ಚು ಕಡೆ ಸಿನಿಮಾ ಮರು ಬಿಡುಗಡೆಯಾಗಲಿದೆ' ಎಂದರು ಮುನಿಸ್ವಾಮಿ.

ಬಿಹಾರದವರಿಗೆ 3 ದಿನ ರಜೆ: ಡಿಸಿಎಂ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮತ ಚಲಾಯಿಸಲು ಅನುಕೂಲವಾಗುವಂತೆ ಆ ರಾಜ್ಯದ ಮತದಾರರಾದವರಿಗೆ ಕನಿಷ್ಠ ಮೂರು ದಿನ ಗಳ ವೇತನ ಸಹಿತ ರಜೆ ನೀಡುವಂತೆ ಉದ್ದಿಮೆದಾರರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ಎಲ್ಲ ಕಂಪನಿಗಳು, ವಾಣಿಜ್ಯ ಉದ್ಯಮಿಗಳು, ಹೋಟೆಲ್‌ಗಳು, ಗುತ್ತಿಗೆದಾರರು, ಬಿಲ್ಡರ್‌ಗಳು, ಅಂಗಡಿ ಮುಂಗಟ್ಟುಗಳ ಮಾಲೀಕರು, ಹಾಗೂ ಇತರೆ ಉದ್ದಿಮೆದಾರಿಗೆ ಅವರು ಈ ಕುರಿತು ಪತ್ರ ಬರೆದಿದ್ದಾರೆ.

'ಬಿಹಾರದಲ್ಲಿ ಎರಡು ಹಂತದಲ್ಲಿ ಅಂದರೆ, ಇದೇ 6 ಮತ್ತು 11ರಂದು ಮತದಾನ ನಡೆಯಲಿದೆ. ಬೆಂಗಳೂರು ಹಾಗೂ ಕರ್ನಾಟಕದ ವಿವಿಧ ಭಾಗಗಳಲ್ಲಿ ಬಿಹಾರದ ನಿವಾಸಿಗಳು ದೊಡ್ಡ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ರಜೆ ನೀಡುವ ಮೂಲಕ ಈ ನಿವಾಸಿಗಳು ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಸಹಕರಿಸಬೇಕು' ಎಂದೂ ಕೋರಿದ್ದಾರೆ.

ಕೆ-ಸೆಟ್: ಕೀ ಉತ್ತರ ಪ್ರಕಟ, ಆಕ್ಷೇಪಣೆಗೆ ನ.6ರ ಗಡುವು

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆ-ಸೆಟ್) ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

33 ವಿಷಯಗಳಿಗೆ ನಡೆದಿದ್ದ ಕೆ-ಸೆಟ್ ಪರೀಕ್ಷೆಗೆ 1.36 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಬೆಂಗಳೂರು, ಬಳ್ಳಾರಿ, ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ವಿಜಯಪುರ ಜಿಲ್ಲೆಗಳ 316 ಕೇಂದ್ರಗಳಲ್ಲಿ ನ.2ರಂದು ಪರೀಕ್ಷೆ ಆಯೋಜಿಸಲಾಗಿತ್ತು. ಬೆಂಗಳೂರಿನಲ್ಲಿ ಎಲ್ಲ 33 ವಿಷಯಗಳ ಪರೀಕ್ಷೆ ನಡೆದರೆ, ಉಳಿದ ಜಿಲ್ಲೆಗಳಲ್ಲಿ 11 ವಿಷಯಗಳ ಪರೀಕ್ಷೆಗಳನ್ನು ನಡೆಸಲಾಗಿತ್ತು. ಅಭ್ಯರ್ಥಿಗಳು ಮೂರು ಗಂಟೆ ಅವಧಿಯಲ್ಲಿ 100 ಅಂಕಗಳ ಸಾಮಾನ್ಯ ಜ್ಞಾನ ಮತ್ತು 200 ಅಂಕಗಳ ವಿಷಯವಾರು ಪತ್ರಿಕೆಗಳಿಗೆ ಉತ್ತರಿಸಿದ್ದರು.

ಈ ಪರೀಕ್ಷೆಗಳಿಗೆ ನೆಗೆಟಿವ್ ಮೌಲ್ಯಮಾಪನ ಇಲ್ಲ. ಕೀ ಉತ್ತರಗಳಿಗೆ ಆಕ್ಷೇಪಣೆಗಳು ಇದ್ದರೆ ನ.6ರ ಮಧ್ಯಾಹ್ನ 3ಗಂಟೆ ಒಳಗೆ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಕೊಟ್ಟಿರುವ ಲಿಂಕ್ ಮೂಲಕ ಅಪ್‌ಲೋಡ್ ಮಾಡಬಹುದು. ಪ್ರತಿಯೊಂದು ಆಕ್ಷೇಪಣೆಗೂ ₹50 ಪಾವತಿಸಬೇಕು. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ಗಮನಿಸಬೇಕು ಎಂದು ಪ್ರಾಧಿಕಾರ ಹೇಳಿದೆ.

ಮಾಲೂರು: 11ಕ್ಕೆ ಮರು ಮತ ಎಣಿಕೆ

ಕೋಲಾರ: ಭಾರಿ ಕುತೂಹಲ ಮೂಡಿಸಿರುವ ಮಾಲೂರು ವಿಧಾನಸಭಾ ಕ್ಷೇತ್ರದ ಮತ ಮರು ಎಣಿಕೆ ನ.11ರಂದು ನಡೆಯಲಿದೆ.

ಈ ಸಂಬಂಧ ರಾಜ್ಯ ಮುಖ್ಯ ಚುನಾಣಾಧಿಕಾರಿ ಕಚೇರಿಯಿಂದ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿಗೆ ಪತ್ರ ರವಾನೆಯಾಗಿದೆ. ದಿನಾಂಕ ನಿಗದಿ ಆಗಿರುವುದನ್ನು ಜಿಲ್ಲಾಡಳಿತದ ಮೂಲಗಳು ಖಚಿತಪಡಿಸಿವೆ. ಮತ ಮರುಎಣಿಕೆಗೆ ಜಿಲ್ಲಾಡಳಿತ ಸಿದ್ಧತೆ ನಡೆಸಿದೆ. ಕೋಲಾರ ನಗರ ಹೊರವಲಯದ ತೋಟಗಾರಿಕೆ ಮಹಾವಿದ್ಯಾಲಯದ ಜಾಗ ಸೂಕ್ತವೇ ಎಂದು ಪರಿಶೀಲಿಸಿದೆ. ಅದರ ಹೊರತಾಗಿ ಬೇರೆ ಸೂಕ್ತ ಜಾಗದ ಹುಡುಕಾಟದಲ್ಲಿಯೂ ತೊಡಗಿದೆ.

ಸುಪ್ರೀಂ ಕೋರ್ಟ್ ಅ.14ರ ಆದೇಶದಲ್ಲಿ ನೀಡಿರುವ ನಿರ್ದೇಶನ ಹಾಗೂ ಆಯೋಗದ ನಿರ್ದೇಶನ ಪಾಲಿಸಲು ಸೂಚಿಸಲಾಗಿದೆ.

ಮೊಹ್ಸಿನ್ ಸ್ಪಿನ್ ಬಲೆಗೆ ಬಿದ್ದ ಕೇರಳ

ಕರ್ನಾಟಕಕ್ಕೆ ಇನಿಂಗ್ಸ್ ಜಯ: ಋತುವಿನಲ್ಲಿ ಮಯಂಕ್ ಪಡೆಗೆ ಮೊದಲ ಗೆಲುವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಮೊಹ್ಸಿನ್ ಖಾನ್ (23.3–14–29–6) ಅವರ ಸ್ಪಿನ್ ಮೋಡಿಗೆ ಸಿಲುಕಿದ ಕೇರಳ ತಂಡವು ಹೋರಾಟ ತೋರದೇ ಶರಣಾಯಿತು. ಕರ್ನಾಟಕ ತಂಡ ರಣಜಿ ಟ್ರೋಫಿ ಬಿ ಗುಂಪಿನ ಈ ಪಂದ್ಯವನ್ನು ಮಂಗಳವಾರ ಇನಿಂಗ್ಸ್ ಮತ್ತು 164 ರನ್‌ಗಳಿಂದ ಗೆದ್ದುಕೊಂಡಿತು. ಇದು ಈ ಋತುವಿನಲ್ಲಿ ಕರ್ನಾಟಕಕ್ಕೆ ಮೊದಲ ಜಯವಾಯಿತು.

ಮಂಗಲಪುರಂನ ಕೆಸಿಎ ಮೈದಾನದಲ್ಲಿ ಮೂರನೇ ದಿನದ ಕೊನೆಯ ಅವಧಿಯಲ್ಲಿ ಸ್ವಲ್ಪ ಪ್ರತಿರೋಧ ತೋರಿದ್ದ ಕೇರಳ ತಂಡ, ಫಾಲೋಆನ್‌ಗೆ ಒಳಗಾದ ನಂತರ ಅಷ್ಟೇನೂ ಪ್ರತಿಹೋರಾಟ ತೋರಲಿಲ್ಲ. ಕರ್ನಾಟಕ ಹಿಡಿತ ಸಾಧಿಸಿ ಪೂರ್ಣ ಏಳು ಪಾಯಿಂಟ್ಸ್ ಪಡೆಯಿತು.

ಕರ್ನಾಟಕ ಈಗ ಗುಂಪಿನಲ್ಲಿ 11 ಪಾಯಿಂಟ್‌ಗಳೊಡನೆ ಎರಡನೇ ಸ್ಥಾನದಲ್ಲಿದೆ. ಇಷ್ಟೇ ಪಾಯಿಂಟ್ಸ್ ಪಡೆದಿರುವ ಗೋವಾ ರನ್ ಕೋಷ್ಟಕದ ಆಧಾರದಲ್ಲಿ ಮುಂದಿದೆ.

ಮೊದಲ ಇನಿಂಗ್ಸ್‌ನಲ್ಲಿ 348 ರನ್‌ಗಳ ಭಾರಿ ಅಂತರದಿಂದ ಹಿಂದೆ ಉಳಿದಿದ್ದ ಕೇರಳದ ಮುಂದೆ ಡ್ರಾಕ್ಕೆ ಪ್ರಯತ್ನಿಸುವ ಮಾರ್ಗವೊಂದೇ ಉಳಿದಿತ್ತು. ವಿಕೆಟ್ ನಷ್ಟವಿಲ್ಲದೇ 10 ರನ್‌ಗಳಿಂದ ಅಂತಿಮ ದಿನದಾಟ ಮುಂದುವರಿಸಿದ ಆತಿಥೇಯ ತಂಡಕ್ಕೆ ದಿನದ ಎರಡನೇ ಓವರಿನಲ್ಲಿ ವಿದ್ವತ್ ಕಾವೇರಪ್ಪ ಪೆಟ್ಟು ನೀಡಿದರು. ಆ ಓವರಿನ ಎರಡನೇ ಎಸೆತದಲ್ಲಿ ಎಂ.ಡಿ. ನಿಧೀಶ್ ಅವರ ವಿಕೆಟ್ ಪಡೆದ ಕರ್ನಾಟಕ ವೇಗಿ ಮರುಎಸೆತದಲ್ಲೇ ಅಕ್ಷಯ್ ಚಂದ್ರನ್ ವಿಕೆಟ್ ಸಹ ಪಡೆದರು.

ಕೇರಳ ನಾಯಕ ಮೊಹಮ್ಮದ್ ಅಜರುದ್ದೀನ್ ಅವರು ಸ್ಪಿನ್ನರ್ ಶಿಖರ್ ಶೆಟ್ಟಿ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. ಆರಂಭ ಆಟಗಾರ ಕೃಷ್ಣ ಪ್ರಸಾದ್ (33, 87ಎ) ಜೊತೆಗೂಡಿದ ಅಹಮದ್ ಇಮ್ರಾನ್ (23, 76ಎ) ಐದನೇ ವಿಕೆಟ್‌ಗೆ 57 ರನ್ ಸೇರಿಸಿ ಕೆಲಕಾಲ ಕುಸಿತ ತಡೆದರು. ಈ ಹಂತದಲ್ಲಿ ಆಫ್ ಸ್ಪಿನ್ನರ್ ಮೊಹ್ಸಿನ್ ಅವರು ಕೇರಳದ ಕುಸಿತಕ್ಕೆ ನಾಂದಿಹಾಡಿದರು. ಕರಾರುವಾಕ್ ದಾಳಿಯಲ್ಲಿ ಏಳು ವಿಕೆಟ್‌ಗಳಲ್ಲಿ ಆರನ್ನು ಕಬಳಿಸಿದರು.

ಇನಿಂಗ್ಸ್‌ನ 32ನೇ ಓವರಿನಲ್ಲಿ ಕೃಷ್ಣ ಪ್ರಸಾದ್ ವಿಕೆಟ್ ಪಡೆದ ಈ ಯುವ ಬೌಲರ್ ಎರಡು ಓವರುಗಳ ನಂತರ ಇಮ್ರಾನ್ ಅವರನ್ನು ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಹಿಡಿದು ಔಟ್ ಮಾಡಿದರು.

ಸಚಿನ್ ಬೇಬಿ ಮತ್ತು ಬಾಬಾ ಅಪರಾಜಿತ್ ಕೆಲಕಾಲ ಪ್ರತಿರೋಧ ತೋರಿದರಷ್ಟೇ. ಆದರೆ ಇವರಿಬ್ಬರ ವಿಕೆಟ್‌ಗಳೂ ಮೊಹ್ಸಿನ್ ಪಾಲಾದವು. ಇನ್ನೊಂದು ಕಡೆ ಅನುಭವಿ ಶ್ರೇಯಸ್ ಗೋಪಾಲ್ ಸಹ ವಿಕೆಟ್ ಸುಗ್ಗಿಯಲ್ಲಿ ಸೇರಿಕೊಂಡರು.

ಆದರೆ ಕೊನೆಯ ವಿಕೆಟ್ ಪಡೆಯಲು ಕರ್ನಾಟಕ 23 ಓವರುಗಳ ಕಾಲ ಶ್ರಮಹಾಕಬೇಕಾಯಿತು. ಹರಿಕೃಷ್ಣನ್ ಎಂ.ಯು. (6, 94ಎ, 4x1) ಜೊತೆಗೂಡಿದ ಏದನ್ ಆಪ್ಪಿಳ್ ಟೋಂ (ಅಜೇಯ 39, 68ಎ, 4x7) ಅವರು ತಂಡ ಆಲೌಟ್ ಆಗುವ ಮುನ್ನ 44 ರನ್ ಸೇರಿಸಿದರು. ಈ ಜೊತೆಯಾಟ ಸಹ ಮುರಿದ ಮೊಹ್ಸಿನ್, ತಮ್ಮ ನಾಲ್ಕನೇ ಪ್ರಥಮ ದರ್ಜೆ ಪಂದ್ಯದಲ್ಲೇ ಜೀವನ ಶ್ರೇಷ್ಠ ಸಾಧನೆ ದಾಖಲಿಸಿದರು.




ಆರು ವಿಕೆಟ್ ಪಡೆದ ಕರ್ನಾಟಕದ ಮೊಹ್ಸಿನ್ ಖಾನ್ ಪ್ರಜಾವಾಣಿ ಸಂಗ್ರಹ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 5ಕ್ಕೆ 586 ಡಿಕ್ಲೇರ್ಡ್ (167 ಓವರುಗಳಲ್ಲಿ)
ಕೇರಳ: 238 (95 ಓವರುಗಳಲ್ಲಿ) ಫಾಲೋಆನ್;
ಎರಡನೇ ಇನಿಂಗ್ಸ್: ಕೇರಳ: 184 (79.3 ಓವರುಗಳಲ್ಲಿ)
(ಸೋಮವಾರ ವಿಕೆಟ್ ನಷ್ಟವಿಲ್ಲದೇ 10)
ಕೃಷ್ಣಪ್ರಸಾದ್ ಬಿ ಮೊಹ್ಸಿನ್ 33
ನಿಧೀಶ್ ಸಿ ನಾಯರ್ ಬಿ ವಿದ್ವತ್ 9
ಅಕ್ಷಯ್ ಬಿ ವಿದ್ವತ್ ಕಾವೇರಪ್ಪ 0
ಅಜರುದ್ದೀನ್ ಸಿ ಶ್ರೀಜಿತ್ ಬಿ ಶಿಖರ್ 15
ಇಮ್ರಾನ್ ಸಿ ಮತ್ತು ಬಿ ಮೊಹ್ಸಿನ್ 23
ಅಪರಾಜಿತ್ ಎಲ್‌ಬಿಡಬ್ಲ್ಯು ಬಿ ಮೊಹ್ಸಿನ್ 19
ಸಚಿನ್ ಬೇಬಿ ಬಿ ಮೊಹ್ಸಿನ್ 12
ಶಾನ್ ರೋಜರ್ ಬಿ ಮೊಹ್ಸಿನ್ 0
ಹರಿಕೃಷ್ಣನ್ ಎಲ್‌ಬಿಡಬ್ಲ್ಯು ಬಿ ಮೊಹ್ಸಿನ್ 6
ವೈಶಾಖ್ ಸಿ ನಾಯರ್ ಬಿ ಶ್ರೇಯಸ್ 4
ಏದನ್ ಆಪ್ಪಿಳ್ ಟೋಂ ಔಟಾಗದೆ 39
ಇತರೆ: 24 (ಬೈ 12, ಲೆಗ್‌ಬೈ 12)
ವಿಕೆಟ್ ಪತನ: 1–19 (ನಿಧೀಶ್ ಎಂ.ಡಿ, 4.2), 2–19 (ಅಕ್ಷಯ ಚಂದ್ರನ್, 4.3), 3–40 (ಮೊಹಮ್ಮದ್ ಅಜರುದ್ದೀನ್, 9.4), 4–97 (ಕೃಷ್ಣಪ್ರಸಾದ್, 31.1), 5–105 (ಅಹಮ್ಮದ್ ಇಮ್ರಾನ್, 35.2) 6–130 (ಸಚಿನ್ ಬೇಬಿ, 47.1), 7–130 (ಶಾನ್ ರೋಜರ್, 47.4), 8–135 (ಬಾಬಾ ಅಪರಾಜಿತ್, 51.4), 9–140 (ವಿಶಾಖ ಚಂದ್ರನ್, 56.5), 10–184 (ಹರಿಕೃಷ್ಣನ್ ಎಂ.ಯು, 79.3).
ಬೌಲಿಂಗ್: ವಿದ್ವತ್ ಕಾವೇರಪ್ಪ 13–4–28–2; ವೈಶಾಖ ವಿಜಯಕುಮಾರ್ 10–3–27–0; ಶಿಖರ್ ಶೆಟ್ಟಿ 13–2–32–1; ಶ್ರೇಯಸ್ ಗೋಪಾಲ್ 20–7–44–1; ಮೊಹ್ಸಿನ್ ಖಾನ್ 23.3–14–29–6.
ಪಂದ್ಯದ ಆಟಗಾರ: ಕರುಣ್ ನಾಯರ್

ವಾಸುಕಿ ಕೌಶಿಕ್ ಶತಕ!



ಬೆಂಗಳೂರು: ಈ ಬಾರಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಗೋವಾ ತಂಡವನ್ನು ಪ್ರತಿನಿಧಿಸುತ್ತಿರುವ ಬೆಂಗಳೂರಿನ ವಾಸುಕಿ ಕೌಶಿಕ್ ಅವರು 'ವಿಕೆಟ್ ಶತಕ' ದಾಖಲಿಸಿದರು.

ಮುಲ್ಲನಪುರದಲ್ಲಿ ನಡೆದ ಗೋವಾ ಮತ್ತು ಪಂಜಾಬ್ ಪಂದ್ಯದಲ್ಲಿ ಅವರು ಎರಡು ವಿಕೆಟ್ ಗಳಿಸಿದರು. ಅದರೊಂದಿಗೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 100 ವಿಕೆಟ್ ಗಳಿಸಿದ ಬೌಲರ್ ಆದರು.

33 ವರ್ಷದ ಕೌಶಿಕ್ ಅವರು ಈ ವರ್ಷ ಗೋವಾ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಬಲಗೈ ಮಧ್ಯಮವೇಗಿ ಕೌಶಿಕ್ ಅವರು ಹೋದವಾರ ಶಿವಮೊಗ್ಗದಲ್ಲಿ ಕರ್ನಾಟಕ ವಿರುದ್ಧ ನಡೆದಿದ್ದ ಪಂದ್ಯದಲ್ಲಿ 3 ವಿಕೆಟ್ ಗಳಿಸಿದ್ದರು. ಮುಲ್ಲನಪುರದ ಪಂದ್ಯವು ಡ್ರಾ ಆಯಿತು. ಗೋವಾ ಮೊದಲ ಇನಿಂಗ್ಸ್ ಮುನ್ನಡೆಯಿಂದಾಗಿ 3 ಅಂಕ ಗಳಿಸಿತು. ಪಂಜಾಬ್ 1 ಅಂಕ ಪಡೆಯಿತು



ವಿದಿತ್ ಗುಜರಾತಿ (ಬಲಗಡೆ) ಜೊತೆ ಆಡಿದ ಅರ್ಜೆಂಟೀನಾದ ಫೌಸ್ಟಿನೊ ಒರೊ ಚಿತ್ರ: ಫಿಡೆ ವೆಬ್‌ಸೈಟ್

'ಚೆಸ್‌ನ ಮೆಸ್ಸಿ' ಎದುರು ವಿದಿತ್ ಡ್ರಾ

ಇರಿಗೇಶಿಗೆ ಜಯ; ಡ್ರಾ ಪಂದ್ಯದಲ್ಲಿ ಗುಕೇಶ್, ಪ್ರಜ್ಞಾನಂದ

ಪಣಜಿ (ಪಿಟಿಐ): 'ಚೆಸ್‌ನ ಮೆಸ್ಸಿ' ಎಂದೇ ಹೆಸರಾಗಿರುವ ಅರ್ಜೆಂಟೀನಾದ ಬಾಲಪ್ರತಿಭೆ ಫೌಸ್ಟಿನೊ ಒರೊ, ಚೆಸ್ ವಿಶ್ವಕಪ್‌ನ ಎರಡನೇ ಸುತ್ತಿನಲ್ಲೂ ಗಮನ ಸೆಳೆದಿದ್ದಾನೆ. ಮಂಗಳವಾರ ನಡೆದ ಮೊದಲ ಕ್ಲಾಸಿಕಲ್ ಆಟದಲ್ಲಿ 12 ವರ್ಷದ ಈ ಹುಡುಗನೆದುರು, ಭಾರತದ ಅನುಭವಿ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಸಂತೋಷ್ ಗುಜರಾತಿ ಡ್ರಾ ಮಾಡಿಕೊಳ್ಳಬೇಕಾಯಿತು.

ಮೂರನೇ ಶ್ರೇಯಾಂಕದ ಪ್ರಜ್ಞಾನಂದ ಮತ್ತು ಅಗ್ರ ಶ್ರೇಯಾಂಕದ ತಮ್ಮ ತಮ್ಮ ಪಂದ್ಯಗಳನ್ನು ಡ್ರಾ ಮಾಡಿಕೊಂಡರೆ, ಎರಡನೇ ಶ್ರೇಯಾಂಕದ ಅರ್ಜುನ್ ಇರಿಗೇಶಿ ಇನ್ನೊಂದು ಪಂದ್ಯದಲ್ಲಿ ಬಲ್ಗೇರಿಯಾದ ಪೆಟ್ರೋವ್ ಮಾರ್ಟಿನ್ ವಿರುದ್ಧ ಗೆಲುವು ಸಾಧಿಸಿ ಎರಡನೇ ಸುತ್ತಿನಲ್ಲಿ ಉತ್ತಮ ಆರಂಭ ಪಡೆದರು.

ಅಸಾಧಾರಣ ಪ್ರತಿಭೆಯಿಂದಾಗಿ ಒರೊನನ್ನು ಚೆಸ್ ಆಟದಲ್ಲಿ, ಫುಟ್‌ಬಾಲ್ ದಿಗ್ಗಜ ಲಯೊನೆಲ್ ಮೆಸ್ಸಿಗೆ ಹೋಲಿಸಲಾಗುತ್ತಿದೆ. ಮೊದಲ ಸುತ್ತಿನಲ್ಲಿ ತನಗಿಂತ ಮೇಲಿನ ಕ್ರಮಾಂಕದ ಆಂಟೆ ಬರ್ಕಿಚ್ (ಕ್ರೊವೇಷ್ಯಾ) ಅವರನ್ನು ಮಣಿಸಿದ್ದ ಈ ಹುಡುಗ ಕಪ್ಪು ಕಾಯಿಗಳಲ್ಲಿ ಆಡಿ ಮತ್ತೊಂದು ಸ್ಫೂರ್ತಿಯುತ ಆಟದ ಪ್ರದರ್ಶನ ನೀಡಿದ. 28 ನಡೆಗಳ ನಂತರ ಇಬ್ಬರೂ 'ಡ್ರಾ'ಕ್ಕೆ ಒಪ್ಪಿದರು.

ವಿಶ್ವ ಚಾಂಪಿಯನ್ ಗುಕೇಶ್, ಕಜಕಸ್ತಾನದ ನೊಗೆರ್‌ಬೆಕ್ ಕಝಿಬೆಕ್ ಎದುರು ಪಾಯಿಂಟ್ ಹಂಚಿಕೊಂಡರೆ, ಪ್ರಜ್ಞಾನಂದ ಅವರು ಆಸ್ಟ್ರೇಲಿಯಾದ ಕೆ.ತೆಮೂರ್ ಜೊತೆ ಡ್ರಾ ಮಾಡಿಕೊಂಡರು. ಬುಧವಾರ ಮರು ಆಟದಲ್ಲಿ ಗುಜರಾತಿ ಅವರು ಕಪ್ಪು ಕಾಯಿಗಳಲ್ಲಿ ಆಡಲಿದ್ದಾರೆ. ಆ ಆಟವೂ ಡ್ರಾ ಆದಲ್ಲಿ ಗುರುವಾರ ಅಲ್ಪಾವಧಿಯ ಟೈಬ್ರೇಕರ್ ಆಟಗಳಿಂದ ವಿಜೇತರ ನಿರ್ಧಾರ ಆಗಲಿದೆ. 2026ರ ಕ್ಯಾಂಡಿಡೇಟ್ಸ್‌ಗೆ ಆಯ್ಕೆಯಾಗಲು ವಿದಿತ್‌ಗೆ ಈ ಟೂರ್ನಿ ಕೊನೆಯ ಅವಕಾಶ.

ಅರೋನಿಯನ್‌ಗೆ ಜಯ: ಅನುಭವಿ ಲೆವೊನ್ ಅರೋನಿಯನ್ (ಅಮೆರಿಕ) ಅವರು ಯುವ ಐಎಂ ಅರಣ್ಯಕ್ ಘೋಷ್ ಅವರನ್ನು ಸೋಲಿಸಿ ಉತ್ತಮ ಆರಂಭ ಮಾಡಿದರು. ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರು ಭಾರತದ ಅನುಭವಿ ಸೂರ್ಯಶೇಖರ್ ಗಂಗೂಲಿ ಅವರನ್ನು ಮೊದಲ ಆಟದಲ್ಲಿ ಸೋಲಿಸಿದರು. ಎಸ್.ಎಲ್.ನಾರಾಯಣನ್, ಇಂಗ್ಲೆಂಡ್‌ನ ನಿಕಿತಾ ವಿಟಿಯುಗೊವ್ ಅವರ ಜೊತೆ ಮೊದಲ ಆಟವನ್ನು ಡ್ರಾ ಮಾಡಿಕೊಂಡರು.

ಭಾರತದ ದೀಪ್ತಾಯನ ಘೋಷ್, ಫಿಡೆ ಪ್ರತಿನಿಧಿಸುತ್ತಿರುವ ರಷ್ಯಾದ ಇಯಾನ್ ನಿಪೊಮ್‌ನಿಷಿ ಜೊತೆ ಡ್ರಾ ಮಾಡಿಕೊಂಡರು. ಭಾರತದ ಆಟಗಾರರ ವ್ಯವಹಾರವಾಗಿದ್ದ ಪಂದ್ಯದಲ್ಲಿ ಅರವಿಂದ ಚಿದಂಬರಂ ಮತ್ತು ಕಾರ್ತಿಕ್ ವೆಂಕಟರಾಮನ್ ಡ್ರಾ ಮಾಡಿಕೊಂಡರು. ಭಾರತದ ವಿ.ಪ್ರಣವ್, ನಾರ್ವೆಯ ತರಿ ಆರ್ಯನ್ ವಿರುದ್ಧ ಗೆಲುವು ಪಡೆದರು. ಅರ್ಮೇನಿಯಾದ ರೋಬರ್ಟ್ ಹೊವ್ಹನೀಸಿಯನ್, ಭಾರತದ ರೋನಕ್ ಸಾಧ್ವಾನಿ ಜೊತೆ ಡ್ರಾಕ್ಕೆ ಒಪ್ಪಿದರು. ಅನಿಶ್ ಗಿರಿ, ಬೋಸ್ನಿಯಾ–ಹರ್ಜಗೋವಿನಾದ ಮಕ್ಸಿಮೊವಿಕ್ ಬೊಯಾನ್ ಜೊತೆ ಡ್ರಾಕ್ಕೆ ಸಹಿ ಮಾಡಿದ್ದೂ ಗಮನ ಸೆಳೆಯಿತು.


ಕ್ರೀಡಾ ಸಾಮಗ್ರಿ ಹಸ್ತಾಂತರ




ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಆರ್ಥಿಕ ನೆರವಿನಿಂದ ಖರೀದಿಸಿರುವ ಕಯಾಕಿಂಗ್ ಮತ್ತು ಕೆನೋಯಿಂಗ್ ಕ್ರೀಡಾ ಸಾಮಗ್ರಿಗಳನ್ನು ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್ ಅವರು ಮಂಗಳವಾರ ಬೆಂಗಳೂರಿನಲ್ಲಿ ಕರ್ನಾಟಕ ಕಯಾಕಿಂಗ್ ಮತ್ತು ಕೆನೋಯಿಂಗ್ ಸಂಸ್ಥೆಗೆ ಹಸ್ತಾಂತರಿಸಿದರು

ಆಟದ ಘನತೆಗೆ ಧಕ್ಕೆ: ಸೂರ್ಯಕುಮಾರ್‌ಗೆ ದಂಡ

ರವೂಫ್‌ಗೆ ಎರಡು ಪಂದ್ಯ ನಿಷೇಧ



ರವೂಫ್



ಸೂರ್ಯ

ದುಬೈ (ಪಿಟಿಐ): ಸೆಪ್ಟೆಂಬರ್‌ನಲ್ಲಿ ನಡೆದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಪಂದ್ಯದ ವೇಳೆ ಆಟದ ಘನತೆಗೆ ಧಕ್ಕೆ ತಂದಿರುವುದಕ್ಕೆ ಭಾರತ ಟಿ20 ತಂಡದ ನಾಯಕ ಸೂರ್ಯ ಕುಮಾರ್ ಯಾದವ್ ಮತ್ತು ಪಾಕಿಸ್ತಾನ ತಂಡದ ವೇಗಿ ಹ್ಯಾರಿಸ್ ರವೂಫ್ ಅವರಿಗೆ ಮಂಗಳವಾರ ಐಸಿಸಿ ದಂಡ ವಿಧಿಸಿದೆ.

ಟೂರ್ನಿ ವೇಳೆ ನಾಲ್ಕನೇ ಡಿಮೆರಿಟ್ ಪಾಯಿಂಟ್ ಪಡೆದ ಕಾರಣಕ್ಕೆ ರವೂಫ್ ಅವರಿಗೆ ಎರಡು ಏಕದಿನ ಪಂದ್ಯಗಳಿಗೆ ನಿಷೇಧವನ್ನೂ ಹೇರಲಾಗಿದೆ.

ಭಾರತ ವಿರುದ್ಧ ಎರಡು ಪ್ರತ್ಯೇಕ ಪಂದ್ಯಗಳಲ್ಲಿ ಅನುಚಿತ ವರ್ತನೆ ತೋರಿದ್ದಕ್ಕೆ ರವೂಫ್ ಅವರಿಗೆ ಪಂದ್ಯ ಸಂಭಾವನೆಯ ಶೇ 30ರಷ್ಟು ದಂಡ ವಿಧಿಸಲಾಗಿತ್ತು. ಹೀಗಾಗಿ ಅವರು ಮಂಗಳವಾರ ಆರಂಭವಾದ ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಆಡಲಾಗಲಿಲ್ಲ. ನ. 6ರಂದು ಎರಡನೇ ಪಂದ್ಯವನ್ನೂ ಅವರು ಕಳೆದುಕೊಳ್ಳಲಿದ್ದಾರೆ.

ಭಾರತ ಸೇನೆಯನ್ನು ಬೆಂಬಲಿಸಿ ಅದರ ಜೊತೆ ನಿಲ್ಲುವುದಾಗಿ ಸೆ. 14ರ ಪಂದ್ಯದ ವೇಳೆ ಹೇಳಿದ್ದ ಸೂರ್ಯ ಅವರಿಗೆ ಪಂದ್ಯ ಸಂಭಾವನೆಯ ಶೇ 30ರಷ್ಟು ದಂಡ ವಿಧಿಸಲಾಗಿತ್ತು.

ರವೂಫ್ ಅವರನ್ನು ಯಾರ್ಕರ್‌ನಲ್ಲಿ ಬೌಲ್ಡ್ ಮಾಡಿದ ಮೇಲೆ ವಿಮಾನ ಹೊಡೆದುರುಳಿಸಿದ ರೀತಿ ಕೈಯ್ಯಲ್ಲಿ ಸಂಜ್ಞೆ ಮಾಡಿದ್ದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೂ ಒಂದು ಡಿಮೆರಿಟ್ ಪಾಯಿಂಟ್ ವಿಧಿಸಲಾಗಿದೆ.

ಸೆ.14ರ ಮತ್ತು ಸೆ. 28ರ ಪಂದ್ಯದ ವೇಳೆ ರವೂಫ್, ವಿಮಾನ ಬೀಳಿಸಿದ ರೀತಿ ಸಂಜ್ಞೆ ಪ್ರದರ್ಶಿಸಿ ಬೌಂಡರಿ ಬಳಿಯ ಭಾರತದ ಅಭಿಮಾನಿಗಳನ್ನು ಪ್ರಚೋದಿಸಿದ್ದರು. ಇದಕ್ಕಾಗಿ ಅವರಿಗೆ ಡಿಮೆರಿಟ್ ಪಾಯಿಂಟ್ ವಿಧಿಸಲಾಗಿದೆ.

ಪಾಕ್ ಬ್ಯಾಟರ್ ಸಾಹಿಬ್‌ಝಾದಾ ಫರ್ಹಾನ್ ಅವರಿಗೂ ಒಂದು ಡಿಮೆರಿಟ್ ಪಾಯಿಂಟ್ ವಿಧಿಸಲಾಗಿದೆ. ಅರ್ಧ ಶತಕ ಬಾರಿಸಿದ ಬಳಿಕ ಅವರು ಬ್ಯಾಟನ್ನು ಗನ್‌ನಿಂದ ಗುಂಡುಹಾರಿಸುವ ರೀತಿ ಹಿಡಿದು ಸಂಭ್ರಮಿಸಿದ್ದರು.

ಜಾಲತಾಣದ ತುಣುಕಿನಲ್ಲಿ ಅರ್ಷದೀಪ್ ಸಿಂಗ್ ಅವರು ಪಾಕಿಸ್ತಾನ ಪ್ರೇಕ್ಷಕನನ್ನು ಅಣಕಿಸುವ ದೃಶ್ಯಗಳಿದ್ದವು. ಆದರೆ ಅವರು ದಂಡದಿಂದ ಬಚಾವಾಗಿದ್ದಾರೆ.

ಐಸಿಸಿ ಸಭೆಗೆ ನಕ್ವಿ ಗೈರು?



ಕರಾಚಿ (ಪಿಟಿಐ): ಏಷ್ಯಾ ಕಪ್ ಟ್ರೋಫಿಯನ್ನು ಭಾರತ ತಂಡಕ್ಕೆ ಹಸ್ತಾಂತರಿಸದ ಬಗ್ಗೆ ಆಕ್ರೋಶಗೊಂಡಿರುವ ಬಿಸಿಸಿಐ ಮಂಗಳವಾರ ಆರಂಭಗೊಂಡ ಐಸಿಸಿ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಲು ಸಿದ್ಧತೆ ನಡೆಸಿದೆ. ಹೀಗಾಗಿ, ಏಷ್ಯಾ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥ ಮೊಹ್ಸಿನ್ ನಕ್ವಿ ಅವರು ಮುಜುಗರದಿಂದ ಪಾರಾಗಲು ಈ ಸಭೆಗೆ ಗೈರಾಗಲಿದ್ದಾರೆ ಎನ್ನಲಾಗುತ್ತಿದೆ.

ಪಾಕಿಸ್ತಾನದ ಗೃಹ ಸಚಿವರಾಗಿರುವ ನಕ್ವಿ ಅವರಿಗೆ ದೇಶದ ಆಂತರಿಕ ರಾಜಕೀಯ ಬೆಳವಣಿಗೆ ಸಹ, ಈ ಸಭೆಯಲ್ಲಿ ಭಾಗವಹಿಸಲು ತಡೆಯಾಗಬಹುದು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಮೂಲಗಳು ತಿಳಿಸಿವೆ. ಆದರ ಈ ರಾಜಕೀಯ ಬೆಳವಣಿಗೆಯ ಏನೆಂಬ ಬಗ್ಗೆ ಪಿಸಿಸಿ ಮೂಲ ನಿರ್ದಿಷ್ಟವಾಗಿ ತಿಳಿಸಿಲ್ಲ.

ಜಯ್ ಶಾ ಅವರು ಐಸಿಸಿ ಮುಖ್ಯಸ್ಥರಾಗಿ 2024ರ ಡಿಸೆಂಬರ್‌ನಲ್ಲಿ ಆಯ್ಕೆಯಾದ ನಂತರ ನಡೆದ ಯಾವುದೇ ಸಭೆಗಳಿಗೂ ನಕ್ವಿ ಅವರು ಹಾಜರಾಗಿಲ್ಲ.

'ಪಿಸಿಬಿಯ ಕಾರ್ಯನಿರ್ವಾಹಕ ಅಧಿಕಾರಿ ಸುಮೇರ್ ಸಯ್ಯದ್ ಅವರು ನಕ್ವಿ ಅವರ ಪರವಾಗಿ ಸಭೆಯಲ್ಲಿ ಹಾಜರಾಗುವ ಸಾಧ್ಯತೆ ಇದೆ.

ದುಬೈನಲ್ಲಿ ಕಳೆದ ಸೆಪ್ಟೆಂಬರ್ 28ರಂದು ನಡೆದಿದ್ದ ಫೈನಲ್ ಪಂದ್ಯದಲ್ಲಿ ಭಾರತವು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಐದು ವಿಕೆಟ್‌ಗಳಿಂದ ಸೋಲಿಸಿ ಏಷ್ಯಾ ಕಪ್ ಗೆದ್ದಿತ್ತು. ಆದರೆ ಮೊಹ್ಸಿನ್ ನಕ್ವಿ ಅವರಿಂದ ಟ್ರೋಫಿ ಪಡೆಯಲು ಭಾರತ ನಿರಾಕರಿಸಿತ್ತು. ಟ್ರೋಫಿ ಸದ್ಯ ದುಬೈನ ಎಸಿಸಿ ಕೇಂದ್ರ ಕಚೇರಿಯಲ್ಲಿದ್ದು ಕೊಠಡಿಗೆ ಬೀಗಹಾಕಲಾಗಿದೆ.

ಮಹಿಳೆಯರ ಏಕದಿನ ರ‍್ಯಾಂಕಿಂಗ್ ಅಗ್ರಸ್ಥಾನ ಕಳೆದುಕೊಂಡ ಮಂದಾನ



ಜೆಮಿಮಾ ರಾಡ್ರಿಗಸ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಳೆದುಕೊಂಡಿದ್ದಾರೆ. ಜೆಮಿಮಾ ರಾಡ್ರಿಗಸ್ ಅವರು ಅಗ್ರ ಹತ್ತರಲ್ಲಿ ಸ್ಥಾನ ಪಡೆದಿದ್ದಾರೆ.

ಮಹಿಳಾ ಏಕದಿನ ವಿಶ್ವಕಪ್‌ನ ಸೆಮಿಫೈನಲ್ ಮತ್ತು ಫೈನಲ್‌ನಲ್ಲಿ ಅಮೋಘ ಶತಕ ದಾಖಲಿಸಿದ್ದ ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೋಲ್ವಾರ್ಟ್ ಎರಡು ಸ್ಥಾನಗಳ ಬಡ್ತಿ ಪಡೆದು, ಮಂದಾನ ಅವರನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ್ದಾರೆ. ಟೂರ್ನಿಯಲ್ಲಿ ದಾಖಲೆಯ 571 ರನ್ ಗಳಿಸಿದ ವೋಲ್ವಾರ್ಟ್ ಅವರು ವೃತ್ತಿಜೀವನದಲ್ಲೇ ಗರಿಷ್ಠ ರೇಟಿಂಗ್ (814) ಸಂಪಾದಿಸಿದ್ದಾರೆ. ಮಂದಾನ ಎರಡನೇ ಸ್ಥಾನ ಸ್ಥಾನಕ್ಕೆ ಸರಿದಿದ್ದಾರೆ.

ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಅಜೇಯ ಶತಕ ದಾಖಲಿಸಿದ್ದ ಜೆಮಿಮಾ ಒಂಬತ್ತು ಸ್ಥಾನಗಳ ಬಡ್ತಿ ಪಡೆದು 10ನೇ ಸ್ಥಾನಕ್ಕೆ ಜಿಗಿದಿದ್ದಾರೆ. ನಾಯಕಿ ಹರ್ಮನ್‌ಪ್ರೀತ್ ಕೌರ್ ನಾಲ್ಕು ಸ್ಥಾನಗಳ ಬಡ್ತಿಯೊಂದಿಗೆ 14ನೇ ಸ್ಥಾನದಲ್ಲಿದ್ದಾರೆ.

ಬೌಲರ್‌ಗಳ ರ‍್ಯಾಂಕಿಂಗ್‌ನಲ್ಲಿ ಇಂಗ್ಲೆಂಡ್‌ನ ಸೋಫಿ ಎಕ್ಲೆಸ್ಟೋನ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಭಾರತದ ದೀಪ್ತಿ ಶರ್ಮಾ ಐದನೇ ಸ್ಥಾನದಲ್ಲಿದ್ದಾರೆ.

ಐಸಿಸಿ ತಂಡದಲ್ಲಿ ಭಾರತದ ಮೂವರು

ದುಬೈ (ಪಿಟಿಐ): ಭಾರತ ತಂಡದ ಸ್ಮೃತಿ ಮಂದಾನ, ಜೆಮಿಮಾ ರಾಡ್ರಿಗಸ್ ಮತ್ತು ದೀಪ್ತಿ ಶರ್ಮಾ ಅವರು ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಭಾರತದ ತಂಡದ ಜಯದಲ್ಲಿ ಈ ಮೂವರೂ ಉತ್ತಮ ಕಾಣಿಕೆ ನೀಡಿದ್ದಾರೆ. ಆದ್ದರಿಂದ ಅವರನ್ನು ತಂಡಕ್ಕೆ ಪರಿಗಣಿಸಲಾಗಿದೆ. ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ ತಂಡದ ಲಾರಾ ವೊಲ್ವಾರ್ಟ್ ಅವರನ್ನು ಈ ತಂಡಕ್ಕೆ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ. ಪಾಕಿಸ್ತಾನದ ಸಿದ್ರಾ ನವಾಜ್ ಅವರನ್ನು ವಿಕೆಟ್‌ಕೀಪರ್ ಆಗಿ ಆಯ್ಕೆ ಮಾಡಲಾಗಿದೆ.

ತಂಡ: ಲಾರಾ ವೊಲ್ವಾರ್ಟ್ (ನಾಯಕಿ/ದಕ್ಷಿಣ ಆಫ್ರಿಕಾ), ಸ್ಮೃತಿ ಮಂದಾನ (ಭಾರತ), ಜೆಮಿಮಾ ರಾಡ್ರಿಗಸ್ (ಭಾರತ), ಮರೈಝಾನ್ ಕಾಪ್ (ದಕ್ಷಿಣ ಆಫ್ರಿಕಾ), ಆ್ಯಷ್ಲೆ ಗಾರ್ಡನರ್ (ಆಸ್ಟ್ರೇಲಿಯಾ), ದೀಪ್ತಿ ಶರ್ಮಾ (ಭಾರತ), ಅನಾಬೆಲ್ ಸದರ್‌ಲೆಂಡ್ (ಆಸ್ಟ್ರೇಲಿಯಾ), ನದೀನ್ ಡಿ ಕ್ಲರ್ಕ್ (ದಕ್ಷಿಣ ಆಫ್ರಿಕಾ), ಸಿದ್ರಾ ನವಾಜ್ (ವಿಕೆಟ್‌ಕೀಪರ್/ ಪಾಕಿಸ್ತಾನ), ಅಲನಾ ಕಿಂಗ್ (ಆಸ್ಟ್ರೇಲಿಯಾ), ಸೋಫಿ ಎಕ್ಲೆಸ್ಟೋನ್ (ಇಂಗ್ಲೆಂಡ್), ನ್ಯಾಟ್ ಶಿವರ್ ಬ್ರಂಟ್ (ಇಂಗ್ಲೆಂಡ್/12ನೇ ಆಟಗಾರ್ತಿ).



ದೀಪ್ತಿ ಶರ್ಮಾ ಮತ್ತು ಸ್ಮೃತಿ ಮಂದಾನ

ಪ್ರಧಾನಿ ಭೇಟಿ ಇಂದು (ನವದೆಹಲಿ ವರದಿ): ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿಯರು ಬುಧವಾರ ನರೇಂದ್ರ ಮೋದಿ ಅವರನ್ನು ಭೇಟಿಯಾಗಲಿದ್ದಾರೆ. ತಂಡದ ಸದಸ್ಯೆಯರು ಮಂಗಳವಾರ ನವದೆಹಲಿಗೆ ಆಗಮಿಸಿದ್ದಾರೆ.

ಭಾನುವಾರ ನವಿ ಮುಂಬೈನಲ್ಲಿ ನಡೆದಿದ್ದ ಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಬಳಗವು ಜಯಿಸಿ ಪ್ರಶಸ್ತಿ ಗಳಿಸಿತ್ತು.

ರಾಜ್ಯ ಮಿನಿ ಗೇಮ್ಸ್: ವಿಕ್ರಂಗೆ ಸ್ವರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ವಿಕ್ರಂ ಶಿಂದೆ ವಿ. ಅವರು 'ಕರ್ನಾಟಕ ಮಿನಿ ಗೇಮ್ಸ್'ನ 42 ಕೆ.ಜಿ.ಯೊಳಗಿನ ಬಾಲಕರ ವಿಭಾಗದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮಂಗಳವಾರ ಸ್ವರ್ಣ ಜಯಿಸಿದರು.

ಅವರು ಸ್ನ್ಯಾಚ್‌ನಲ್ಲಿ 40 ಕೆ.ಜಿ. ಹಾಗೂ ಕ್ಲೀನ್ ಮತ್ತು ಜರ್ಕ್‌ನಲ್ಲಿ 50 ಕೆ.ಜಿ. (ಒಟ್ಟು 90 ಕೆ.ಜಿ.) ಭಾರ ಎತ್ತಿದರು. ದಕ್ಷಿಣ ಕನ್ನಡದ ದಿಶಾನ್ ಕೆ. (65 ಕೆ.ಜಿ.) ಹಾಗೂ ಚಿರಾಗ್ ಎನ್. (60 ಕೆ.ಜಿ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು.

48 ಕೆ.ಜಿ. ಯೊಳಗಿನವರ ಸ್ಪರ್ಧೆಯಲ್ಲಿ ವಿಜಯಪುರದ ಮಾನವ್ ನಿತಿನ್ ಪವಾರ್ ಹಾಗೂ 56 ಕೆ.ಜಿ. ಯೊಳಗಿನವರ ಸ್ಪರ್ಧೆಯಲ್ಲಿ ಪ್ರತೀಕ್ ಸಿಂಗ್ ಚಿನ್ನ ಜಯಿಸಿದರು. ದಕ್ಷಿಣ ಕನ್ನಡದ ರವಿ ವಿಶ್ವಕರ್ಮ ಹಾಗೂ ನಿಶಾನ್ ಸಿ.ಎಂ. ಕ್ರಮವಾಗಿ 60ಕೆ.ಜಿ. ಹಾಗೂ 65 ಕೆ.ಜಿ. ಯೊಳಗಿನವರ ವಿಭಾಗದಲ್ಲಿ ಚಿನ್ನ ಗೆದ್ದರು.

ಬಾಲಕರ 100 ಮೀ. ಓಟದಲ್ಲಿ ಮೈಸೂರಿನ ಆದರ್ಶ್ ಆರ್. (12.10ಸೆ.), ಹೈಜಂಪ್‌ನಲ್ಲಿ ಉಡುಪಿಯ ತೇಜಸ್ ಪೂಜಾರಿ (1.51ಮೀ.) ಹಾಗೂ ಶಾಟ್‌ಪಟ್ ಸ್ಪರ್ಧೆಯಲ್ಲಿ ಚಾಮರಾಜನಗರದ ಎಸ್.ಸುದರ್ಶನ್ (13.81ಮೀ.) ಸ್ವರ್ಣ ಗೆದ್ದರು.

ಬಾಲಕಿಯರ 100 ಮೀ. ಸ್ಪರ್ಧೆಯಲ್ಲಿ ದಕ್ಷಿಣ ಕನ್ನಡದ ಆದ್ವಿಕಾ ಕೆ.ಪಿ. ಅವರು 12.90ಸೆ. ಗಳಲ್ಲಿ ಗುರಿ ತಲುಪಿ, ಚಿನ್ನಕ್ಕೆ ಕೊರಳೊಡ್ಡಿದರು.

ಶಿವಮೊಗ್ಗದ ಅಥ್ಲೀಟ್ ಪದ್ಮಾವತಿ ಬಾಲಕಿಯರ ಹೈಜಂಪ್‌ನಲ್ಲಿ 1.40 ಮೀ. ಎತ್ತರ ಜಿಗಿದು ಸ್ವರ್ಣ ಗೆದ್ದುಕೊಂಡರು.

ಭಾರತ ಎ ತಂಡಕ್ಕೆ ಜೋಶಿ ಕೋಚ್



ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಎಡಗೈ ಸ್ಪಿನ್ನರ್ ಹಾಗೂ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಸ್ಪಿನ್ ವಿಭಾಗದ ಮುಖ್ಯಸ್ಥ ಸುನಿಲ್ ಜೋಶಿ ಅವರನ್ನು ಭಾರತ ಎ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

ಇದೇ 14ರಿಂದ ದೋಹಾದಲ್ಲಿ ನಡೆಯಲಿರುವ ರೈಸಿಂಗ್ ಸ್ಟಾರ್ ಏಷ್ಯಾ ಕಪ್ ಟೂರ್ನಿಯಲ್ಲಿ ಈ ತಂಡವು ಆಡಲಿದೆ. ತಂಡವನ್ನು ಜಿತೇಶ್ ಶರ್ಮಾ ಮುನ್ನಡೆಸಲಿದ್ದಾರೆ. ತಂಡದಲ್ಲಿ ಐಪಿಎಲ್ ತಾರೆ ವೈಭವ್ ಸೂರ್ಯವಂಶಿ, ಪ್ರಿಯಾಂಶ್ ಆರ್ಯ, ನಮನ್ ಧೀರ್, ನೆಹಲ್ ವದೇರಾ ಮತ್ತು ರಮಣದೀಪ್ ಸಿಂಗ್ ಅವರೂ ಇದ್ದಾರೆ.

ಭಾರತ ಎ , 19 ವರ್ಷದೊಳಗಿನವರ ಭಾರತ ತಂಡ ಹಾಗೂ ರೈಸಿಂಗ್ ಸ್ಟಾರ್ಸ್ ತಂಡಗಳಿಗೆ ಬಿಸಿಸಿಐ –ಸಿಒಇ ಕೋಚ್‌ಗಳನ್ನೇ ನೇಮಕ ಮಾಡಲಾಗುತ್ತಿದೆ. ಸುನಿಲ್ ಜೋಶಿ ಅವರು ಈಚೆಗೆ ದಕ್ಷಿಣ ಆಫ್ರಿಕಾ ಎ ತಂಡದ ಎದುರಿಗಿನ 'ಟೆಸ್ಟ್' ನಲ್ಲಿ ಆಡಿದ ಭಾರತ 'ಎ' ತಂಡಕ್ಕೂ ಮುಖ್ಯ ಕೋಚ್ ಆಗಿದ್ದರು.

ಬ್ಯಾಸ್ಕೆಟ್‌ಬಾಲ್: ರಾಮಯ್ಯ ತಂಡ ಚಾಂಪಿಯನ್

ಬೆಂಗಳೂರು: ನಗರದ ರಾಮಯ್ಯ ತಾಂತ್ರಿಕ ಕಾಲೇಜಿನ ಪುರುಷರ ತಂಡವು ಮಂಗಳವಾರ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದೆ.

ಕೆ.ವಿ.ಪುರಂನ ಕೇಂಬ್ರಿಡ್ಜ್ ತಾಂತ್ರಿಕ ಕಾಲೇಜಿನ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಫೈನಲ್‌ನಲ್ಲಿ ರಾಮಯ್ಯ ತಂಡವು 50–44ರಿಂದ ನ್ಯೂ ಹಾರಿಜನ್ ಕಾಲೇಜು ತಂಡವನ್ನು ಮಣಿಸಿತು. ರಾಮಯ್ಯ ತಂಡದ ಪರ ಕನಿಷ್ಕ 16 ಮತ್ತು ಆದರ್ಶ್ 14 ಅಂಕ ಗಳಿಸಿದರು. ಹಾರಿಜನ್ ತಂಡದ ಪರ ಆಕಾಶ್ 12 ಮತ್ತು ಸಾಹಿಲ್ 10 ಪಾಯಿಂಟ್ಸ್ ಕಲೆಹಾಕಿದರು.

2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಮೀರಾಬಾಯಿ ತೂಕ ವಿಭಾಗಕ್ಕೆ ಕೊಕ್

ನವದೆಹಲಿ (ಪಿಟಿಐ): ಭಾರತದ ವೇಟ್‌ಲಿಫ್ಟಿಂಗ್ ತಾರೆ ಮೀರಾಬಾಯಿ ಚಾನು ಅವರ ತೂಕ ವಿಭಾಗವನ್ನು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ತೆಗೆದುಹಾಕಲಾಗಿದೆ. ಅವರು ಮುಂದಿನ ಕ್ರೀಡೆಗಳಲ್ಲಿ 53 ಕೆ.ಜಿ. ತೂಕ ವಿಭಾಗದಲ್ಲಿ ಸ್ಪರ್ಧಿಸಬೇಕಾಗುತ್ತದೆ.

31 ವರ್ಷ ವಯಸ್ಸಿನ ಚಾನು 2020ರ ಟೋಕಿಯೊ ಕ್ರೀಡೆಗಳ 49 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು. ಆದರೆ 2028ರ ಕ್ರೀಡೆಗಳ ವೇಟ್‌ಲಿಫ್ಟಿಂಗ್ ಸ್ಪರ್ಧೆಗಳು 53 ಕೆ.ಜಿ. ತೂಕ ವಿಭಾಗದಿಂದ ಆರಂಭವಾಗಲಿವೆ. ವೇಟ್‌ಲಿಫ್ಟಿಂಗ್‌ನಲ್ಲಿ ಒಟ್ಟು ಸ್ಪರ್ಧೆಗಳ ಸಂಖ್ಯೆಯನ್ನು 12ಕ್ಕೆ ಹೆಚ್ಚಿಸಲು ಅಂತರ ರಾಷ್ಟ್ರೀಯ ಒಲಿಂಪಿಕ್ ಸಮಿತಿ ನಿರ್ಧರಿಸಿದೆ.

53 ಕೆ.ಜಿ. ತೂಕ ವಿಭಾಗದಲ್ಲಿ ಸ್ಪರ್ಧಿಸುವುದರಿಂದ ಚಾನು ಅವರಿಗೆ ಅನುಕೂಲವಾಗಲಿದೆ. ಆದರೆ ಮಣಿಪುರದ ಸ್ಪರ್ಧಿಯು ಮುಂದಿನ ವರ್ಷದ ಏಷ್ಯನ್ ಗೇಮ್ಸ್‌ವರೆಗೆ ಈ ಹಿಂದಿನಂತೆ 49 ಕೆ.ಜಿ. ವಿಭಾಗದಲ್ಲೇ ಸ್ಪರ್ಧಿಸಲಿದ್ದಾರೆ ಎಂದು ರಾಷ್ಟ್ರೀಯ ಮುಖ್ಯ ಕೋಚ್ ವಿಜಯ್ ಶರ್ಮಾ ತಿಳಿಸಿದ್ದಾರೆ.



ಮೀರಾಬಾಯಿ ಚಾನು

ಪುರುಷರ ವಿಭಾಗ ಮತ್ತು ಮಹಿಳೆಯರ ವಿಭಾಗಗಳಲ್ಲಿ ತಲಾ ಆರು ತೂಕ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಈ ವರ್ಷ ಎರಡನೇ ಬಾರಿ ಅಂತರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಫೆಡರೇಷನ್ ತೂಕ ವಿಭಾಗಗಳಲ್ಲಿ ಬದಲಾವಣೆ ತಂದಿದೆ. ಈ ಹಿಂದಿನ ಪಟ್ಟಿಯ ಪ್ರಕಾರ ಅವರು 48 ಕೆ.ಜಿ. ವಿಭಾಗದಲ್ಲಿ (49 ಕೆ.ಜಿ. ತೆಗೆದುಹಾಕಿದ ಕಾರಣ) ಕಣಕ್ಕಿಳಿಯಲು ಯೋಚಿಸಿದ್ದರು.

48 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಲು ಆಗುತ್ತಿರುವ ದೈಹಿಕ ಸವಾಲುಗಳ ಬಗ್ಗೆ ಚಾನು ಹಲವು ಬಾರಿ ಮಾತನಾಡಿದ್ದರು. 'ಏಷ್ಯನ್ ಗೇಮ್ಸ್ ನಂತರ 53 ಕೆ.ಜಿ. ತೂಕ ವಿಭಾಗದಲ್ಲಿ ಸ್ಪರ್ಧಿಸಲು ಬೇಕಾದ ಪ್ರಕ್ರಿಯೆಗಳನ್ನು ಆರಂಭಿಸುತ್ತೇವೆ' ಎಂದು ಶರ್ಮಾ ಹೇಳಿದ್ದಾರೆ.

ಇದೇ 8, 9ರಂದು ನೆಟ್ಟಕಲ್ಲಪ್ಪ ಈಜು ಸ್ಪರ್ಧೆ: ಶ್ರೀಹರಿ ನಟರಾಜ್, ಧಿನಿಧಿ ದೇಸಿಂಗು ಪ್ರಮುಖ ಆಕರ್ಷಣೆ

ಸ್ಪರ್ಧಾ ಕಣದಲ್ಲಿ ಒಲಿಂಪಿಯನ್ ಈಜುಪಟುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖ್ಯಾತನಾಮ ಈಜುಪಟುಗಳು ಪೈಪೋಟಿ ನಡೆಸಲಿರುವ 'ನೆಟ್ಟಕಲ್ಲಪ್ಪ ಈಜು ಸ್ಪರ್ಧೆ'ಗೆ ವೇದಿಕೆ ಸಿದ್ಧವಾಗಿದೆ. ಈ ಪ್ರತಿಷ್ಠಿತ ಈಜು ಕೂಟವು ಇದೇ 8 ಮತ್ತು 9ರಂದು ನಡೆಯಲಿದೆ.

ದೇಶದ ವಿವಿಧೆಡೆಯಿಂದ 300 ಈಜುಪಟುಗಳು ಈ ಕೂಟದಲ್ಲಿ ಸ್ಪರ್ಧಿಸಲಿದ್ದಾರೆ. ಒಲಿಂಪಿಯನ್ ಈಜುಪಟುಗಳಾದ ಬೆಂಗಳೂರಿನ ಶ್ರೀಹರಿ ನಟರಾಜ್ ಮತ್ತು ದಿನಿಧಿ ದೇಸಿಂಗು ಪ್ರಮುಖ ಆಕರ್ಷಣೆಯಾಗಿದ್ದಾರೆ. ಅಂತರ ರಾಷ್ಟ್ರೀಯ ಮತ್ತು ದೇಶದ ಉದಯೋನ್ಮುಖ ಈಜುಪಟುಗಳು ಕಣಕ್ಕಿಳಿಯಲಿದ್ದಾರೆ.

'ಈ ಬಾರಿ ಒಟ್ಟು ಪ್ರಶಸ್ತಿ ಮೊತ್ತವನ್ನು ₹10.50 ಲಕ್ಷಕ್ಕೆ ಏರಿಸಲಾಗಿದೆ. ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಉತ್ತಮ ಸಾಧನೆ ಮಾಡುವವರಿಗೆ ಅತ್ಯಮೂಲ್ಯ ಈಜುಪಟು ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಯು ತಲಾ ₹25 ಸಾವಿರ ನಗದು ಬಹುಮಾನ ಹೊಂದಿದೆ' ಎಂದು ನೆಟ್ಟಕಲ್ಲಪ್ಪ ಈಜು ಕೇಂದ್ರ (ಎನ್‌ಎಸಿ) ಮುಖ್ಯಸ್ಥ ವರುಣ್ ನಿಜಾವನ್ ಅವರು ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಈ ಕೂಟದ ಪ್ರಮುಖ ಆಕರ್ಷಣೆಯೆಂದರೆ ಸ್ಕಿನ್ಸ್ ವಿಭಾಗದ ಸ್ಪರ್ಧೆಗಳು. ಅತ್ಯಂತ ರೋಚಕವಾದ ಸ್ಪರ್ಧೆ ಇದಾಗಿದೆ. ಯುರೋಪ್, ಅಮೆರಿಕದಲ್ಲಿ ಇದು ಬಹಳ ಪ್ರಚಲಿತದಲ್ಲಿದೆ. ಭಾರತದಲ್ಲಿ ಸತತ ನಾಲ್ಕನೇ ವರ್ಷ ಈ ವಿಭಾಗದ ಸ್ಪರ್ಧೆ ನಡೆಸುತ್ತಿರುವುದು ಹೆಮ್ಮೆಯ ಸಂಗತಿ. ಇದು ನಾಕೌಟ್ ಮಾದರಿಯ ಸ್ಪರ್ಧೆಯಾಗಿದ್ದು, ಈಜುಪಟುಗಳ ಸಂಪೂರ್ಣ ಸಾಮರ್ಥ್ಯವನ್ನು ಒರೆಗೆ ಹಚ್ಚಲಿದೆ' ಎಂದೂ ವರುಣ್ ವಿವರಿಸಿದರು.



ನೆಟ್ಟಕಲ್ಲಪ್ಪ ಈಜು ಕೇಂದ್ರದ ಕಾರ್ಯನಿರ್ವಾಹಕ ವ್ಯವಸ್ಥಾಪಕ ವಿನೋದ್ ಕುಮಾರ್, ಲೀಡ್ ಕೋಚ್ ಶರತ್ ಚಂದ್ರ, ಮುಖ್ಯಸ್ಥ ವರುಣ್ ನಿಜಾವನ್, ಕೆ.ಎನ್.ಗುರುಸ್ವಾಮಿ ಟ್ರಸ್ಟ್‌ನ ಅನಿಲ್ ನಾಯರ್, ಲೀಡ್ ಕೋಚ್ ಅಂಕುಶ್ ಕೆ. ಹಾಗೂ ಹಿರಿಯ ಮೇಲ್ವಿಚಾರಕ ಜಿಜೇಶ್ ಜಯನ್ ಅವರು ಸುದ್ದಿಗೋಷ್ಠಿಯಲ್ಲಿ ಪೋಸ್ಟರ್ ಅನಾವರಣ ಮಾಡಿದರು ಪ್ರಜಾವಾಣಿ ಚಿತ್ರ

ಪದ್ಮನಾಭನಗರದಲ್ಲಿರುವ 'ಕೆ.ಎ. ನೆಟ್ಟಕಲ್ಲಪ್ಪ ಈಜು ಕೇಂದ್ರ'ದಲ್ಲಿ ಸ್ಪರ್ಧೆಗಳು ನಡೆಯಲಿವೆ. ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಅಂತರ ರಾಷ್ಟ್ರೀಯ ಈಜು ಕೋಚ್ ಪ್ರದೀಪ್‌ಕುಮಾರ್ ಅವರು 8ರಂದು ಸಂಜೆ 4.30ಕ್ಕೆ ಕೂಟಕ್ಕೆ ಚಾಲನೆ ನೀಡಲಿದ್ದಾರೆ.

'ಅತ್ಯಾಧುನಿಕ ಹಾಗೂ ಸುಸಜ್ಜಿತ ಮೂಲ ಸೌಲಭ್ಯಗಳನ್ನು ಹೊಂದಿರುವ ಎನ್‌ಎಸಿನಲ್ಲಿ ಮೂರು ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಕೂಟವು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಗಮನ ಸೆಳೆದಿದೆ. ಮುಂದಿನ ಆವೃತ್ತಿಯ ಕೂಟವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಿ, ಈಶಾನ್ಯ ಏಷ್ಯಾ ರಾಷ್ಟ್ರಗಳ ಈಜುಪಟುಗಳನ್ನು ಆಹ್ವಾನಿಸುವ ಯೋಜನೆ ಇದೆ' ಎಂದು ವರುಣ್ ತಿಳಿಸಿದರು.

'ಟೈಮ್ ಟ್ರಯಲ್ಸ್ ಮಾದರಿಯ 100ಮೀ, 400 ಮೀ ವಿಭಾಗಗಳ ವಿಜೇತರಿಗೆ ₹8 ಸಾವಿರ (ಚಿನ್ನ), ₹6 ಸಾವಿರ (ಬೆಳ್ಳಿ) ಮತ್ತು ₹4 ಸಾವಿರ (ಕಂಚು) ನಗದು ಪ್ರಶಸ್ತಿ ನೀಡಲಾಗುವುದು. ಸ್ಕಿನ್ಸ್ ಫೈನಲ್ ತಲುಪಿದ ಎಲ್ಲರಿಗೂ ನಗದು ಪುರಸ್ಕಾರ ನೀಡಲಾಗುವುದು' ಎಂದು ವರುಣ್ ತಿಳಿಸಿದರು.

'ಈ ಸಲ ಶ್ರೀಹರಿ, ಧಿನಿಧಿ ಅವರಲ್ಲದೇ ಎಸ್. ದರ್ಶನ್, ಎಸ್. ದಕ್ಷಣ್, ರುಜುಲಾ, ಮಣಿಕಂಠ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಪ್ರಮುಖರು' ಎಂದು ಲೀಡ್ ಕೋಚ್ ಅಂಕುಶ್ ಕೆ. ತಿಳಿಸಿದರು.

ಎರಡೂ ದಿನವೂ ಬೆಳಿಗ್ಗೆ 10 ರಿಂದ ರಾತ್ರಿ 7ರವರೆಗೆ ಸ್ಪರ್ಧೆಗಳು ನಡೆಯಲಿವೆ.

ಹೆಚ್ಚಿನ ಮಾಹಿತಿಗೆ https://nac.org.inಗೆ ಭೇಟಿ ನೀಡಬಹುದು.

ಛತ್ತೀಸಗಢ ನೆರವಿಗೆ ರಾಹುಲ್

ಪ್ರಜಾವಾಣಿ ವಾರ್ತೆ

ಮೈಸೂರು: ರಾಹುಲ್ ಪ್ರಧಾನ್ (ಔಟಾಗದೆ 107 ರನ್, 217 ಎಸೆತ, 4x7, 6x1) ಅವರ ಸೊಗಸಾದ ಶತಕದ ಬಲದಿಂದ ಛತ್ತೀಸಗಢ ತಂಡವು, ಇಲ್ಲಿ ನಡೆಯುತ್ತಿರುವ ಕರ್ನಲ್ ಸಿ.ಕೆ. ನಾಯ್ಡು ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕದ ವಿರುದ್ಧ ಮಂಗಳವಾರ 364 ರನ್‌ಗಳ ಮುನ್ನಡೆ ಸಾಧಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆತಿಥೇಯ ತಂಡದ ಧನುಷ್ ಗೌಡ (30ಕ್ಕೆ 3) ಅವರ ದಾಳಿಗೆ ತತ್ತರಿಸಿದ ತಂಡಕ್ಕೆ ರಾಹುಲ್ ಆಸರೆಯಾದರು. ನಾಯಕ ದೀಪಕ್ ಯಾದವ್ (75 ರನ್, 130 ಎಸೆತ, 4x4) ಹಾಗೂ ಪ್ರಥಮ್ ಜಾಥಕ್ (43 ರನ್, 51 ಎಸೆತ, 4x2, 6x3) ಅವರೊಂದಿಗೆ ತಂಡಕ್ಕೆ ಬಲ ತುಂಬಿದರು.

ದೀಪಕ್ ಜೊತೆಗೆ 137 ರನ್ ಹಾಗೂ ಪ್ರಥಮ್ ಅವರ ಜೊತೆ 68 ರನ್ ಜೊತೆಯಾಟದಲ್ಲಿ ರಾಹುಲ್ ಪಾಲ್ಗೊಂಡರು.

ಮೂರನೇ ದಿನದಾಟದ ಅಂತ್ಯಕ್ಕೆ ಛತ್ತೀಸಗಢ ತಂಡವು ಎರಡನೇ ಇನಿಂಗ್ಸ್‌ನಲ್ಲಿ 94.5 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 273 ರನ್‌ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಛತ್ತೀಸಗಢ 303. ಕರ್ನಾಟಕ 212. 2ನೇ ಇನಿಂಗ್ಸ್: ಛತ್ತೀಸಗಢ 94.5 ಓವರ್‌ಗಳಲ್ಲಿ 7 ವಿಕೆಟ್‌ಗೆ 273 (ರಾಹುಲ್ ಪ್ರಧಾನ್ ಔಟಾಗದೆ 107 ರನ್, ಧನುಷ್ ಗೌಡ 30ಕ್ಕೆ3)